

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ

ಸಂಪುಟ ೧೨ ಸಂಚಿಕೆ ೧೩ ಏಪ್ರಿಲ್ ೧, ೧೯೯೦ ರೂ. ೧.೫೦

ಏಪ್ರಿಲ್ ೫ ರಂದು ರಾಜ್ಯಾದ್ಯಂತ ಪ್ರತಿಭಟನೆ

ಇತ್ತೀಚೆಗೆ ರಾಜ್ಯ ವಿಧಾನಮಂಡಲದಲ್ಲಿ ಮಂಡಿತವಾದ ರಾಜ್ಯ ಬಜೆಟ್ ಕಾಂಗ್ರೆ ಪಕ್ಷದ ಮೂಲಗುಣವನ್ನು ಬಯಲಿಗೆಳೆದಿದೆ. ಮಹಾನ್ ಶ್ರೀಮಂತರ ಲಾಭಕ್ಕಾಗಿ ಅವರಿಗೆ ಅನುಕೂಲಗಳನ್ನು ಕಲ್ಪಿಸುವುದಕ್ಕಾಗಿ ಬಡವರ ಮೇಲೆ ತೆರಿಗೆ ಭಾರವನ್ನು ಹೊರಿಸುವ ಸರ್ವಾಧಿಕಾರಿ ಧೋರಣೆಯಿಂದ ಜನಾಭಿಪ್ರಾಯಕ್ಕೆ ಜನರ ಸಂಕಷ್ಟಗಳಿಗೆ ನಿರ್ಲಕ್ಷದ ಧೋರಣೆಯನ್ನು ಬಯಲಿಗೆಳೆದಿದೆ ಎಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಟೀಕಿಸಿದೆ.

ಅದೇ ಸಮಯಕ್ಕೆ ಬಂದ ಕೇಂದ್ರ ಸರ್ಕಾರದ ಬಜೆಟ್, ರೈಲ್ವೆ ಬಜೆಟ್‌ಗಳು ರಾಜೀವಗಾಂಧಿಯವರ 'ಉದಾರೀಕರಣ' ನೀತಿಯಿಂದ, ವಿಶ್ವ ಬ್ಯಾಂಕಿನ ಒತ್ತಡಗಳಿಗೆ ಮಣಿಯುವ ನೀತಿಯಿಂದ ಹೊರಬರುವಲ್ಲಿ ಅರೆ ಮನಸ್ಸಿನ ಪ್ರಯತ್ನದಿಂದ ಜನರ ಅನೇಕ ಆಶೋತ್ತರಗಳು ಈಡೇರಿಸಿಲ್ಲ ಅಲ್ಲದೆ ಅವರ ಮೇಲೆ ಪೆಟ್ರೋಲ್‌ದರ ರೈಲ್ವೆ ಪ್ರಯಾಣ, ಸಾಗಣೆದರ ಇತ್ಯಾದಿಗಳ ಏರಿಕೆಯ ಭಾರ ಬಿದ್ದಿದೆ. ಏರಿಕೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕರೆ ನೀಡಿದೆ.

ಮಾರ್ಚ್ ೨೧ ಹಾಗೂ ೨೨ ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ರಾಜ್ಯ ಸಮಿತಿ ರಾಜ್ಯ ಸರ್ಕಾರದ ಜನವಿರೋಧಿ ಬಜೆಟ್ ವಿರುದ್ಧ ಪ್ರತಿಭಟಿಸಲು ಕೇಂದ್ರ ಸರ್ಕಾರ ರಾಜೀವ್‌ಗಾಂಧಿ ಸರ್ಕಾರದ ನೀತಿಗಳಿಂದ ಹೊರಬರಬೇಕೆಂದು, ತಾವು ಹೇರಿರುವ ಕರಭಾರ, ಬೆಲೆಭಾರವನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಲು 'ಏಪ್ರಿಲ್ ೫ರಂದು ರಾಜ್ಯಾದ್ಯಂತ ಪ್ರತಿಭಟನಾ ಮೆರವಣಿಗೆ, ಧರಣಿ, ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಕರೆ ನೀಡಿದೆ.

ರಾಜ್ಯ ಸಮಿತಿಯ ಸಭೆ ಕೈಗೊಂಡ ಇತರ ನಿರ್ಣಯಗಳನ್ನು ಮುಂದೆ ಕೊಡಲಾಗಿದೆ.

ನಮೀಬಿಯ ಸ್ವಾತಂತ್ರ- ವಿಶ್ವದ ಜನರೆಲ್ಲರಿಗೆ ಹರ್ಷ:

ಬ್ರಿಟೀಷರ ವಸಾಹತು ಪ್ರದೇಶವಾಗಿ ಅವರ ಶೋಷಣೆ, ದಬ್ಬಾಳಿಕೆಗೆ ತುತ್ತಾಗಿದ್ದ ಸ್ವಾತಂತ್ರ ಹೋರಾಟದ ಕಣಕ್ಕೆ ಧುಮುಕಿ ಅಪಾರ ಸಾವು ನೋವುಗಳಿಗೆ ತುತ್ತಾಗಿದ್ದ ನಮ್ಮ ದೇಶದ ದುಡಿಯುವ ಜನತೆ, ನಮಗಿಂತ ಧೀರ್ಘಕಾಲ ಅಮಾನುಷವಾದ ಶೋಷಣೆಗೆ ತುತ್ತಾಗಿದ್ದ ನಮೀಬಿಯದ ಜನತೆಯ ವಿಮೋಚನೆಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತದೆ. ಆಫ್ರಿಕಾದ ಬರ್ಬರ ಹಿಂಸೆ ಅವರ ಬೆನ್ನ ಹಿಂದೆ ಅಮೇರಿಕಾ, ಬ್ರಿಟನ್ ಮೊದಲಾದ ಸಾಮ್ರಾಜ್ಯ ಶಾಹಿಗಳ ವಿರುದ್ಧ ಧೀರ ಹೋರಾಟ ಮಾಡಿ ಪಡೆದ ಅವರ ಸ್ವಾತಂತ್ರ ಸಾಮ್ರಾಜ್ಯಶಾಹಿಗಳ ಹಿಡಿತದಿಂದ ವಿಮೋಚಿತವಾದ ಸ್ವತಂತ್ರ ಅಭಿವೃದ್ಧಿ ಪಥನಿರ್ಮಾಣಕ್ಕೆ ನಾಂದಿಯಾಗಲಿ ಎಂದು ಹಾರೈಸುತ್ತದೆ.

ರಾಜ್ಯದ ದುಡಿಯುವ ಜನತೆಯ ಪರವಾಗಿ ಸಿ.ಪಿ.ಐ.(ಎಂ) ರಾಜ್ಯಸಮಿತಿ ನಮೀಬಿಯಾದ ಜನತೆಗೆ ಅವರ ನೂತನ ಅಧ್ಯಕ್ಷ ಸ್ಯಾಮ್ ನುಜೋಮರವರಿಗೆ ಶುಭಾಶಯಗಳನ್ನು ಕೋರಿದೆ.

ಪೌರ ಚುನಾವಣೆಗಳಲ್ಲಿ ಹಾಸ್ಯಾಸ್ಪದ:

ನಗರಪಾಲಿಕೆ, ನಗರಸಭೆ ಹಾಗೂ ಪುರಸಭೆಗಳನ್ನು ನಡೆಸುವುದರಲ್ಲಿ ಕಾಂಗ್ರೆ ಸರ್ಕಾರ ಇಡೀ ದೇಶದ ಚುನಾವಣಾ ಇತಿಹಾಸ ಕಂಡು ಕೇಳರಿಯದ ಹಾಸ್ಯಾಸ್ಪದ ಗೊಂದಲವನ್ನು ಸೃಷ್ಟಿಸಿದೆ. ಘೋಷಿಸಿದ್ದ ಚುನಾವಣೆಗಳನ್ನು ಮುಂದೂಡುವುದು, ಮತ್ತೆ ಘೋಷಿಸುವುದು ಮತ್ತೆ ಮುಂದೂಡುವುದು ಇಂತಹ ಕ್ರಮಗಳಿಂದ ಜನತೆಯ ಅಪಹಾಸ್ಯಕ್ಕೆ ಗುರಿಯಾಗಿದೆ ಮಾತ್ರವಲ್ಲ ಇದೇ ಪೌರ ಚುನಾವಣೆಗಳ ಪ್ರಶ್ನಾರ್ಹವನ್ನಾಗಿ ಮಾಡಿದೆ. ಕಾಂಗ್ರೆ ಪಕ್ಷ ತನ್ನೊಳಗಿನ ಗುಂಪುಗಾರಿಕೆಯಿಂದಾಗಿ ರಾಜ್ಯ ಸರ್ಕಾರಿ ನೌಕರರ ವಿರುದ್ಧ ತನ್ನ ಅಧಿಕಾರಿ ಶಾಹಿ ಗತ್ತನ್ನು ಪ್ರದರ್ಶಿಸಲು ಉಂಟು ಮಾಡಿದಗೊಂದಲ ಪ್ರಜಾ ಸತ್ತಾತ್ಮಕ ಪ್ರಕ್ರಿಯೆಯ ಬಗ್ಗೆ ಕಾಂಗ್ರೆ ಪಕ್ಷದ ಅಸಡ್ಡೆಯಮನೋಭಾವದ ಹೆಗ್ಗುರುತಾಗಿದೆ ಎಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಖಂಡಿಸಿತು. ಈಗಲೂ ಯಾವಾಗ ಚುನಾವಣಾಗಳು ನಡೆಯಲಿವೆ ಎಂಬುದರ ಬಗ್ಗೆ ಜನರ ಮಧ್ಯೆ ಅನಿಶ್ಚಿತತೆ ಇದೆ ಎಂಬುದು ಇದಕ್ಕೆಲ್ಲಾ ಸಾಕ್ಷಿ.

ಪಾಟೀಲ್ ಸರ್ಕಾರದ ನೌಕರರ ವಿರೋಧಿ ಮನೋಭಾವ:

ಕಾಂಗ್ರೆ ಸರ್ಕಾರ ಅಧಿಕಾರ ವಹಿಸಿಕೊಂಡ ದಿನದಿಂದಲೇ ಒಂದಿಲ್ಲೊಂದು ರೀತಿಯಲ್ಲಿ ಆರಂಭವಾದ ನೌಕರ ವಿರೋಧಿ ಮನೋಭಾವ ರಾಜ್ಯ ಸರ್ಕಾರಿ ನೌಕರರ ಮುಷ್ಕರದ ಸಮಯದಲ್ಲಿ ಗರಿಷ್ಠ ಮಟ್ಟವನ್ನು ಮುಟ್ಟಿ ಅದೇ ಮಟ್ಟದಲ್ಲಿ ಮುಂದುವರೆದಿದೆ ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಜಿಲ್ಲಾ ಪರಿಷತ್ ನೇಮಿಸಿಕೊಂಡಿದ್ದ ಶಿಕ್ಷಕರ ಏಕಪಕ್ಷೀಯ ವಜಾ ಜಿಲ್ಲಾ ಪರಿಷತ್‌ಗಳಲ್ಲಿ ಐ.ಎ.ಎಸ್.ಅಧಿಕಾರಿಗಳ ಬಲವರ್ಧನೆ, ನೌಕರರ ರಾಜ್ಯ ವ್ಯಾಪ್ತಿ ಮುಷ್ಕರದ ಸಮಯದಲ್ಲಿ ಮುಷ್ಕರದ ಯಶಸ್ಸಿನ ಹಿಂದಿದ್ದ ಅವರ ಅತೃಪ್ತಿಯ ಆಳವನ್ನು ಮನಗಾಣದೆ ಪಾಳೆಯಗಾರಿಕೆಯ ಗತ್ತಿನಿಂದ ಅವರ ಮೇಲೆ ಮಾಡಿದ ಗದಾಪ್ರಹಾರ ಹಾಗೂ ಅವರ ಒಗ್ಗಟ್ಟನ್ನು ಒಡೆಯಲು ಮಾಡಿದ

ಪುಟ ೮ ಕ್ಕೆ

ಜನ ವಿರೋಧಿ ಬಜೆಟ್ ಪ್ರಸ್ತಾಪಗಳ ವಿರುದ್ಧ ಏಪ್ರಿಲ್ ೫ ರಂದು ಪ್ರತಿಭಟನೆಗೆ ಸಿ.ಐ.ಟಿ.ಯು ಕರೆ



ರಾಷ್ಟ್ರೀಯ ರಂಗ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಕೈಗೊಂಡ ಹಲವಾರು ಜನಪರ, ಕಾರ್ಮಿಕ ವರ್ಗದ ಪರವಾದ ಕಾರ್ಯಕ್ರಮಗಳಿಗೆ ಸ್ವಾಗತ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರ ತಂದಿರುವ ಬಜೆಟ್ ತುಂಬಾ ನಿರಾಶಾದಾಯಕವಾಗಿದೆ ಎಂದು ಅಭಿಪ್ರಾಯವುಂಟಾಗಿದೆ. ರೈಲ್ವೆ ಪ್ರಯಾಣ ದರಗಳನ್ನು ಹೆಚ್ಚಿಸುವ ಮೂಲಕ ಪೆಟ್ರೋಲ್ ಹಾಗೂ ಪೆಟ್ರೋಲಿಯಂ ಸರಕುಗಳ ಬೆಲೆಗಳನ್ನು ಹೆಚ್ಚಿಸುವ ಮೂಲಕ ಇನ್ನಷ್ಟು ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಸಿ.ಐ.ಟಿ.ಯು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರವು ತಂದಿರುವ ಬಜೆಟ್ ಸಹ ಸಂಪೂರ್ಣವಾಗಿ ಜನವಿರೋಧಿಯಾಗಿದೆ ಎಂದು ಸಿ.ಐ.ಟಿ.ಯು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಎಂಟ್ರಿ ಟ್ಯಾಕ್ಸ್ ಪ್ರಾರಂಭ ಮಾಡಲು ಉದ್ದೇಶಿಸಿರುವುದನ್ನು, ಹೆಂಡ ಇಳಿಸುವುದನ್ನು ರದ್ದು ಮಾಡಿ ಲಕ್ಷಾಂತರ ಕುಟುಂಬಗಳು ಕೆಲಸ ಕಳೆದುಕೊಳ್ಳುವಂತೆ ಮಾಡಲು ಹೊರಟಿರುವುದನ್ನು, ಜನತಾ ಸೀರೆ ಮತ್ತು ಪಂಚೆ ಯೋಜನೆಯನ್ನು ರದ್ದು ಮಾಡಿ ರಾಜ್ಯದ ಲಕ್ಷಾಂತರ ಬಡ ನೇಕಾರರು ಉದ್ಯೋಗ ಕಳೆದುಕೊಳ್ಳುವುದನ್ನು ಸಿ.ಐ.ಟಿ.ಯು. ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದ್ದು ದಿನಾಂಕ ೫.೪.೯೦ ರಂದು ರಾಜ್ಯಾದ್ಯಂತ ರಾಜ್ಯ ಸರ್ಕಾರದ ಈ ಕ್ರಮಗಳ ವಿರುದ್ಧ ಪ್ರತಿಭಟನಾ ದಿನವನ್ನು ಆಚರಿಸಲು ರಾಜ್ಯದ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ. ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ತಂದಿರುವ ಜನವಿರೋಧಿ ಅಂಶಗಳನ್ನು ವಾಪಸ್ ಪಡೆಯಬೇಕೆಂದೂ ಒತ್ತಾಯ ಮಾಡಲಾಗುವುದು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿ.ಐ.ಟಿ.ಯು), ಕರ್ನಾಟಕ ರಾಜ್ಯ ಸಮಿತಿ ಸಭೆ ಮಾರ್ಚ್ ೨೪ ಮತ್ತು ೨೫ ರಂದು ಕಾಮ್ರೇಡ್ ಎಸ್. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಕೈಗೊಳ್ಳಲಾದ ಇತರ ಮುಖ್ಯವಾದ ತೀರ್ಮಾನಗಳು ಈ ಕೆಳಕಂಡಂತಿವೆ.

ಪುಟ ೮ ಕ್ಕೆ

ರಾಯಚೂರಿನ ಸೇಂದಿ ದೊರೆಗಳು

ಗಂಗಾಧರ ಕುಷ

ವೀರೇಂದ್ರರು ರೈತರಿಂದ ವಸೂಲಿ ಮಾಡಹೊರಟಿರುವ ೩.೫೦ ಕೋಟಿ ರೂ ಸಾಲದ ಹಣದಲ್ಲಿ ಮುಕ್ಕಾಲರಷ್ಟು ಹೆಂಡದ ದೊರೆಗಳ ಬಾಕಿ ವಸೂಲಿಯಿಂದ ಸಂಗ್ರಹವಾಗುತ್ತದೆಂದರೆ ಆಶ್ಚರ್ಯಪಡಬೇಕಿಲ್ಲ. ಈ ಬಾಕಿ ವಸೂಲಾದರೆ ಕರ್ನಾಟಕದ ಪ್ರತಿಹಳ್ಳಿಗೆ ಸುಸಜ್ಜಿತ ಶಾಲೆಯ ಕಟ್ಟಡ ನಿರ್ಮಿಸಬಹುದು. ರಾಯಚೂರು ಜಿಲ್ಲೆಯಲ್ಲಿ ನಡೆಯುತ್ತಿರುವ ದರೋಡೆ ಬಗ್ಗೆ ಲೇಖಕರು ಇಲ್ಲಿ ಹೇಳುತ್ತಾರೆ.

ಸರಕಾರಗಳು ಬರಲಿ ಹೋಗಲಿ ಹೆಂಡದ ದೊರೆಗಳು ಮೆರೆಯುತ್ತಲೇ ಇರುತ್ತಾರೆ. ಇವರ ವಿಷದ ಹೆಂಡ ಕುಡಿದು ಕೊಳಚೆನಿವಾಸಿಗಳು-ಗ್ರಾಮಸ್ಥರು ಒಣಗಿ ಸೊಣಕಲಾಗುತ್ತಿರುತ್ತಾರೆ ಮತ್ತು ಸಾಯುತ್ತಿರುತ್ತಾರೆ. ಇದ್ಯಾವುದರ ಪರಿವೆಯಿಲ್ಲದೆ ಇವರ ಐಶ್ವರ್ಯಲಕ್ಷ್ಮಿಯ ಬೊಜ್ಜು ಮಿತಿ ಮೀರುತ್ತಲೇ ಇರುತ್ತದೆ!

ಯಾರು ಅಧಿಕಾರಕ್ಕೆ ಬರುತ್ತಾರೋ ಅವರಿಗೆ ಸಲ್ಲಬೇಕಾದ ಕಾಣಿಕೆಗಳನ್ನು ಸಲ್ಲಿಸಿ ತಮಗೆ ಅನುಕೂಲ ರೀತಿಯಲ್ಲಿ ಸರಕಾರದ ಧೋರಣೆಗಳನ್ನು ಮಾರ್ಪಡಿಸಿಕೊಳ್ಳುತ್ತಾರೆ. ಅಧಿಕಾರಿಗಳಿಗೆ ಎಂಜಲು ನೆಕ್ಕಲು ಕೊಟ್ಟು ಕಾನೂನು ಕಣ್ಣು ತಪ್ಪಿಸಿ ಕೋಟಿಗಟ್ಟಲೆ ಸರಕಾರದ ಹಣವನ್ನು ನುಂಗಿ ನೀರು ಕುಡಿಯುತ್ತಾರೆ.

೧೯೭೦ ಕ್ಕೆ ಮುಂಚೆ ಹೆಂಡದ ಹರಾಜು ತಾಲ್ಲೂಕುವಾರು ನಡೆಯುತ್ತಿತ್ತು. ಆ ನಂತರ ಸರಕಾರದ ಮೇಲೆ ಹೆಂಡದ ದೊರೆಗಳ ಪ್ರಭಾವ ಜಾಸ್ತಿಯಾಗಿ ಜಿಲ್ಲಾಮಟ್ಟದಲ್ಲಿ ಹರಾಜು ನಡೆಸುವಂತೆ ಒತ್ತಡ ತರಲಾಯಿತು.

ಮೊನ್ನೆ ನಡೆದ ಚುನಾವಣೆ ಪೂರ್ವದಲ್ಲಿ ಅಬಕಾರಿ ಮಾರಾಟ ತೆರಿಗೆ ವಿನಾಯಿತಿ ನೀಡಿದ್ದು, ಅದಕ್ಕೆ ವಿರುದ್ಧವಾಗಿ ಖೋಡೆಗಳು ರಿಟ್ ಅರ್ಜಿ ಸಲ್ಲಿಸಿದ್ದು ಮೇಲಿನ ಮಾತನ್ನೇ ದೃಢೀಕರಿಸುತ್ತದೆ.

ಇನ್ನೊಂದೆಡೆ ವೀರೇಂದ್ರರಂಥ ಮುಖ್ಯಮಂತ್ರಿಗಳಿಗೆ ಈ ವಿಷದ ಹೆಂಡದ ವಿಷಜಂತುಗಳ ಕಬಳಿಸುವಿಕೆ ಕಣ್ಣಿಗೆ ಕಾಣದೆ ಬಡರೈತರ ಗೋಳಿನ ಸಣ್ಣ ಪುಟ್ಟ ಸಾಲಗಳೇ ಕಣ್ಣಿಗೆ ಬೀಳುತ್ತವೆ! ಈ ವಸೂಲಿಗಾಗಿ ರೈತ ಹೆಂಗಸರ ತಾಳಿಯವರೆಗೂ ಇವರ ಕೈಗಳು ಮುಂದುವರಿಯಲೂ ಹೇಸುವುದಿಲ್ಲ.

ಈಗ ವೀರೇಂದ್ರರು ರೈತರಿಂದ ವಸೂಲಿ ಮಾಡಹೊರಟಿರುವ ೩.೫೦ ಕೋಟಿ ಸಾಲದ ಹಣದಲ್ಲಿ ಮುಕ್ಕಾಲುರಷ್ಟು ಹೆಂಡದ ದೊರೆಗಳ ಬಾಕಿ ವಸೂಲಿಯಿಂದ ಸಂಗ್ರಹವಾಗುತ್ತದೆಂದರೆ ಆಶ್ಚರ್ಯಪಡಬೇಕಿಲ್ಲ.

ಇವರ ಬಾಕಿಯ ಹಣ ವಸೂಲಾದರೆ, ಕರ್ನಾಟಕದ ಪ್ರತಿ ಹಳ್ಳಿಗೆ ಸುಸಜ್ಜಿತ ಶಾಲೆಯ ಕಟ್ಟಡ ನಿರ್ಮಿಸಬಹುದು. ಇಲ್ಲವೆ ನೂರಾರು ಕೆರೆಗಳನ್ನು ವ್ಯವಸ್ಥಿತ ಸ್ಥಿತಿಗೆ ತರಬಹುದು.

ಅತ್ಯಂತ ಹಿಂದುಳಿದ ರಾಯಚೂರು ಜಿಲ್ಲೆಗೆ ಸಂಬಂಧಿಸಿದ ಅಬಕಾರಿ ಬಾಕಿ ೩೨ ವ್ಯಕ್ತಿಗಳಿಂದ ಒಟ್ಟು ನಾಲ್ಕು ಕೋಟಿ ಎಪ್ಪತ್ತಮೂರು ಲಕ್ಷ (೧೦-೮-೮೯ ರಂತೆ). ಇದೇ ರೀತಿ ಉಳಿದ ಜಿಲ್ಲೆಗಳಲ್ಲೂ ಈ ಅಬಕಾರಿ ನವಾಬರ ಬಾಕಿಗಳಿವೆ. ಅವು ಇದಕ್ಕೂ ಹೆಚ್ಚಿನ ಮೊತ್ತದ ಬಾಕಿಗಳಿರಲಿಕ್ಕೂ ಸಾಕು.

ಇಲ್ಲಿ ಹೇಳಹೊರಟಿರುವ ಕೋಟ್ಯಾಂತರ ಹಣದ ಬಾಕಿ ಅಧಿಕೃತವಾಗಿ ಹರಾಜಿನ ಹಣದಲ್ಲಿಯದನ್ನು ಕಟ್ಟಬೇಕಾಗಿರುವುದು ಮಾತ್ರ. ಇದಲ್ಲದೆ ಇನ್‌ಕಮ್‌ಟ್ಯಾಕ್ಸ್‌ಗೆ ವಂಚಿಸಿರುವುದೂ ಇದೆ.

ಸದ್ಯ ರಾಯಚೂರು ಜಿಲ್ಲೆಯಲ್ಲಿ ನಡೆಯುತ್ತಿರುವ ದರೋಡೆಯ ಬಗ್ಗೆ ಅಂಕಿ ಅಂಶಪುರಾವೆಗಳ ಸಮೇತ ಮಾತನಾಡೋಣ ಮತ್ತು ಸರಕಾರದ ಮುಖಕ್ಕೆ ಹಿಡಿಯೋಣ.

ಸತತ ೩೦ ವರ್ಷಗಳಿಂದ ರಾಯಚೂರು ಜಿಲ್ಲೆಯಲ್ಲಿ ಹೆಂಡದ ಗುತ್ತಿಗೆ ಹಿಡಿಯುತ್ತ ಬಂದಿರುವ ಕುಟುಂಬ ಶಿಂಧೆ. ಸರ್ವಶ್ರೀ ಶಿಂಧೆ ಬಸಪ್ಪ, ಮಲ್ಲಪ್ಪ, ಅಶೋಕ ಮತ್ತು ಯಮನಪ್ಪ ಈ ನಾಲ್ವರು ಶಿಂಧೆ ಕುಟುಂಬ. ಸಹೋದರರು. ಇವರದು ಬೆಂಗಳೂರು, ಪೂನಾ, ಹುಬ್ಬಳ್ಳಿ, ರಾಯಚೂರು, ಶ್ರೀರಾಮನಗರ ಮುಂತಾದೆಡೆಗಳಲ್ಲಿ ಕೋಟ್ಯಾಂತರ ಮೊತ್ತದ ಆಸ್ತಿಯಿದೆ. ನಮ್ಮ ಕಣ್ಣಿಗೆ ಕಾಣುವಂತೆಯೇ ಗಂಗಾವತಿ ತಾಲೂಕಿನ ಶ್ರೀರಾಮನಗರದಲ್ಲಿ ನೂರಾರು ಎಕರೆ ನೀರಾವರಿ ಜಮೀನಿದೆ. ಹುಬ್ಬಳ್ಳಿಯಲ್ಲಿ ಕೇಶವಪುರದ ಹತ್ತಿರ ಹೌಸಿಂಗ್ ಕಾಲನಿ ಇವರ ಹೆಸರಲ್ಲಿದೆ. ಯಮನಪ್ಪ ಶಿಂಧೆಯವರ ಪುತ್ರರಾದ ಪ್ರಕಾಶ್ ಸೇಟ್ ಮತ್ತು ವೆಂಕಟೇಶ್ ಸೇಟ್ ಇವರು ರಾಯಚೂರು ಜಿಲ್ಲೆಯ ಹೆಂಡದ ಗುತ್ತಿಗೆ ಮತ್ತು ಇತರೆ ಆಸ್ತಿಯ ನಿಗರಾಣಿ ಮಾಡುತ್ತಾರೆ.

ಸತತ ಮೂರು ಅವಧಿ ಕೊಪ್ಪಳ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿ ಮೊನ್ನೆ ನಡೆದು ಚುನಾವಣೆಯಲ್ಲಿ ಅನ್ವರಿಯ ವಿರುದ್ಧ ಬಕ್ಕಬಿದ್ದು ಎಚ್.ಜಿ.ರಾಮುಲು ಅವರು ಶಿಂಧೆಯವರ ಹೆಂಡದ ಗುತ್ತಿಗೆಯಲ್ಲಿ ಅನಧಿಕೃತ ಶಾಮೀಲಾದಾರರು, ರಾಮುಲು ಅವರಿಗೆ- ಗಂಗಾವತಿ, ಕೊಪ್ಪಳ, ಯಲಬುರ್ಗಾ, ಸಿಂಧನೂರು ಹಾಗು ಕುಷ್ಟಗಿ ತಾಲ್ಲೂಕುಗಳು; ಶಿಂಧೆಯವರಿಗೆ-ರಾಯಚೂರು, ಮಾನವಿ, ಲಿಂಗಸ್ಗೂರು ಹಾಗು ದೇವದುರ್ಗ ತಾಲೂಕುಗಳು. ಇದರಲ್ಲಿನ ಕೆಲ ತಾಲ್ಲೂಕುಗಳಲ್ಲಿ ಇವರದೇ ಸರಾಯಿ ಗುತ್ತಿಗೆಯೂ ಇದೆ.

ರಾಯಚೂರು ತಾಲ್ಲೂಕು ಒಂದರಲ್ಲೇ ಪ್ರತಿದಿನ ೧,೫೦೦ ಕ್ಯಾನ್ ಹೆಂಡ ಮಾರಾಟವಾಗುತ್ತದೆ ೧ ಕ್ಯಾನ್ ಎಂದರೆ ಎಂದರೆ ೨೪ ಬಾಟಲ್‌ಗಳು. ಉಳಿದ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿಕೊಂಡರೆ ಅಂದಾಜು ೮,೦೦೦ ಕ್ಯಾನ್‌ಗಳು ಮಾರಾಟವಾಗುತ್ತಿವೆ. ಪ್ರತಿ ಬಾಟಲ್ ಬೆಲೆ ರೂ ೫.೫೦. ೧,೯೨,೦೦೦ ಬಾಟಲ್‌ಗಳಿಗೆ ಪ್ರತಿದಿನ ರೂ ೯,೬೦,೦೦೦/- ಸಂಗ್ರಹ ಆಗುತ್ತದೆ. ಇದು ಒಂದು ತಿಂಗಳಿಗೆ ರೂ. ೨,೮೮,೦೦,೦೦೦/- ಆಗುತ್ತದೆ.

ಇವರು ಗುತ್ತಿಗೆ ಹಿಡಿಯಲು ಆರಂಭಿಸಿದಾಗ ಇಡೀ ಜಿಲ್ಲೆ ಸೇರಿಸಿದರೆ ೬ ರಿಂದ ೭ ಲಕ್ಷವಾಗುತ್ತಿತ್ತಂತೆ. ೧೯೭೦ರ ಹೊತ್ತಿಗೆ ೧೮ ಲಕ್ಷಕ್ಕೆ ಬಂದು ನಂತರ ೪೦ ಲಕ್ಷವಾಗಿತ್ತು. ೧೯೮೯ರಲ್ಲಿ ಗುತ್ತಿಗೆದಾರರಿಗೆ ನೀಡಬೇಕಾದ ಮಾಮೂಲಿನಲ್ಲಿ ತಗಾದೆ ಬಂದು ಬಹಳ ವರ್ಷಗಳ ನಂತರ ಹರಾಜಿನಲ್ಲಿ ತೀವ್ರ ಸ್ಪರ್ಧೆ ನಡೆದು ೭೪ ಲಕ್ಷ ಚಿಲ್ಲರೆಗೆ ಹರಾಜಾಯಿತು.

ಹೀಗೆ ಹರಾಜು ಹಿಡಿಯುವಾಗ ಸರಕಾರದ ಹಣ ನುಂಗಲು ಕಳ್ಳಗಂಡಿ ಹುಡುಕಿದ್ದಾರೆ. ಅದೆಂದರೆ, ಪ್ರತಿಬಾರಿ ಗುತ್ತಿಗೆ ಹಿಡಿಯುವಾಗಲು ತಮ್ಮಲ್ಲಿಯ ಗುಮಾಸ್ತರುಗಳ ಹೆಸರಲ್ಲಿ ಹಿಡಿಯುವುದು. ಸರಕಾರಕ್ಕೆ ಪ್ರತಿ ತಿಂಗಳು ತುಂಬಬೇಕಾದ ಹಣವನ್ನು ಭಾಗಶಃ ತುಂಬುತ್ತ, ಗುತ್ತಿಗೆ ಅವಧಿ ಮುಗಿಯುತ್ತ ಬಂದಾಗಿನ ಕೊನೆಯ ತಿಂಗಳುಗಳ ಹಣವನ್ನೇ ತುಂಬಲು ಹೋಗುವುದಿಲ್ಲ. ಹೀಗೆ ಯಾರ ಹೆಸರಲ್ಲಿ ಬಾಕಿಯಿರುತ್ತದೋ ಅವರು ಮರಳಿ ಹರಾಜಿನಲ್ಲಿ ಭಾಗವಹಿಸಲು ಬರುವುದಿಲ್ಲ. ಆಗ ಮತ್ತೊಬ್ಬ ನೌಕರನ ಹೆಸರಿನಿಂದ ಹರಾಜಿನಲ್ಲಿ ಭಾಗವಹಿಸುತ್ತಾರೆ. ಹೀಗ ಪ್ರತಿವರ್ಷ ಒಬ್ಬೊಬ್ಬರ ಹೆಸರು ಒಂದೊಂದು ಎಂಟರ್ ಪ್ರೈಸೆಸ್ ಕಂಪನಿಗಳು! ಅಬಕಾರಿ ಅಧಿಕಾರಿಗಳು ಹಣಪಾವತಿ ಮಾಡಬೇಕೆಂದು ನೋಟಿಸ್‌ಗಳನ್ನು ಕಳಿಸಿ ಅದಕ್ಕೆ ಬಾಕಿದಾರರು ಹಣ ತುಂಬದೇ ಹೋದಾಗ ವಸೂಲಾತಿ ಕೆಲಸವನ್ನು [illegible] ಇಲಾಖೆಯವರಿಗೆ ವಹಿಸಿ ಕೈಜಾಡಿಸಿಕೊಂಡು ಬಿಡುತ್ತಾರೆ. ಕಂದಾಯ ಇಲಾಖೆಯವರು ಆ ಬಡ ಗುಮಾಸ್ತರುಗಳ ಆಸ್ತಿ ಹರಾಜು ಮಾಡಬಂದುದರಲ್ಲಿ ಬಾಕಿಹಣವನ್ನು ಭರ್ತಿ ಮಾಡಿ ಕೊಡಬೇಕು. ಹೇಗಿದೆ ತಂತ್ರ?

ಸರಕಾರಿ ಈಚಲು ಗಿಡಗಳಿಂದ ಹೆಂಡ ಕದಿಯುವುದನ್ನು ಸ್ವಲ್ಪ ನೋಡೋಣ. ಹಳ್ಳ ಹರಿಗಳ ದಂಡೆಯುಗುಂಟ ಮತ್ತು ಸರಕಾರೀ ಜಮೀನುಗಳಲ್ಲಿರುವ ಈಚಲು ಗಿಡಗಳಿಗೆ ಬಾಡಿಗೆ ಕಟ್ಟಬೇಕಾಗುತ್ತದೆ. ಆಶ್ಚರ್ಯವೆಂದರೆ ಅಬಕಾರಿ ಅಧಿಕಾರಿಗಳ ಪ್ರಕಾರ ಇಡೀ ರಾಯಚೂರು ಜಿಲ್ಲೆಯಲ್ಲಿ ಸರಕಾರದವು ಎಂದು ಹೇಳಿಕೊಳ್ಳುವ ಈಚಲು ಗಿಡಗಳೇ ಇಲ್ಲವಂತೆ. ಇದ್ದಿರುವ ಗಿಡಗಳೆಲ್ಲ ಖಾಸಗೀ ಗಿಡಗಳಂತೆ! ಪ್ರತಿಯೊಂದು ಗಿಡಕ್ಕೆ ತಿಂಗಳಿಗೆ ರೂ ೩೦. ರಂತೆ ಖಾಸಗಿಯವರು ಬಾಡಿಗೆ ವಸೂಲು ಮಾಡಿಕೊಳ್ಳುತ್ತಾರೆ. ಸರಕಾರದ ಗಿಡಗಳಿಗೆ ಶಿಂಧೆ-ರಾಮುಲುಗಳೇ ಮಾಲೀಕರು. ಅಬಕಾರಿ ಸೂಪರಿಡೆಂಟ್‌ರ ಪ್ರಕಾರ ೧-೭-೮೯ ರಿಂದ ೩೦-೧೧-೮೯ರ ವರೆಗೆ ೨೭,೪೮೧ ಈಚಲು ಗಿಡಗಳನ್ನು ೧೬,೦೮೮ ತೆಂಗಿನ ಗಿಡಗಳನ್ನೂ ಕೆತ್ತಿ ಹೆಂಡ ಉತ್ಪಾದಿಸಲಾಗಿದೆ ಎಂದಿದೆ. ಇದು ಸುಳ್ಳು ಲೆಕ್ಕ.

ಈ ಈಚಲು ಮತ್ತು ತೆಂಗಿನ ಗಿಡಗಳಿಂದ ಬರುವ ಪ್ರಮಾಣ ಕಡಿಮೆ. ಅವರೇ ಕೊಡುವ ಸುಳ್ಳು ಲೆಕ್ಕದ ಪ್ರಕಾರವೂ ೧,೯೨,೦೦೦ ಬಾಟಲ್ ಹೆಂಡ ಅಷ್ಟೇ ಸಂಖ್ಯೆಯ ಗಿಡಗಳಿಂದ ಉತ್ಪಾದನೆಯಾಗುವುದಿಲ್ಲ. ಅದೇನಿದ್ದರೂ ಗಿಡಗಳಿಂದ ಬರುವ ಹೆಂಡ ಸೆ. ೨೦ ಕೆಮಿಕಲ್, ಸ್ಯಾಕರೀನ್, ಯೂರಿಯ ಗೊಬ್ಬರ ಇತ್ಯಾದಿಗಳದೇ ಶೆ.೮೦ ಪಾಲು. ಈಚಲು ಹೆಂಡದಲ್ಲಿ ಕೆಮಿಕಲ್ ಮಿಶ್ರಣ ಮಾಡುವಾಗ ಕರಗದೆ ಎಷ್ಟೋ ಕರಣೆಗಳು ಉಳಿದುಬಿಡುತ್ತವೆ. ಹೀಗೆ ಉಳಿದುಕೊಂಡ ಪ್ರತಿ ಕರಣೆಯೂ ಒಂದೊಂದು ಜೀವವನ್ನು ಬಲಿತೆಗೆದುಕೊಳ್ಳುತ್ತದೆ!

ಶುದ್ಧವಾದ ಈಚಲು ಹೆಂಡ ಸಿಗುವುದು ಒಂದೇ ಸ್ಥಳದಲ್ಲಿ. ಅದು - ಸರಕಾರಿ ಲ್ಯಾಬೋರೇಟರಿಯಲ್ಲಿ. ಏಕೆಂದರೆ ಅಲ್ಲಿಗೆ ಪ್ರತಿದಿನ ತಪಾಸಣೆಗಾಗಿ ಒಂದೊಂದು ಬಾಟಲ್ ಹೆಂಡ ಕಳಿಸಬೇಕಾಗುತ್ತದೆ.

ಈ ಎಲ್ಲ ಕಳ್ಳದಂಧೆಗಳಿಂದ ಬಂದ ಹಣದ ಮದದಿಂದ ಚುನಾವಣೆಯಲ್ಲಿ "ಕಾಳು ಹಾಕಿದರೆ ಕೋಳಿಗೇನು ಕಡಿಮೆ?" ಎಂದೂ "ಬಿಳಿ ಕಾಲರ್‌ನವರ ಓಟು ನನಗೆ ಬೇಕಿಲ್ಲ" ಎಂದೂ ರಾಮುಲು ಅವರು ಓಡಾಡಿದರು.

ಚುನಾವಣೆ ಪೂರ್ವದಲ್ಲಿ ಗಂಗಾವತಿ ತಾಲೂಕಿನ ಕನಕಗಿರಿ ಪಿ.ಎಸ್.ಐ. ರಾಮುಲು ಅವರ ಹೆಂಡದ ಲಾರಿಯನ್ನು ಹಿಡಿದು ಹಾಕಿದ್ದ. ಇದನ್ನು ಬಹಿರಂಗ ಸಭೆಯೊಂದರಲ್ಲಿ "ನಮ್ಮ ಸರಕಾರ ಇಲ್ಲವೆಂದು ನಮ್ಮ ಲಾರಿ ಹಿಡಿಯುವ ಮಟ್ಟಕ್ಕೆ ಹೋಗಿದ್ದಾನೆ ಈ ಪಿ.ಎಸ್.ಐ. ನಾಳೆ ಮರಳಿ ನಮ್ಮ ಸರಕಾರ ಬಂದಾಗ ಇವನಿಗೆ ಹೇಗೆ ಪಾಠ ಕಲಿಸಬೇಕೋ ನನಗೆ ಗೊತ್ತು".ಎಂದು ಹುಂಬತನದ ಮಾತನಾಡಿದರು. ಅವರ ಸರ್ಕಾರವೇನೋ ಮರಳಿ ಬಂತು. ಆದರೆ ದುರ್ದೈವಿ ರಾಮುಲು ಅವರೇ ಮನೆಗೆ ಮರಳಿ ಹೋದದ್ದು ದುರಂತ! ಅದೇನೋ ಇದ್ದರೂ ಈ ಹೆಂಡದ ದೊರೆಗಳು ನಾಯಕರು ಹಾಗೂ ಸರಕಾರೀ ಯಂ... ಮೇಲೆ ಹಿಡಿತ ಇಟ್ಟುಕೊಂಡು ಇಷ್... ಆಟವಾಡುತ್ತಿದ್ದಾರೆ. ಜನತೆಯ ರಕ್ತ ಹೀ... ವಾಗ ಬೊಗಳುವ ನಾಯಿಗಳಿಗೆ ಎಂಜ... ಎಸೆಯುತ್ತಾಮುಂದುವರಿಯುತ್ತಿದ್ದಾರೆ.

ಇವರ ಸಾಂದ್ರೀಕೃತ ನೆಣ ಕ... ಬೇಕೆಂದು ಆಂಧ್ರ ಸರ್ಕಾರ ಅನುಸರಿಸ... ಹೆಂಡದ ಹರಾಜು ರೀತಿಯಿದ್ದು, ಅ... ದಲ್ಲಿ ಪ್ರತಿಗ್ರಾಮಕ್ಕೂ ಮಂ... ಪಂಚಾಯ್ತಿಗಳ ನೇತೃತ್ವದಲ್ಲಿ ಹರಾ... ನಡೆಯುತ್ತದೆ. ಈಚಲ ಗಿಡ ಕೆ... ಲೈಸೆನ್ಸ್ ಇರುವ ಈಡಿಗರ ಸಹಕಾ... ಸಂಘವಿರುತ್ತದೆ. ಅವರ ಸದಸ್ಯರಿಗೆ ವ... ಸದರಿ ಹರಾಜಿನಲ್ಲಿ ಭಾಗವಹಿಸ... ಅರ್ಹತೆಯಿರುವುದು. ಅಲ್ಲಿ ಕೂ... ಈಳಿಗರನ್ನು ಬುಟ್ಟಿಯಲ್ಲಿ ಹಾಕಿಕೊಂ... ೧೦-೨೦ ಹಳ್ಳಿಗಳ ಗುತ್ತಿಗೆ ಹಿಡಿಯ... ವರೂ ಇದ್ದಾರೆ. ಅದೇನಿದ್ದರೂ ಕರ್ನಾಟ... ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವಿದ...

ಆಂಧ್ರದ ಗಡಿಯಲ್ಲಿ ಬರ... ರಾಯಚೂರು ತಾಲ್ಲೂಕಿನ ಕೆಲ ಹಳ್ಳಿ... ವರು ಆಂಧ್ರದ ಹಳ್ಳಿಗಳಿಗೆ ಹೋಗಿ ಹೆ... ಕುಡಿಯುತ್ತಾರೆ. ಅಲ್ಲಿ ಇಲ್ಲಿನದಕ್ಕಿ... ಒಳ್ಳೆಯಗುಣದ್ದಿರುತ್ತದೆ. ಮತ್ತು ಅತ್ಯ... ಕಡಿಮೆ ಬೆಲೆಯಲ್ಲಿ ಅಂದರೆ ಕೇವಲ ... ೧ ಕ್ಕೆ ೧ ಬಾಟಲ್‌ನಂತೆ ಸಿಗುತ್ತದೆ.

ಇದೆಲ್ಲ ರಾಜಕೀಯ ಧೋರಣೆ... ಲ್ಲಾಗುವಬದಲಾವಣೆಗಳನ್ನವಲಂಬಿಸಿದ್ದು.

(ಕೃಪೆ ಲಂಕೇಶ್ ಪತ್ರಿಕೆ)

ಬೀದಿ ಪಾಲಾಗಿರುವ ಸೇಂದಿ ಕಾರ್ಮಿಕರು.

ಏನೆಲ್ಲ ಲೂಟಿ-ಸುಲಿಗೆ ನಡೆಸಿ ಕೋಟ್ಯಾಂತರ ಹಣ ನುಂಗಿ ಚಿಲ್ಲರೆ ರೊಕ್ಕವನ್ನು ಕಾರ್ಮಿಕರಿಗೆ ಎಸೆಯುವ ಶಿಂಧೆ ರಾಮುಲುಗಳಿಗೆ ಈಗ ಕಾರ್ಮಿಕರೇ ಬೇಡವಾಗಿದ್ದಾರೆ.

ಹೆಂಡ ಇಳಿಸುವ ಕಾರ್ಮಿಕರು ,ಪಶುಗಳ ರೀತಿಯಲ್ಲಿರುವ ತಮ್ಮ ಬದುಕನ್ನು ಪ್ರಶ್ನಿಸಿ ಹೆಚ್ಚಿನ ಸೌಲತ್ತುಗಳಿಗಾಗಿ ಸಂಘಟಿತಗೊಂಡಿರುವುದೇ ಇವರಿಗೆ ತಲೆ ನೋವು. ಈಗ ಈಚಲ ಗಿಡಗಳೂ ಬೇಡ ಅದನ್ನು ಕೆತ್ತುವ ಕಾರ್ಮಿಕರೂ ಬೇಡ, ಏನಿದ್ದರೂ ಸುಲಭವಾಗಿ ದೊರೆಯುವ ಕೆಮಿಕಲ್ಸ್-ಸ್ಯಾಕರೀನ್-ಯೂರಿಯಗೊಬ್ಬರಗಳನ್ನು ನೀರಲ್ಲಿ ಮಿಶ್ರಣ ಮಾಡಲು ಬೇಕಾಗುವಷ್ಟು ಕೆಲಸಗಾರರಿದ್ದರೆ ಸಾಕು ಎನ್ನುತ್ತಿದ್ದಾರೆ.

ಎಷ್ಟೋ ಈಳಿಗರು ವಿವಿಧ ಜಿಲ್ಲೆಗಳಿಂದ ಬಂದು ೨೦-೩೦ ವರ್ಷಗಳಿಂದ ಇವರ ಕಂಪನಿಯಲ್ಲೇ ದುಡಿಯುತ್ತ ಬಂದಿದ್ದಾರೆ. ಚಿತ್ರದುರ್ಗ - ಧಾರವಾಡ - ಬೆಳಗಾಂವ್ ಗುಲಬುರ್ಗಾ ಮುಂತಾದ ಜಿಲ್ಲೆಗಳಿಂದ ವಲಸೆ ಬಂದ ಇವರು, ದಿಢೀರನೆ ಕಿತ್ತೊಗೆದರೆ ಹೋಗುವುದೆಲ್ಲಿಗೆ? ಅವರಿಗೆ ಬೇರೆ ಯಾವ ಕೃಷಿ ಕೆಲಸಗಳೂ ಬರುವುದಿಲ್ಲ. ಶಿಂಧೆಯವರದು ಒಂದೇ ಷರತ್ತು ನಿಮಗೆ ಕೆಲಸ ಬೇಕಂತಲಾದರೆ, ನೀವು ಯೂನಿಯನ್ ಬಿಡಬೇಕು ಮತ್ತು ನಾವು ಕೊಟ್ಟಾಗ ಕೂಲಿ ತೆಗೆದು ಕೊಳ್ಳಬೇಕು.

ಕೇವಲ ರೂ. ೧೦೦-೧೫೦ಕ್ಕೆ ಕೆಲಸ ಮಾಡುತ್ತಿದ್ದವರು ಯೂನಿಯನ್ ಕಟ್ಟಿಕೊಂಡ ಮೇಲೆ ರೂ ೪೦೦ ರಿಂದ ರೂ ೬೫೦ ಸಂಬಳ ಆಗಿರುವುದು ಕಾರ್ಮಿಕರು ಮರೆಯಲಾರರು. ,ಯೂನಿಯನ್ ಬಿಟ್ಟರೆ ನಮ್ಮ ಬಾಳೇ ಅನಿಶ್ಚಿತವೆಂದು ನಂಬಿಕೊಂಡಿದ್ದಾರೆ. ಆದರೂ ಅವರಲ್ಲಿ ಸಂಘಟನಾ ಪ್ರಜ್ಞೆ ಅಷ್ಟೊಂದಿಲ್ಲ. ವ್ಯಕ್ತಿನಿಷ್ಠೆಯಲ್ಲೇ ಇದ್ದಾರೆ.

ಇಂದಿನವರೆಗೆ ಅವರಿಗೆ ಪ್ರತಿತಿಂಗಳೂ ಸಂಬಳ ಸಿಕ್ಕಿಲ್ಲ. ೨-೩ ತಿಂಗಳಿಗೆ ಒಮ್ಮೆ ಸಂಬಳ ಕೊಡಲಾಗುತ್ತಿತ್ತು. ನಿತ್ಯದ ಉಪಯೋಗಕ್ಕೆ ಬೇಕಾಗುವ ಸಾಮಾನುಗಳಿಗೆ ಒಂದು ಕಿರಾಯಿ ಅಂಗಡಿಯಲ್ಲಿ ಉದಿ ಕೊಡಲು ಹೇಳಿರುತ್ತಾರೆ. ಇವರ ಸಂಬಳ ಕೊಡುವಾಗ ಅಂಗಡಿ ಬಾಕಿ ಮುರಿದುಕೊಂಡು ಕೊಡುವುದು ಇವರ ಪದ್ಧತಿ. ವಿನಾಕಾರಣ ೧೦-೧೫ ದಿನಗಳ ಸಂಬಳ ಜಡಿಯುವುದೂ ಇದೆ. ಇದನ್ನೆಲ್ಲ ಪ್ರತಿಭಟಿಸಿ ಕೂಡಲೇ ಬಾಕಿ ಇರುವ ಸಂಬಳ ನೀಡಬೇಕು. ಇನ್ನು ಮುಂದೆ ಪ್ರತಿತಿಂಗಳು, ಸಂಬಳ ನೀಡಬೇಕು ಎಂದು ಮುಂತಾದ ಬೇಡಿಕೆಗಳನ್ನು ಮಂಡಿಸಿದ್ದಕ್ಕಾಗಿ ೫೬೦ ಕಾರ್ಮಿಕರನ್ನು ಕಿತ್ತುಹಾಕಲಾಗಿದೆ.

ಈಚಲುಗಿಡ ಕೆತ್ತುವ ಪ್ರತಿಯೊಬ್ಬರಿಗೂ ಲೈಸೆನ್ಸ್ ಇರಬೇಕಾಗುತ್ತದೆ. ಆದರೆ ಗುತ್ತಿಗೆದಾರರು ಎಲ್ಲರ ಹೆಸರಿಗೆ ಲೈಸನ್ಸ್ ತೆಗೆದುಕೊಂಡಿರುವುದಿಲ್ಲ. ಸಾಂಕೇತಿಕವಾಗಿ ಕೆಲ ಮಂದಿಯ ಹೆಸರಿಗೆ ಲೈಸನ್ಸ್ ತೆಗೆಸಿರುತ್ತಾರೆ. ಕೆಲಸಗಾರರು ಏನೇ ಆಕ್ಷೇಪಣೆ ಎತ್ತಿ ಲೇಬರ್ ಇನ್ಸ್‌ಪೆಕ್ಟರ್ ಹತ್ತಿರ ಹೋಗುವಂತಿಲ್ಲ. ಮೊದಲು ಅವರ ಕೇಳುವುದು ನಿನ್ನ ಲೈಸನ್ಸ್ ಎಲ್ಲಿ ಎಂದು.ಹೀಗಾಗಿ ಈಳಿಗನ ತಲೆಯ ಮೇಲೆ ಸದಾ ಅನಿಶ್ಚಿತತೆಯ ತೂಗುಗತ್ತಿಯಿದ್ದ ಮಾಲೀಕರ ಮುಲಾಜಿನಲ್ಲೇ ಜೀವ ಸವೆಸುವ ಪರಿಸ್ಥಿತಿ ಸೃಷ್ಟಿಸಲ್ಪಟ್ಟಿದೆ.

ಇದನ್ನೆಲ್ಲ ಪ್ರಶ್ನಿಸಿ ೧೯೮೭ರಲ್ಲಿ ಹೋರಾಟ ಮಾಡಿದಾಗ ಪ್ರತಿಯೊಬ್ಬನಿಗೂ ಹಂಗಾಮಿ ನೇಮಕಾತಿಯನ್ನು ಲಿಖಿತ ಮೂಲಕ ಮಾಡಿಕೊಂಡರು.

ಕುತೂಹಲಕರ ಸಂಗತಿಯೆಂದರೆ ಗುತ್ತಿಗೆಯೇ ತಮ್ಮ ಗುಮಾಸ್ತರ ಹೆಸರಿನಲ್ಲಿಡುವುದು ಮತ್ತು ಪ್ರತಿವರ್ಷ ಬೇರೆಯವರ ಹೆಸರಿನಲ್ಲಿ ಗುತ್ತಿಗೆ ಹಿಡಿಯುವುದು. ವಾಸ್ತವವಾಗಿ ೩೦ ವರ್ಷಗಳಿಂದ ಮಾಲೀಕ ಒಬ್ಬನೇ ಇದ್ದರೂ ಕಾಗದ ದಾಖಲಾತಿಗಳಲ್ಲಿ ಪ್ರತಿ ವರ್ಷ ಈ ಈಡಿಗರ ಮಾಲೀಕರು ಬದಲಾಗುತ್ತಲೇ ಇರುತ್ತಾರೆ.

ಒಂದು ವಿಚಿತ್ರ ಪ್ರಕರಣವಾಯಿತು. ...ಮ್ಮೆ ಹೆಂಡ ಇಳಿಸಲು ಹೋದ ಒಬ್ಬನ... ಹಾವು ಕಡಿದು ಅವನು ಸತ್ತು ಹೋದ (... ರೀತಿ ಹಾವು ಕಡಿಸಿಕೊಂಡು ಇಲ್ಲಿಯವರ... ೩೦ ಜನ ಸತ್ತಿದ್ದಾರಂತೆ). ಅವನ ಕುಟುಂಬ... ಪರಿಹಾರ ನೀಡಬೇಕೆಂದು ನ್ಯಾಯಾಲಯದ... ಯೂನಿಯನ್ ಕೇಸ್ ಹಾಕಿತು. ಆದರ... ನ್ಯಾಯಾಲಯ ಕೂಡಾ ಪರಿಹಾರ ನೀ... ಬೇಕೆಂದು ಆರ್ಡರ್ ಕೂಡಾ ನೀಡಿತ... ಪರಿಹಾರ ನೀಡುವವನೇ ಅಲ್ಲಿರಲಿಲ್ಲ. ಗುತ್ತಿ... ಯಾರ ಹೆಸರಲ್ಲಿತ್ತೋ ಅವನ ನಿರ್ಗ... ಎಲ್ಲಿಗೋ ಹೋಗಿಬಿಟ್ಟಿದ್ದ! ಇಂದಿಗೂ ... ಕೋರ್ಟ್ ಆರ್ಡರ್ ಜಾರಿಯಾಗದೆ ಇದೆ!

ಈಗಲೂ ಅದೇ ಆಟ. ನಮ್ಮನ್ನೆಲ್ಲಾ ... ಕೆಲಸದಿಂದ ತೆಗೆದದ್ದು ಪುನರ್ನೇಮಿಸಿಕೊ... ಎಂದು ಕೇಳಲು ಹೋದರೆ, ಈವ... ಯಾರಿಗೆ ಗುತ್ತಿಗೆ ಸಿಕ್ಕಿದೆಯೋ ಅವರ... ಕೇಳಿಕೊಳ್ಳಿರಿ. ನಾವಂತೂ ಅದರ ಗುತ್ತಿ... ದಾರರಲ್ಲ ಎನ್ನುವ ನೀಚತನಕ್ಕಿಳಿದಿದ್ದಾರೆ.

ಈಡಿಗನ ಪರಂಪರಾಗತ ವೃತ್ತಿಯೊಡನೆ ... ದುಷ್ಟ ಬಂಡವಾಳಿಗರು ಆಟವಾಡುತ್ತಿದ್ದಾ... ಪ್ರತಿ ೬ ತಿಂಗಳಿಗೆ ಒಂದು ಸ್ಥಳದಿಂ... ಮತ್ತೊಂದು ಸ್ಥಳಕ್ಕೆ ಹೆಂಡ ಇಳಿಸ... ಹೋಗಬೇಕಾಗುತ್ತದೆ. ಹೀಗಾಗಿ ಖಾಯ... ಮನೆ ಎನ್ನುವುದು ಇವರಿಗಿಲ್ಲ. ಈಚ... ಪೊರಕೆಯಿಂದ ನಿರ್ಮಿಸಿದ ಗುಡಿಸಲುಗ... ಇವರ ಮನೆಗಳು. ಮಕ್ಕಳಿಗೆ ವಿದ್ಯಾಭ್ಯಾಸ... ವಾಸನೆಯೂ ಇಲ್ಲ. ವಯಸ್ಸಿಗೆ ಬಂ... ಕೂಡಲೇ ಆ ಮಕ್ಕಳೆಲ್ಲ ಶಿಂಧೆ ಧಣಿ... ಜೀತಕ್ಕೆ ಸಿದ್ಧರಾಗುವುದೇ ಅವರ ಕರ್ಮ!

೩೦ ವರ್ಷಗಳಿಂದ ದುಡಿಯ... ಬಂದು ಈಗ ಮುಪ್ಪಾಗಿರುವ ಈಡಿಗ... ಬೀದಿ ಪಾಲಾಗಿದ್ದಾರೆ.

ಇನ್ಶೂರೆನ್ಸ್ - ಪ್ರಾವಿಡೆಂಟ್ ಫಂಡ್... ಹೆಸರೇ ಕೇಳದ ಇವರ ಸ್ಥಿತಿ ಶೋಚನೀಯ.

ಬೀಡಿ ಕಾರ್ಮಿಕರ ಹೋರಾಟ ತೀವ್ರಗೊಳ್ಳಲಿದೆ

ಪಾರವಿದೀ ಕೆಲಸಕ್ಕಾಗಿ, ಕಾನೂನು ಪ್ರಕಾರ ಸಿಗಬೇಕಾದ ಪರಿಹಾರಕ್ಕಾಗಿ ದ.ಕ. ಜಿಲ್ಲೆಯಲ್ಲಿ ಮಾರ್ಚ್ ೧ ರಂದು ಪ್ರತಿಭಟನಾ ಪ್ರದರ್ಶನದೊಂದಿಗೆ ಹೋರಾಟ ಆರಂಭಿಸಿದ ಬೀಡಿ ಕಾರ್ಮಿಕರು ಅದನ್ನು ಇನ್ನಷ್ಟು ತೀವ್ರ ಗೊಳಿಸುವ ದೃಢತೆಯಲ್ಲಿದ್ದಾರೆ.

೩ನೇ ತಾರೀಕಿನಿಂದ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಬೀಡಿ ಕಾರ್ಮಿಕರ ಬೆಂಬಲಾರ್ಥ ಸಿ.ಐ.ಟಿ.ಯು. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ವಿವಿಧ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ೮-೩-೯೦ ರಂದು ಧರಣಿ ನಡೆಸುತ್ತಿರುವ ಸ್ಥಳಕ್ಕೆ ಬೃಹತ್ ಮೆರವಣಿಗೆ ಯಾಗಿ ಬಂದು ಜಿಲ್ಲಾಧಿಕಾರಿಯವರ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು. ಹಂಚು, ಗೋಡಂಬಿ, ಅಡಿಕೆ, ಮೋಟಾರ್ ಟ್ರಾನ್ಸ್‌ಪೋರ್ಟ್, ಆಟೋರಿಕ್ಷಾ, ಪ್ರೆಸ್ ಇತ್ಯಾದಿ ಕೈಗಾರಿಕೆಗಳ ಕಾರ್ಮಿಕರು ಬೀಡಿ ಕಾರ್ಮಿಕರ ಮೆರವಣಿಗೆಯಲ್ಲಿ ಬಂದು ಈ ಪ್ರದರ್ಶನದಲ್ಲಿ ಭಾಗವಹಿಸಿದರು. ಬಳಿಕ ಸಿ.ಪಿ.ಟಿ.ಯು. ಪರವಾಗಿ ನಿಯೋಗವೊಂದು ಜಿಲ್ಲಾಧಿಕಾರಿಯವರ ಬಳಿ ತೆರಳಿ ಬೀಡಿ ಕಾರ್ಮಿಕರ ಸಮಸ್ಯೆಯನ್ನೊಳಗೊಂಡ ಮನವಿಯನ್ನು ಅರ್ಪಿಸಿದರು.

ಬೀಡಿ ಕಾರ್ಮಿಕರ ಸತ್ಯಾಗ್ರಹ ಮುಂದುವರಿಯುತ್ತಿದ್ದಂತೆ ೭.೩.೯೦ ರಂದು ಅಸಿಸ್ಟೆಂಟ್ ಲೇಬರ್ ಕಮಿಶನರ್ ಮಾಲಿಕರು ಮತ್ತು ಕಾರ್ಮಿಕರ ಪ್ರತಿನಿಧಿಗಳನ್ನು ತಮ್ಮ ಕಛೇರಿಯಲ್ಲಿ ಪಂಚಾಯಿತಿಗೆ ಕರೆದರು. ಆದರೆ ಮಾಲಿಕರಿಂದ ಅಂದು ಯಾವುದೇ ಅನುಕೂಲ ಪ್ರತಿಕ್ರಿಯೆಬಾರದೆ ತಮ್ಮ ಸಂಘದ ಸಭೆ ಸೇರಿ ಚರ್ಚಿಸಿ ತಾ॥ ೧೩ ರಂದು ಕಾರ್ಮಿಕರ ಪ್ರತಿನಿಧಿಗಳನ್ನು ಕರೆದು ಪಂಚ್ಯಾತಿಗೆ ನಡೆಸುವುದಾಗಿ ಅವರು ತಿಳಿಸಿದರಲ್ಲದೆ ಕಾರ್ಮಿಕರಿಗೆ ಪರಿಹಾರ ನೀಡುವ ಬಗ್ಗೆ ಯಾವುದೇ ಸೂಚನೆಯನ್ನೂ ಅವರು ನೀಡಲಿಲ್ಲ.

ಮಾಲಿಕರ ಆಮಂತ್ರಣದಂತೆ ತಾ. ೧೩ ರಂದು ಕಾರ್ಮಿಕರ ಪ್ರತಿನಿಧಿಗಳು ಅವರು ಕರೆದ ಸಭೆಯಲ್ಲಿ ಹಾಜರಾಗಿದ್ದರು. ಅಂದು ಕೂಡಾ ಕಾರ್ಮಿಕರ ಸಂಕಷ್ಟದ ಬಗ್ಗೆ ಏನೂ ಹೇಳದೆ ತಮ್ಮ ಸಮಸ್ಯೆಗಳನ್ನಷ್ಟೆ ಮಾಲಿಕರು ಮುಂದಿಟ್ಟರು. ಕೈಗಾರಿಕೆಯ ಪರಿಹಾರಕ್ಕಾಗಿ ಸರಕಾರದೊಂದಿಗೆ ಯಾವುದೇ ಒತ್ತಾಯ ಚಳವಳಿ ನಡೆಸಲು ತಾವು ಸಿದ್ಧವೆಂದು ಈ ಹೋರಾಟದಲ್ಲಿ ಮಾಲಿಕರ ಪ್ರಯತ್ನಕ್ಕೆ ಕಾರ್ಮಿಕರು ಸಹಕಾರ ನೀಡುವರೆಂದೂ ಆದರೆ ಇಂದು ಉಪವಾಸ ಬೀಳುತ್ತಿರುವ ಕಾರ್ಮಿಕರಿಗೆ ಸ್ವಲ್ಪ ಹೆಚ್ಚು ಕೆಲಸ ಹಾಗೂ ಪರಿಹಾರ ನೀಡಬೇಕೆಂಬ ಬೇಡಿಕೆಗೆ ಅವರು ಸಮ್ಮತಿಸಲಿಲ್ಲ. ಅನೇಕ ವರ್ಷಗಳಿಂದ ಬೀಡಿ ಕಾರ್ಮಿಕರು ದುಡಿದು ಕೋಟಿಗಟ್ಟಲೆ ರೂ. ಮಾಲಿಕರು ಲಾಭ ಗಳಿಸಿದ್ದರೂ ಇಂತಹ ಸಂಧಿಗ್ದ ಪರಿಸ್ಥಿತಿಯಲ್ಲಿ ಮಾಲಿಕರು ತಮ್ಮ ಅಹವಾಲಷ್ಟನ್ನು ಮಾತ್ರ ಹೇಳುತ್ತಾರಲ್ಲದೆ ಕಾರ್ಮಿಕರ ಕುಟುಂಬಗಳು ಉಪವಾಸ ಬೀಳುತ್ತಿರುವ ಬಗ್ಗೆ ಅವರಿಗೆ ಎಳ್ಳಷ್ಟೂ ಕಂಪನವಿಲ್ಲವೆಂಬುದು ಅವರ ಮಾತುಗಳಿಂದ ತಿಳಿಯುತ್ತದೆ. ಕಾರ್ಮಿಕರನ್ನು ಉಪವಾಸದಿಂದ ತಪ್ಪಿಸುವ ಯಾವ ಆಲೋಚನೆಯೂ ಅವರಲ್ಲಿ ಇದ್ದಂತೆ ಕಾಣುತ್ತಿಲ್ಲ.

ಒಂದು ಜವಾಬ್ದಾರಿಯುಳ್ಳ ಸರಕಾರ ಇಂತಹ ಗಂಭೀರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮಧ್ಯ ಪ್ರವೇಶಿಸಿ ಕಾರ್ಮಿಕರಿಗೆ ಪರಿಹಾರ ಒದಗಿಸುವ ಬಗ್ಗೆ ತೀವ್ರ ಕಮ ತೆಗೆದುಕೊಳ್ಳಬೇಕಾಗಿದೆ. ಆದರೆ ಕರ್ನಾಟಕದ ಕಾಂಗ್ರೆಸ್(ಐ) ಸರಕಾರವು ಇಷ್ಟು ತಿಂಗಳುಗಳಾದರೂ ಮೌನವಾಗಿ ರುವುದರಿಂದ ಕಾರ್ಮಿಕರು ಈ ಸರಕಾರ ದ ನೀತಿಯ ಬಗ್ಗೆ ತೀರಾ ಅಸಂತುಷ್ಟ ರಾಗಿದ್ದಾರೆ. ಆದುದರಿಂದ ಸರಕಾರದ ಹಾಗೂ ಬೀಡಿ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಸೋಲಿಸಲು ತಮ್ಮ ಚಳವಳಿಯನ್ನು ಇನ್ನೂ ತೀವ್ರಗೊಳಿಸುವ ದೃಢತೆಯಲ್ಲಿದ್ದಾರೆ. ಈ ಹೋರಾಟವು ದ.ಕ. ಜಿಲ್ಲೆಯಲ್ಲಿ ಮಾತ್ರ ವಷ್ಟೇ ಸೀಮಿತವಾಗಿದೆ. ಇಡೀ ರಾಜ್ಯಕ್ಕೆ ಪಸರಿಸಿ ರಾಜ್ಯದಎಲ್ಲಾ ಬೀಡಿಕಾರ್ಮಿಕರು ಈ ಹೋರಾಟಗಳಲ್ಲಿ ಭಾಗಿಯಾಗಿಮುನ್ನಡೆಯಬೇಕಾಗಿದೆ. ಅದೇ ರೀತಿ ಇತರ ಕಾರ್ಮಿಕ ಸಂಘಟನೆಗಳು ಸಾರ್ವಜನಿಕರು ಬೀಡಿ ಕಾರ್ಮಿಕರ ಈ ಹೋರಾಟಕ್ಕೆ ಸರ್ವ ರೀತಿಯ ಬೆಂಬಲವನ್ನು ಕೊಡುವುದು ಬಹಳ ಅಗತ್ಯವಿದೆ. ಒಂದು ದೊಡ್ಡ ವಿಭಾಗದ ಕಾರ್ಮಿಕರು ಉಪವಾಸ ಬೀಳುವುದನ್ನು ಜನತೆ ಸಹಿಸಲಾಗದು.

– ಕೆ.ಆರ್. ಶ್ರಿಯಾನ್

– ಎಸ್.ಆರ್. ಆರಾಧ್ಯ

ಆಟೋ ಸಂಘದ ಸಲಹೆ ಬಗ್ಗೆ ಪೋಲೀಸ್ ಕಮಿಶನರ್ ಭರವಸೆ

ಬೆಂಗಳೂರಿನಲ್ಲಿ ಆಟೋರಿಕ್ಷಾ ಚಾಲಕರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಪೋಲಿಸ್ ಕಮಿಶನರ್ ಮಾರ್ಚ್ ೧೭ ರಂದು ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ ಪದಾಧಿಕಾರಿಗಳಿಗೆ ಆಶ್ವಾಸನೆ ನೀಡಿದ್ದರು. ಕೂಡಲೇ ಆಟೋರಿಕ್ಷಾ ನಿಲ್ದಾಣಗಳನ್ನು ಕಟ್ಟಿಸಲಾಗುವುದು. ಮುಖ್ಯವಾಗಿ ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘದ ಪದಾಧಿಕಾರಿಗಳು, ಪ್ರಯಾಣಿಕರ ಸಂಘದ ಪ್ರತಿನಿಧಿಗಳು ಮತ್ತು ಉನ್ನತ ಪೋಲಿಸ್ ಅಧಿಕಾರಿಗಳಸಮಿತಿಯೊಂದನ್ನು ರಚಿಸಬೇಕೆಂಬ ಸಂಘದ ಸಲಹೆಗೆ ಪೋಲಿಸ್ ಕಮಿಶನರ್ ಒಪ್ಪಿ ಕೊಡಲೇ ಈ ಸಮಿತಿಯನ್ನು ರಚಿಸುವುದಾಗಿ ಹೇಳಿದ್ದಾರೆ. ಮಾತುಕತೆ ಕಾಲದಲ್ಲಿ ಕಮಿಶನರ್ ಹಾಗೂ ಡಿ.ಸಿ.ಪಿ.ಯವರು ನೀಡಿರುವ ಆಶ್ವಾಸನೆಗಳನ್ನು ೧೫ ದಿನಗಳೊಳಗಾಗಿ ಈಡೇರಿಸದಿದ್ದರೆ ತೀವ್ರವಾದ ಚಳುವಳಿ ನಡೆಸಲು ಸಂಘ ತೀರ್ಮಾನಿಸಿದೆ.

ಡಿ.ವೈ.ಎಫ್.ಐ. ಘಟಕ

ಮಾರ್ಚ್ ೧೩ ರಂದು ಚಿಂತಾಮಣಿ ನಗರ ಘಟಕದ ಉದ್ಘಾಟನೆಯಾಯಿತು. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಇವರು ಮಾತನಾಡುತ್ತ ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಕೋಲಾರ ಜಿಲ್ಲೆ ಮತ್ತು ಚಿಂತಾಮಣಿ ನಗರದ ಪ್ರಜಾಪ್ರಭುತ್ವವಾದಿ ಹೋರಾಟಗಳಲ್ಲಿ ಘಟಕ ಸ್ಪಂಧಿಸಬೇಕು ಹಾಗೂ ತಾನೇ ಚಳುವಳಿಯ ಅಂಗವಾಗಿ ಮೇಲ್ಸಮಿತಿಯ ನೇತೃತ್ವದಲ್ಲಿ ಸ್ವಯಂ ಚಾಲನೆಯಲ್ಲಿರಬೇಕೆಂದು ಕರೆನೀಡಿದರು.

ರಾಜ್ಯ ಸಮಿತಿಯ ಸದಸ್ಯ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಎಂ.ಎಸ್. ಆನಂದ, ರಾಜ್ಯ ಸಮಿತಿಯ ಮಾಜಿ ಉಪಾಧ್ಯಕ್ಷ ಕಾಂ. ಕೆ.ವಿ. ಸತ್ಯನಾರಾಯಣ ಇವರುಗಳು ಮಾತನಾಡಿದರು.

೧೫ ಸಂಗಾತಿಗಳ ಘಟಕಕ್ಕೆ ಕಾಂ. ರಾಜಕುಮಾರ್ ಸಂಚಾಲಕರಾಗಿ ಕಾಂ. ರವಿಚಂದ್ರ, ಕಾಂ. ಮಹಮದ್ ಮುಸ್ತಫ ಇವರುಗಳು ಸಹ ಸಂಚಾಲಕರುಗಳಾಗಿ ಆಯ್ಕೆಯಾದರು.

ಏಜೆಂಸಿದಾರರ, ಚಂದಾದಾರರ ಗಮನಕ್ಕೆ

'ಐಕ್ಯರಂಗ'ದ ಚಂದಾ, ಏಜೆಂಸಿ ಹಣವನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರುತ್ತೇವೆ.

ಐಕ್ಯರಂಗ
ಎಲ್-೫೩, ಕೆ.ವಿ. ಟೆಂಪಲ್ ರಸ್ತೆ
ಸುಲ್ತಾನಪೇಟೆ, ಬೆಂಗಳೂರು-೫೬೦೦೫೩

ಹಣ 'ಐಕ್ಯರಂಗ'ದ ಹೆಸರಿಗೆ ಡಿ.ಡಿ. ಮೂಲಕ ಪಾವತಿಮಾಡುವುದು ಉತ್ತಮ. ಇದು ನೇರವಾಗಿ ಬ್ಯಾಂಕ್‌ಗೇ ಹೋಗುತ್ತದೆ. ಎಂ.ಒ. ಹೆಚ್ಚು ವಿಳಂಬವಾಗಿ ಹಣವಾಗಿ ಕೈಗೆ ಬರುತ್ತದೆ.

ವ್ಯವಸ್ಥಾಪಕರು

ಪ್ಲೈವುಡ್ ಮಾಲಿಕರ ಭಯೋತ್ಪಾದನೆಗೆ ಎಚ್ಚರಿಕೆ

ರಾಜ್ಯಾದ್ಯಾಂತ ಇಂಡಿಯನ್ ಪ್ಲಾಯ ವುಡ್ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ತಾರೀಖು: ೧೨-೩-೧೯೯೦ ರಿಂದ ದಾಂಡೇಲಿ, ಧಾರವಾಡ, ಹಂಗಾರಕಟ್ಟಾ, ನೆಟ್ಯಾನ್ (ಸುಬ್ರಮಣ್ಯಂ) ದ ಕಾರ್ಮಿಕರು ಅನಿರ್ದಿಷ್ಟ ಅವಧಿಯ ಮುಷ್ಕರ' ಮೇಲಿದ್ದಾರೆ ಎಂದು ಪ್ಲಾಯ್‌ವುಡ್ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಸಂಚಾಲಕ ಎಂ.ಬಿ. ಕಟ್ಟಿ ತಿಳಿಸಿದ್ದಾರೆ.

ದಾಂಡೇಲಿಯಲ್ಲಿ ಕಂಪನಿಯ ಕೇಂದ್ರ ಕಛೇರಿ ಇದ್ದು, ಅಲ್ಲಿ ಕಾರ್ಮಿಕರಲ್ಲಿ ಭಯದ ವಾತಾವರಣ ಹುಟ್ಟಿಸಲು ಆಡಳಿತ ವರ್ಗ, ಸರ್ಕಾರಿ ಯಂತ್ರಗಳನ್ನು ಉಪ ಯೋಗಿಸುತ್ತಿದೆ. ತಾ: ೧೪-೩-೧೯೯೦ರಂದು ದಾಂಡೇಲಿ ದಿನಾಂಕ: ೧೫-೩-೧೯೯೦ ರಂದು ಧಾರವಾಡದಲ್ಲಿ ಸರ್ವ ಸದಸ್ಯರ ಸಭೆಗಳು ನಡೆದವು. ಸರ್ವ ಸಭೆಯಲ್ಲಿ ಧಾರವಾಡ ಮತ್ತು ದಾಂಡೇಲಿ ಸಂಘಗಳ ಅಧ್ಯಕ್ಷರು ಹಾಗೂ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳು ಆದ ಕಾ॥ ವಿ.ಜೆ.ಕೆ. ನಾಯರ್ ಮಾತನಾಡುತ್ತಾ ಆಡಳಿತ ವರ್ಗ ೧೯೮೧ ರಲ್ಲಿ ನಡೆಸಿದ ದಬ್ಬಾಳಿಕೆಯನ್ನು ಈಗ ನಡೆಸಲು ಪ್ರಯತ್ನಪಟ್ಟರೆ ಸರಿಯಾದ ಪಾಠ ಕಲಿಸುತ್ತೇವೆಂದು ಎಚ್ಚರಿಕೆ ನೀಡಿದರು. ಹಾಗೂ ಇನ್ನೆರಡು ವಾರಗಳ ಒಳಗೆ ಒಪ್ಪಂದಕ್ಕೆ ಬಂದರೆ ಹಿಂದಿನ ಸೂಚನೆಯಂತೆ ೧೨ ಅಂಶಗಳ ಮೇಲೆ ಚರ್ಚಿಸುತ್ತೇವೆ, ವಿಳಂಬವಾದರೆ ಮೂಲ ಬೇಡಿಕೆಗಳಿಗೆ ಬದ್ಧರಾಗುವುದಲ್ಲದೆ ಮುಷ್ಕರದ ಅವಧಿಯ ದಿನಗಳ ಸಂಬಳದ ಬೇಡಿಕೆಯನ್ನು ಮುಂದಿಡ ಬೇಕಾಗುತ್ತದೆಂದು ಒತ್ತಿ ಹೇಳಿದರು.

ಕರ್ನಾಟಕದಲ್ಲಿ ಮಹಿಳಾ ದಿನಾಚರಣೆ

೧೮೫೭ ರಲ್ಲಿ ನ್ಯೂಯಾರ್ಕಿನ ಸಿದ್ಧ ಉಡುಪು ತಯಾರಿಸುವ ಮಹಿಳಾ ಕಾರ್ಮಿಕರು ಸಮಾನ ವೇತನ, ೮ ಗಂಟೆ ಕೆಲಸ ಮತ್ತಿತರ ಬೇಡಿಕೆಗಳ ಮೇಲೆ ಹೋರಾಟ ಆರಂಭಿಸಿದರು. ನಾಲ್ಕು ದಶಕಗಳ ಹೋರಾಟದ ನಂತರ ೧೯೧೦ ರ ಮಾರ್ಚ್ ೮ ರಂದು ಸಮಾನ ವೇತನದ ಬೇಡಿಕೆ ಈಡೇರಿಸಿ ಕೊಳ್ಳುವುದರೊಂದಿಗೆ ಈ ಹೋರಾಟ ಯಶಸ್ಸು ಕಂಡಿತು. ಅಂದಿನಿಂದ ಮಾರ್ಚ್ ೮ ನ್ನು ಅಂತರ್ರಾಷ್ಟ್ರೀಯ ಮಹಿಳಾ ದಿನವಾಗಿ ಆಚರಿಸಲಾಗುತ್ತಿದೆ. ಈ ವರ್ಷ ವಿಶ್ವಾದ್ಯಂತ ಮಹಿಳಾ ದಿನದ ೮೦ ನೇ ವಾರ್ಷಿಕೋತ್ಸವವನ್ನು ಆಚರಿಸಲಾಗಿದೆ. ಭಾರತದಲ್ಲೂ, ರಾಜ್ಯದಲ್ಲೂ ಎ.ಐ.ಡಿ. ಡಬ್ಲ್ಯು.ಎ.ನ ಘಟಕಗಳು ವಿವಿಧ ರೀತಿಗಳಲ್ಲಿ ಮಹಿಳಾ ದಿನಾಚರಣೆ ನಡೆಸಿವೆ.

ರಾಯಚೂರಿನಲ್ಲಿ ಕೋಮು ಸೌಹಾರ್ದ ಸರಪಳಿ

ರಾಯಚೂರಿನಲ್ಲಿ ಅಂದು ನೂರು ಮಕ್ಕಳು, ಮಹಿಳೆಯರು ಕೋಮು ಸೌಹಾರ್ದತೆಯ ಸರಪಳಿ ಏರ್ಪಡಿಸಿ ಇದನ್ನು ಆಚರಿಸಿದರು. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಹಾಗೂ ಜಿಲ್ಲಾ ಪರಿಷತ್ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಇದು ನಡೆಯಿತು. ಕಾರ್ಯಕ್ರಮವನ್ನು ಜಿಲ್ಲಾ ಪರಿಷತ್ ಉಪಾಧ್ಯಕ್ಷೆ ಶ್ರೀಮತಿ ಮೈತ್ರಾ ಪಾಟೀಲ್ ಉದ್ಘಾಟಿಸಿದರು.

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಇತಿಹಾಸವನ್ನು ವಿವರಿಸಿದ ಎ.ಐ.ಡಿ.ಡ.ಬ್ಲ್ಯು.ಎ. ದ ಅಧ್ಯಕ್ಷರಾದ ಶ್ಯಾಮಲಾ ಪೂಜಾರ್ ದುಡಿಯುವ ಮಹಿಳೆಯರು ಕೇವಲ ತಮ್ಮ ಸೀಮಿತ ಸಮಸ್ಯೆಗಳಿಗಾಗಿ ಮಾತ್ರ ಹೋರಾಡದೆ ವರದಕ್ಷಿಣೆ, ಬಾಲ ವಿವಾಹ, ಬಹುಪತ್ನಿತ್ವ, ದೇವದಾಸಿ ಪದ್ಧತಿ, ಮಾನಭಂಗ, ನಿರುದ್ಯೋಗಗಳ ವಿರುದ್ಧವೂ ಚಿಂತನೆ, ಹೋರಾಟ ನಡೆಸಬೇಕಲ್ಲದೆ, ಜತೆಗೆ ಎಲ್ಲರ ಸಮಸ್ಯೆಗಳಾದ ಬೆಲೆಯೇರಿಕೆ, ನಾಗರಿಕ ಸೌಲಭ್ಯ, ರಾಜಕೀಯ ಸಮಸ್ಯೆ, ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ, ಕೋಮು ಸೌಹಾರ್ದಕ್ಕಾಗಿಯೂ ಹೋರಾಡಬೇಕೆಂದು ಕರೆ ನೀಡಿದರು.

ಶಕುಂತಲಾ ಪಾಟೀಲ್‌ರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಎ.ಐ.ಡಿ.ಡ.ಬ್ಲ್ಯು.ಎ. ಕಾರ್ಯಕರ್ತೆಯರಿಂದ ಕ್ರಾಂತಿ ಗೀತೆಯ ಕಾರ್ಯಕ್ರಮವೂ ಇತ್ತು. ಶ್ರೀಮತಿ ಶಾಂತಾ ಪ್ರಾರ್ಥನೆ ಮಾಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕ ನಾಗಣ್ಣ ಸ್ವಾಗತ ಕೋರಿದರು. ಎ.ಐ.ಡಿ.ಡಬ್ಲ್ಯು.ಎ. ಕಾರ್ಯದರ್ಶಿ ಸುಲೋಚನಾ ವಂದನಾರ್ಪಣೆ ಮಾಡಿದರು.

ಬೀದರದಲ್ಲಿ ವಿಚಾರ ಸಂಕಿರಣ

ಎ.ಐ.ಡಿ.ಡಬ್ಲ್ಯು.ಎ. ಬೀದರ ಘಟಕ ಮಾರ್ಚ್ ೮ ರಂದು ಮಹಾದೇವಪ್ಪ, ರಾಂಪುರೆ ಕಾಲೋನಿಯಲ್ಲಿ ಒಂದು ವಿಚಾರ ಸಂಕಿರಣ ಏರ್ಪಡಿಸಿತ್ತು. ಶ್ರೀಮತಿ ವಿಜಯಶ್ರೀ ಸಬರದ ಅವರು ಮುಖ್ಯ ಅತಿಥಿಯಾಗಿದ್ದರು. ಆರ್ಥಿಕವಾಗಿ ಮಹಿಳೆ ಸುಧಾರಿಸಿ ಸ್ವತಂತ್ರಳೆಂದು ಭಾವಿಸಲಾಗದು, ಬದಲಾಗಿ ಆರ್ಥಿಕ ಸ್ವಾತಂತ್ರ್ಯದೊಂದಿಗೆ, ಬೌದ್ಧಿಕ, ಸಾಮಾಜಿಕ, ರಾಜಕೀಯವಾಗಿ ಬೆಳೆಯಬೇಕಾದದ್ದು ಕೂಡಾ ಅಷ್ಟೇ ಅವಶ್ಯಕ, ಆದ್ದರಿಂದ ಸಂಘಟನೆ ಅನಿವಾರ್ಯ ಎಂದು ಅವರು ಹೇಳಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಸ್ಥಳೀಯ ಘಟಕದ ಸಂಚಾಲಕಿ ನೀಲಾ ಕೆ. ಇಂದಿನ ವ್ಯವಸ್ಥೆಯಲ್ಲಿ ಮಹಿಳೆಯರ ಶೋಷಣೆಯ ವಿವಿಧ ಮುಖಗಳ ಬಗ್ಗೆ ಹೇಳುತ್ತಾ ಮಹಿಳೆ ತನ್ನ ಜಡತ್ವದಿಂದ ಹೊರ ಬಂದು ಈ ವ್ಯವಸ್ಥೆಯನ್ನು ವಿರೋಧಿಸಬೇಕೆಂದು ಕರೆ ಕೊಟ್ಟರು.

ಸಹ ಸಂಚಾಲಕಿ ಶ್ರೀಮತಿ ಸುದಿಷ್ಣಾ ದೇವೇಂದ್ರ ಕಮಾಲ ಅವರ ಅಧ್ಯಕ್ಷತೆಯಲ್ಲಿ ವಿಚಾರ ಸಂಕಿರಣ ನಡೆಯಿತು. ವೀರಾ ಪಾಟೀಲ ಸ್ವಾಗತಿಸಿದರು.

ರೌಡಿ ಧಾಳಿಗೆ ಹೋಟೆಲ್ ಕಾರ್ಮಿಕರ ಪ್ರತಿಭಟನೆ

ಕಸ್ತೂರ್‌ಬಾ ರಸ್ತೆಯಲ್ಲಿರುವ ಶ್ರೀ ರಾಜ್ ಹೋಟೆಲ್ ಮುಚ್ಚುವುದನ್ನು, ಹೋಟೇಲಿ ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೆ ಧಾಳಿಯನ್ನು ಖಂಡಿಸಿ ಮಾರ್ಚ್ ೨೩ ರಂದು ಶ್ರೀರಾಜ್ ಹೋಟೇಲಿನ ಕಾರ್ಮಿಕರು ಭಾರೀ ಮೆರವಣಿಗೆ ನಡೆಸಿ ಪೋಲೀಸ್ ಕಮೀಷನರ್ ಮತ್ತು ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು. ಸಿ.ಐ.ಟಿ.ಯು.ಗೆ ಸೇರಿದ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ ಈ ಪ್ರತಿಭಟನೆಯ ನೇತೃತ್ವ ವಹಿಸಿತ್ತು. ಮನವಿ ಪತ್ರಸಲ್ಲಿಸುವಾಗ ಸಿ.ಐ.ಟಿ.ಯು. ಹಾಗೂ ಸಿ.ಪಿ.ಐ.(ಎಂ) ನಾಯಕರೂ ಸಂಘದ ಪದಾಧಿಕಾರಿಗಳೊಂದಿಗೆ ಇದ್ದರು. ಮನವಿ ಪತ್ರದ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಕಾರ್ಮಿಕ ಆಯುಕ್ತರು, ಪೋಲೀಸ್ ಕಮೀಷನರ್ ಆಶ್ವಾಸನೆ ನೀಡಿದರು.

ಚಿತ್ರ ವಿಮರ್ಶೆ

ಬೆಳ್ಳಿ ಬೆಳಕು ಸ್ವಲ್ಪ ಚಿಂತನೆಗೀಡು ಮಾಡಬಲ್ಲ ಚಿತ್ರ

ಇತ್ತೀಚೆಗೆ ಬೆಂಗಳೂರಿನ ಬಾದಾಮಿ ಹೌಸ್‌ನಲ್ಲಿ ಪ್ರಶಸ್ತಿ ವಿಜೇತ 'ಬೆಳ್ಳಿ ಬೆಳಕು' ಎಂಬ ಇನ್ನೂ ಬಿಡುಗಡೆಯಾಗದಿರುವ ಕನ್ನಡ ಚಲನ ಚಿತ್ರದ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಸಹಕಾರಿ ಚಳುವಳಿಯ ಪ್ರಯೋಗವೊಂದರ ಕಥಾವಸ್ತುವನ್ನು ಆಧರಿಸಿದ ಕೊಂಡಳ್ಳಿ ಶಿವರಾಂ ಎಂಬ ಯುವ ನಿರ್ದೇಶಕನ ಚೊಚ್ಚಲ ಚಿತ್ರವಾದ 'ಬೆಳ್ಳಿ ಬೆಳಕು' ೧೯೮೯ ನೇ ಸಾಲಿನ ದ್ವಿತೀಯ ಶ್ರೇಷ್ಠ ಚಿತ್ರವೆಂದು ರಾಜ್ಯ ಪ್ರಶಸ್ತಿಗಳಿಸಿದೆ. ಪ್ರಮುಖ ಪಾತ್ರಗಳಲ್ಲಿ ಲೋಕೇಶ್ ಮತ್ತು ಅರ್ಚನಾ ಉತ್ತಮವಾಗಿ ಅಭಿನಯಿಸಿರುವುದಲ್ಲದೆ ಕೆಲವು ಹೊಸ ನಟರು ಹಾಗೂ ಹಳ್ಳಿಯ ಮುಗ್ಧ ಜನರೂ ಸಹ ತಮ್ಮ ನೈಜ ಪ್ರತಿಭೆಯನ್ನು ಚಿತ್ರ ಬೆಳಕಿಗೆ ತಂದಿದೆ. ಜಾಹ್ನವಿ ಎಂಬ ಹುಡುಗಿಗೆ ಶ್ರೇಷ್ಠ ಬಾಲ ನಟಿ ಪ್ರಶಸ್ತಿ ತಂದುಕೊಟ್ಟಿದೆ. ಮಾಜಿ ಶಾಸಕ ಭೂಪತಿಯವರು ಊರಗೌಡನ ಮಗ ಶಿವಲಿಂಗನ ಪಾತ್ರದಲ್ಲಿ ಕಾಣಿಸಿ ಕೊಂಡಿರುವುದು ಚಿತ್ರದ ವಿಶೇಷಗಳಲ್ಲೊಂದಾಗಿದೆ.

ಕೆ.ಎಂ.ಎಫ್. ಸಂಸ್ಥೆಯ ನೆರವು ಪಡೆದಿರುವ ಈ ಚಿತ್ರದ ಕಥಾವಸ್ತು ಪ್ರಚಾರದ ಮಾದರಿಯಲ್ಲಿದ್ದರೂ ಗ್ರಾಮೀಣ ಪರಿಸರದ ಸಂದರ್ಭಗಳಲ್ಲಿ ಜೀವಂತವಾಗಿ ನಿರೂಪಿಸುವುದರಲ್ಲಿ ನಿರ್ದೇಶಕರು ಬಹು ಮಟ್ಟಿಗೆ ಯಶಸ್ವಿಯಾಗಿದ್ದಾರೆಂದು ಹೇಳ ಬಹುದಾಗಿದೆ. ಈ ಹಿಂದೆ ಬಿಡುಗಡೆಯಾಗಿದ್ದ (ಮಂಥನ್) ಎಂಬ ಹಿಂದಿ ಚಿತ್ರದ ಕಥಾ ವಸ್ತುವಿನ ಅನುಕರಣೆ ಎಂದೆನಿಸಬಹುದಾದರೂ ಕರ್ನಾಟಕದ ಹಳ್ಳಿಗಳ ವಿಶಿಷ್ಟ ಪರಿಸ್ಥಿತಿಯನ್ನು ಚೆನ್ನಾಗಿ ಬಳಸಿಕೊಂಡಿರುವ ಕಾರಣ ನಮ್ಮ ರಾಜ್ಯದ ಗ್ರಾಮೀಣ ಪ್ರೇಕ್ಷಕರನ್ನು ಆಕರ್ಷಿಸಬಹುದಾಗಿದೆ.

ಹಳ್ಳಿಗಳಲ್ಲಿನ ಕಿತ್ತು ತಿನ್ನುವ ಬಡತನ, ಜಾತೀಯತೆಯ ವಿಷ ವರ್ತುಲ, ಪಾಳೆಯಗಾರಿ ಪಟ್ಟಭದ್ರ ಶಕ್ತಿಗಳ ಕಪಿಮುಷ್ಟಿ ಹಾಗೂ ರಾಜಕೀಯ ಕ್ರೌರ್ಯಗಳನ್ನು ಚಿತ್ರಕತೆಯಲ್ಲಿ ಅಳವಡಿಸಲಾಗಿದೆ. ಮಂಡ್ಯ ಶೈಲಿಯ ಗ್ರಾಮೀಣ ಸೊಬಗಿನ ಸಂಭಾಷಣೆ ಚಿತ್ರಕ್ಕೆ ವಿಶೇಷ ಮೆರುಗು ನೀಡುವಲ್ಲಿ ಸಹಾಯಕವಾಗಿದೆ. ಆದರೆ ಅಲ್ಲೊಂದು ಇಲ್ಲೊಂದು ಹಂಸಲೇಖ ಮಾದರಿಯ ದ್ವಂದಾರ್ಥದ ಶಬ್ದಗಳನ್ನು ಜೋಡಿಸಲಾಗಿದೆ. ನಿಸರ್ಗ ಸೌಂದರ್ಯದಿಂದ ಸೊಬಗನ್ನು ಸೂಸುವ ಕೆಲವು ಹೊರಾಂಗಣ ಚಿತ್ರೀಕರಣದ ದೃಶ್ಯಗಳು, ಛಾಯಾಗ್ರಹಣ, ಸಂಗೀತ ಸಂಯೋಜನೆ ಚಿತ್ರದ ತಾಂತ್ರಿಕಗುಣಮಟ್ಟವನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿದೆ.

ಹಾಲು ಉತ್ಪಾದಕರ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಹಳ್ಳಿಯ ಬಡವರಿಗೆ ಅಲ್ಪ ಸ್ವಲ್ಪ ಪರಿಹಾರ ಒದಗಿಸಲು ಪ್ರಯತ್ನಿಸುವ ಆದರ್ಶ ಯುವಕ ಚಿತ್ರದ ಕೇಂದ್ರ ಬಿಂದು. ಸಹಕಾರಿ ಸಂಘಗಳಲ್ಲಿನ ಭ್ರಷ್ಟತೆಯಿಂದ ಭ್ರಮನಿರಸನಗೊಂಡು ರಾಜ್ಯ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಪದವಿ ರಾಜೀನಾಮೆ ನೀಡುತ್ತಾನೆ. ಇಂದಿನ ಸಮಾಜ ವ್ಯವಸ್ಥೆಯಲ್ಲಿ ಸಹಕಾರಿ ಚಳುವಳಿಯ ಕೆಲವೊಂದು ಇತಿಮಿತಿಗಳನ್ನು ವಾಸ್ತವವಾಗಿ ಪ್ರತಿಬಿಂಬಿಸುವ 'ಬೆಳ್ಳಿಬೆಳಕು' ಪ್ರೇಕ್ಷಕರನ್ನು ಸ್ವಲ್ಪ ಮಟ್ಟಿಗೆ ಚಿಂತನೆ ಗೀಡು ಮಾಡಬಲ್ಲದು.

ಕಾಂಗ್ರೆಸ್ ಪಕ್ಷದ ಮೂಲಗುಣ ಬಯಲು ಮಾಡುವ
ಕರ್ನಾಟಕ ಬಜೆಟ್

ಕರ್ನಾಟಕದಲ್ಲಿ ಅಭಿವೃದ್ಧಿ, ಬೆಳವಣಿಗೆ ಸ್ಥಗಿತವಾಗಿದೆ. ನೀರಾವರಿ ವಿದ್ಯುತ್ ಅಭಿವೃದ್ಧಿಯಾಗದೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಅಭಿವೃದ್ಧಿಯ ಇಂತಹ ಅಗತ್ಯಗಳ ದೃಷ್ಟಿಯಿಂದ ಕರ್ನಾಟಕ ಇತರ ೧೦೬ ಅಂಕಗಳ ಹಂತದಿಂದ ೯೮ ಅಂಕಗಳ ಹಂತಕ್ಕೆ ಇಳಿದಿದೆ. ಇದರ ಪರಿಣಾಮವಾಗಿ ಕೈಗಾರಿಕೆಗಳು, ಉದ್ದಿಮೆಗಳ ಬೆಳವಣಿಗೆ ಕುಂಠಿತವಾಗಿದೆ. ನಿರುದ್ಯೋಗ ಹೆಚ್ಚಾಗಿದೆ. ವಸತಿಸಮಸ್ಯೆ ಭಯಂಕರವಾಗಿದೆ ಎಂದೆಲ್ಲಾ ಇತ್ತೀಚಿಗೆ ರಾಜ್ಯ ವಿಧಾನ ಸಭೆಯಲ್ಲಿ ಮಂಡಿಸಲಾದ ಬಜೆಟ್ ಸಾರಿದೆ. ಇದನ್ನೆ ಹೊಸದಾಗಿ ಆಯ್ಕೆಯಾದ ಎಲ್ಲಾ ಬಂಡವಾಳಶಾಹಿಯ ನಿಜವಾದ ಪರಿಹಾರವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆಯೇ? ಬಜೆಟ್‌ನಲ್ಲಿ ಅವರು ಸೂಚಿಸಿರುವ ಪರಿಹಾರವೇನು? ಇದು ಆಯ್ಕೆಯಾದ ಪಾಟೀಲ್ ಸರ್ಕಾರದ ಪಕ್ಷಗಳು ಹೇಳುತ್ತವೆ. ಮೂಲಗುಣವನ್ನು ಬಯಲಿಗೆಳೆಯುತ್ತದೆ.

ರಾಜ್ಯದ ಅಭಿವೃದ್ಧಿಗೆ ಹೆಚ್ಚು ಹಣ ಬೇಕು. ಇದಕ್ಕೆ ಅವರು ಸೂಚಿಸಿರುವ ಮಾರ್ಗಗಳು ನಾಲ್ಕು. ಈಗಾಗಲೇ ತೆರಿಗೆ ಹೊರೆಯಿಂದ ಬೆಲೆ ಏರಿಕೆಯಿಂದ ಬಳಲುತ್ತಿರುವ ನಾಗರಿಕರ ಮೇಲೆ ೧೪೫ ಕೋಟಿ ರೂಗಳ ತೆರಿಗೆ ಹೊರೆ: ಈ ತೆರಿಗೆ ಹೊರೆ ಹಾಗೂ ಬೆಲೆ ಏರಿಕೆಯಿಂದ ಬಡವರಿಗೆ ಅಷ್ಟಿಷ್ಟು ಪರಿಹಾರ ನೀಡಲು ಶಾಲಾ ಮಕ್ಕಳಿಗೆ ನೀಡಲಾಗುತ್ತಿದ್ದ ಉಚಿತ ಪುಸ್ತಕ, ಸಮವಸ್ತ್ರ, ಜನತಾ ಸೀರೆ ಪಂಚೆಗಳಿಗೆ ನೀಡುವ ಹಣ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ವ್ಯರ್ಥವೆಂದು ಅದನ್ನು ನಿಲ್ಲಿಸುವುದು ಅಂತಹ ಯಾವುದೇ ಪರಿಹಾರ ನೀಡುವ ಕೆಲಸ ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲವೆಂದು ಪರಿಗಣಿಸುವುದು: ರಾಜ್ಯದ ಯೋಜನೆಯೆಲ್ಲವೂ ಲಾಭ ತರುವ, ಹೂಡಿದ ಹಣವನ್ನು ತರುವ ಯೋಜನೆಗಳನ್ನು ಮಾತ್ರವೇ ಆರಂಭಿಸಬೇಕು. ನಷ್ಟವಾಗುವ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸಬೇಕು; ರಾಜ್ಯದ ಅಭಿವೃದ್ಧಿಗೆ ವಿದೇಶಿ ಬ್ಯಾಂಕ್ ಮೊದಲಾದ ವಿದೇಶಿ ಸಂಸ್ಥೆಗಳಿಂದ ವಿಪುಲವಾಗಿ ಹಣಪಡೆಯಬೇಕು ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.

ಈ ನಾಲ್ಕು ಸೂಚನೆಗಳನ್ನು ನೋಡಿದರೆ ಕಾಂಗ್ರೆಸ್‌ನ ಯೋಚನೆಯ ದಿಕ್ಕು ಹೊಸ ಆರ್ಥಿಕ ನೀತಿಯ, ಸರ್ವಾಧಿಕಾರಿ ಅಧಿಕಾರ ಕೇಂದ್ರೀಕರಣದ ನೀತಿಯಿಂದ ಸ್ವಲ್ಪವೂ ಬದಲಾಗಿಲ್ಲವೆಂಬುದು ಕಾಣುತ್ತದೆ. ರಾಜ್ಯಗಳ ಆರ್ಥಿಕ ಸಂಕಷ್ಟಕ್ಕೆ ಆರ್ಥಿಕ ಹಾಗೂ ರಾಜಕೀಯ ಅಧಿಕಾರ ವಿಕೇಂದ್ರೀಕರಣವೇ ಮದ್ದು ಎಂಬ ಪ್ರಾಥಮಿಕ ವಿಷಯವನ್ನು ಅವರು ತಾವೇ

ಇಲ್ಲಿಯ ಜನತೆಯ ಜೀವನಕ್ಕಾಗಿ ಅವರಿಗೆ ಬೇಕಾದ ಬಟ್ಟೆ ಬರೆ, ಆರೋಗ್ಯ ಒದಗಿಸುವುದಕ್ಕಾಗಿ ಅಲ್ಲ ಕಾಂಗ್ರೆಸ್‌ಸರ್ಕಾರ ಆಡಳಿತಕ್ಕೆಬಂದಿರುವುದು. ರಾಜ್ಯ ಶ್ರೀಮಂತರಿಗೆ ನೋವಾಗದಂತೆ ಅವರಿಗೆ ಲಾಭ ಮಾಡಿಕೊಡುವ ಉಪಾಯಗಳನ್ನು ಕಂಡು ಹಿಡಿಯಲು. ಅದಕ್ಕಾಗಿ ರಾಜ್ಯದ ಜನತೆಯನ್ನು ಬಡತನದ ಆಳವಾದ ಪ್ರಪಾತಕ್ಕೆ ನೂಕಲು ಎನ್ನುವುದನ್ನು ಈ ಬಜೆಟ್ ಸಾಬೀತು ಪಡಿಸಿದೆ.

ಅಧಿಕಾರದಲ್ಲಿದ್ದು ಪೆಟ್ರೋಲ್ ಬಿಲ್, ಫೋನ್ ಬಿಲ್ ಸಂಬಳ ಸಾರಿಗೆಗಳನ್ನು ನೀಡಲು ಕಷ್ಟಪಡುತ್ತಿರುವಾಗಲೂ, ತಮ್ಮನ್ನು ಜನತೆಯ ಆಶೋತ್ತರಗಳನ್ನು ಈಡೇರಿಸಲು ತಿಣುಕುತ್ತಿರುವಾಗಲೂ ತಿಳಿದು ಕೊಳ್ಳಲು ಪ್ರಯತ್ನಿಸಿಲ್ಲ. ರಾಜ್ಯದ ಅಭಿವೃದ್ಧಿಗೆ ರಾಜ್ಯದೊಳಗೆ, ದೇಶದೊಳಗೆ ಸಂಪನ್ಮೂಲವನ್ನು ಹುಡುಕುವ ಶ್ರೀಮಂತರಿಂದ ಗುತ್ತೇದಾರಿಗಳಿಂದ ಹಣ ವಸೂಲಿ ಮಾಡುವ ಬದಲು ಅಭಿವೃದ್ಧಿಯ ಲಾಭದ ಬಹುಭಾಗವನ್ನು ಕಬಳಿಸುವ ಇವರಿಂದ ಅಭಿವೃದ್ಧಿಯ ವೆಚ್ಚವನ್ನು ಕಕ್ಕಿಸುವ ಬದಲು ಬಡವರಿಂದ ಅದನ್ನು ಪಡೆಯುವ ಸಂಚು ಇದು. ಕೃಷ್ಣಾ ಮೇಲ್ದಂಡೆ ಯೋಜನೆಯಾಗಲಿ ಯಾವುದೇ ಯೋಜನೆಯಾಗಲಿ ಅದಕ್ಕೆ ಹಣ ಹುಟ್ಟಬೇಕಾದದ್ದು ವಿದೇಶಿಸಾಲಗಳ ಮೂಲಕವಂತೆ. ಇದಕ್ಕ ಕೇಂದ್ರ ಸರ್ಕಾರ ಯಾವುದೇ ಅಡೆತಡೆಯಿಲ್ಲದೆ ಅನುಮತಿ ನೀಡಬೇಕಂತೆ. ವಿದೇಶಿ ಸಾಲದ ಹೊರೆ ಈಗಾಗಲೇ ಒಂದು ಲಕ್ಷ ಕೋಟಿ ರೂಗಳಿಗೂ ಮಿರಿ ಹೋಗುತ್ತಿರುವಾಗ, ಕೇಂದ್ರದ ಬಜೆಟ್‌ನಲ್ಲಿ ಸಾಲದ ಬಡ್ಡಿ, ಕಂತುಗಳನ್ನು ತೀರಿಸುವುದೇ ಪ್ರಮುಖ ವೆಚ್ಚವಾಗಿರುವಾಗ ಮತ್ತಷ್ಟು ಸಾಲಮಾಡುವುದೇ ಇವರಿಗೆ ಹೊಳೆದಿರುವ ದಾರಿ.

ಇನ್ನು ನಿರುದ್ಯೋಗದ ಪ್ರಶ್ನೆ: ರಾಜ್ಯ ಸರ್ಕಾರದ ಬಜೆಟ್ ಈ ಬಗ್ಗೆ ಕಾಂಗ್ರೆಸ್ ಪಕ್ಷದ ಗೋಸುಂಬೆತನವನ್ನು ಬೆಳಕಿಗೆ ತರುತ್ತದೆ. ರಾಜ್ಯ ಸರ್ಕಾರ ನಿರುದ್ಯೋಗವನ್ನು ತನ್ನಪ್ರಥಮ ಶತ್ರುವೆಂದು ಪರಿಗಣಿಸುತ್ತದೆಯಂತೆ. ಹಾಗಾದರೆ ಈ ಪ್ರಥಮ ಶತ್ರುವನ್ನು ಹೊಡೆದೋಡಿಸಲು ಮಾಡಲಾಗಿರುವ ಯೋಜನೆಗಳೇನು?

ರಾಜೀವ್‌ಗಾಂಧಿಯವರ ಜವಾಹರ್ ರೋಜಗಾರ್ ಯೋಜನೆಯನ್ನು ತೀವ್ರವಾಗಿ ಜಾರಿ ಮಾಡುವುದು ಅದರಿಂದ ವರ್ಷಕ್ಕೆ ೮೨೩ ಲಕ್ಷ ಮಾನವ ದಿನಗಳ ಕೆಲಸವನ್ನು ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳಿಗೆ ಒದಗಿಸುವುದು. ಹೀಗೆಂದಾಕ್ಷಣ ಯಾರಿಗಾದರೂ ಎಷ್ಟೊಂದು ದೊಡ್ಡ ಯೋಜನೆಯೆನ್ನಿಸಬಹುದು. ಆದರೆ ಇದರ ಅರ್ಥ ಎಂಟೂ ಕಾಲು ಲಕ್ಷ ಜನರಿಗೆ ನೂರು ದಿನಗಳ ಕಾಲ ಕೂಲಿಕೆಲಸವನ್ನು ಒದಗಿಸುವುದು ಎಂದರ್ಥ. ಇದು ಹಿಂದಿನ ವರ್ಷಗಳಲ್ಲಿದ್ದ ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಇತ್ಯಾದಿ ಯೋಜನೆಗಳೂ ಸೇರಿ.ಈ ಯೋಜನೆಯಲ್ಲಿ ಹಣದ ಹೆಚ್ಚಳ ಈಗಾಗಲೇ ಕೇಂದ್ರ ಯೋಜನಾ ಆಯೋಗ ರಾಜ್ಯದ ಯೋಜನೆಯನ್ನು ಮಂಜೂರು ಮಾಡಿದ್ದನ್ನು ನೆನಪಿಸಿಕೊಳ್ಳಬೇಕು. ಆದ್ದರಿಂದ ರಾಷ್ಟ್ರೀಯ ರಂಗದ ಕೇಂದ್ರ ಸರ್ಕಾರದ ನೀತಿ ಇಲ್ಲಿ ಪ್ರತಿಫಲಿತವಾಗಿರುವುದನ್ನು ಗುರುತಿಸಬೇಕು.

ಆದರೆ ಅದೇ ಸಮಯದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ೧೨, ೩೩,೩೯೭ ಜನರ ಉದ್ಯೋಗದ ಪ್ರಶ್ನೆಯೇನು? ಇದರಲ್ಲಿ ಗ್ರಾಮೀಣ ನಿರುದ್ಯೋಗ ಸೇರಿಲ್ಲವೆಂಬುದನ್ನು ಮರೆಯಬಾರದು. ಈ ಯುವ ಜನರ ಗತಿಯೇನು? ಬಜೆಟ್‌ನಲ್ಲಿ ಉತ್ತರವಿದೆ. ಆದರೆ ಎಂತಹ ಕ್ರೂರ ಉತ್ತರವೆಂಬುದು ಅದು ಪರಿಣಾಮದಲ್ಲಿ ಕಂಪಾಗಲೇ ತಿಳಿಯಬೇಕು.

ಯೋಜನೇತರ ವೆಚ್ಚಗಳು ಹೆಚ್ಚಾಗಿ ಬೆಳೆದಿವೆ. ಇವು ತೀವ್ರವಾಗಿ ಬೆಳೆದಿರುವುದರ ಕಾರಣ ಸರ್ಕಾರದಲ್ಲಿ ವೇತನದ ವೆಚ್ಚ ಏರಿಕೆ. ಆದುದರಿಂದ ಅದನ್ನು ಕಡಿತಗೊಳಿಸಬೇಕು ಎಂದರೆ ಈಗಾಗಲೇ ಲೋಕೋಪಯೋಗಿ ಸಚಿವರು ಘೋಷಿಸಿರುವಂತೆ ಎಲ್ಲಾ ಇಲಾಖೆಗಳಲ್ಲಿಯೂ ಹುದ್ದೆಗಳನ್ನು ಕಡಿಮೆ ಮಾಡಬೇಕು. ಇದು ನಿರುದ್ಯೋಗವನ್ನು ಹೋಗಲಾಡಿಸುವ ಕಾಂಗ್ರೆಸ್ ಮಾದರಿ. ಇದರ ಜೊತೆಗೆ ನಷ್ಟವಾಗುತ್ತಿರುವ ಸರ್ಕಾರಿ ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸಿಕೊಡಲು ಹಿಂಜರಿಯಬಾರದು ಎಂಬ ಯೋಚನೆ. ಖಾಸಗಿಯವರಿಗೆ ವಹಿಸಿಕೊಟ್ಟ ಕೂಡಲೇ ಏನಾಗುತ್ತದೆ? ಹುದ್ದೆಗಳ ಸೃಷ್ಟಿಯಾಗುವುದೋ? ಅಥವಾ ಇದ್ದ ಹುದ್ದೆಗಳೂ ಕೂಡ ಕಡಿತವಾಗುವುದೋ? ಇದು ನಿರುದ್ಯೋಗ ನಿವಾರಣೆಯ ಮತ್ತೊಂದು ಕಾಂಗ್ರೆಸ್ ಮಾದರಿ. ಇನ್ನು ಅದಕ್ಕಿಂತ ಗಂಭೀರವಾದ ಮಾದರಿಯನ್ನು ನೋಡಿ: ಒಂದು ಕಡೆ ಬಜೆಟ್ ಹೀಗೆ ಹೇಳುತ್ತದೆ.

"ರಾಜ್ಯದ ಕೈಗಾರಿಕಾ ನೀತಿಯಲ್ಲಿ ಎಲೆಕ್ಟ್ರಾನಿಕ್ ಮತ್ತು ಉಚ್ಚ ತಂತ್ರಜ್ಞಾನದ ~~ಆಧುನಿಕ~~ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗುವುದು" ಮತ್ತೊಂದೆಡೆ ಹೇಳಲಾಗಿದೆ.

"ಸರ್ಕಾರ ಬಂಡವಾಳದ ಹೂಡಿಕೆ ಮಾತ್ರವಲ್ಲ, ಉದ್ಯೋಗಗಳ ಹೆಚ್ಚಳಕ್ಕೂ ಗಮನ ಕೊಡಲಾಗುತ್ತದೆ. ಏಕೆಂದರೆ ಇಂದಿನ ತಂತ್ರಜ್ಞಾನ ಹೆಚ್ಚು ಬಂಡವಾಳ ಬಯಸುವ ತಂತ್ರಜ್ಞಾನವಾಗಿದೆ ಆದ್ದರಿಂದ". ಇದರಿಂದ ರಾಜ್ಯ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲಾಗುವುದಂತೆ. ಉಚ್ಚ ತಂತ್ರಜ್ಞಾನದ, ರಫ್ತು ಮಾಡಲ್ಪಡುವ ಕೈಗಾರಿಕೆಗಳಿಗೆ ಆದ್ಯತೆ ಎಂದರೆ ಉದ್ಯೋಗ ಹೆಚ್ಚು ಸೃಷ್ಟಿಯಾಗುವುದು ಎಂದು ಅರ್ಥವಾಗುವುದೋ ಉದ್ಯೋಗಾವಕಾಶ ಕಡಿಮೆ ಇರುವ ಕೈಗಾರಿಕೆಗಳು ಎಂದು ಅರ್ಥವಾಗುವುದೋ? ಹೀಗೆ ಕಾಂಗ್ರೆಸ್ ಬಜೆಟ್ ಕೈಗಾರಿಕೆಗಳ ವಿಷಯ ಬಂದಾಗ ಉಚ್ಚ ತಂತ್ರಜ್ಞಾನಕ್ಕೆ, ಖಾಸಗೀಕರಣಕ್ಕೆ, ರಫ್ತಿಗೆ ಬೆಂಬಲ ನೀಡುತ್ತಾ ಉದ್ಯೋಗದ ವಿಷಯ ಬಂದಾಗ ನಿರುದ್ಯೋಗದ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ ಸಾಗಿದೆ.

ಇನ್ನು ಒಂದು ವಿಶೇಷವಿದೆ. ಗೃಹ ನಿರ್ಮಾಣ ಹೆಚ್ಚು ಉದ್ಯೋಗಾವಕಾಶ ನೀಡುವುದಂತೆ. ಆದ್ದರಿಂದ ಗೃಹ ನಿರ್ಮಾಣ ಮಂಡಲಿ ಹನ್ನೆರಡ ಸಾವಿರ (!!!) ಮನೆಗಳನ್ನು ಕಟ್ಟಿಸುವ ಮೂಲಕ ಉದ್ಯೋಗಾವಕಾಶ ಹೆಚ್ಚಿಸುವುದಂತೆ ಇದರಿಂದ ಎಷ್ಟು ಲಕ್ಷ ಜನಕ್ಕೆ ಉದ್ಯೋಗ ಸಿಗುವುದೋ ಇನ್ನೂ ಲೆಕ್ಕ ಸಿಕ್ಕಿಲ್ಲ.

ಇನ್ನೂ ಗ್ರಾಮೀಣ ನಿರುದ್ಯೋಗ, ಅರೆ

ಕರ್ನಾಟಕದ ಕಾಂಗ್ರೆಸ್ ಬಜೆಟ್ ಸ್ವಸ್ವರೂಪವನ್ನು ಹೇಳುವುದಾದರೆ, ರಾಜ್ಯ ಸಂಪನ್ಮೂಲಗಳು ಹಾಗು ರಾಜ್ಯ ಜನರ ಶ್ರಮವನ್ನು ಹೆಚ್ಚು, ಹೆಚ್ಚು ಪ್ರಮಾಣದಲ್ಲಿ ದೇಶದ ಹೊರಗಿರುವ ಜನರಿಗೆ ರಫ್ತು ಎಂಬ ಹೆಸರಿನಲ್ಲಿ ಅಗ್ಗವಾಗಿ ಮಾರಬೇಕು. ಈ ಕೆಲಸಕ್ಕೆ ಬೇಕಾದ ಬಂಡವಾಳಕ್ಕೆ ದೇಶದ ಬಂಡವಾಳ ಶಾಹಿಗಳು, ಲಾಭ ಕೋರರಿಗೆ ಒಂದಿಷ್ಟು ಶ್ರಮವಾಗದಂತೆ ಹೊರದೇಶದಿಂದವಿಪುಲ ಸಾಲ ಪಡೆಯಬೇಕು. ಅದಕ್ಕೆ ಬಡ್ಡಿಯನ್ನು ಸಾಲದ ಕಂತುಗಳನ್ನು ಮುಂದಿನ ಹಲವು ತಲೆಮಾರುಗಳು ನಿರಂತರವಾಗಿ ತೆರುತ್ತಲೇ ಇರಬೇಕು.

ಉದ್ಯೋಗ ವಿದ್ಯಾವಂತರ ನಿರುದ್ಯೋಗದ ಬಗ್ಗೆ ದೊಡ್ಡ ಮಾತನಾಡುವ ಕಾಂಗ್ರೆಸ್ ಬಜೆಟ್ ಈ ನಿರುದ್ಯೋಗಿಗಳ, ಅರೆ ಉದ್ಯೋಗಿಗಳಿಂದ ಕೃಷಿ ಕಾರ್ಮಿಕರ, ನಗರಗಳ ಬಡವರ ಬಡತನಕ್ಕೂ ಶಾಲೆಗಳಲ್ಲಿ ಉಚಿತ ಸಮವಸ್ತ್ರ, ಪಠ್ಯ ಪುಸ್ತಕಗಳ ವಿತರಣೆಗೂ ಏನು ಸಂಬಂಧ ಕಂಡಿಲ್ಲ. ಅದು ರಾಜ್ಯ ಅಭಿವೃದ್ಧಿಗೆ ಅಗತ್ಯವಿಲ್ಲದ ವ್ಯರ್ಥ ಬಂಡವಾಳ, ಭಿಕ್ಷಾ ಪ್ರವೃತ್ತಿ ಹೆಚ್ಚಿಸುವ ಯೋಜನೆಯಂತೆ. ಈ ಬಡ ನಿರುದ್ಯೋಗಿಗಳ ಅರೆ ಉದ್ಯೋಗಿಗಳ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವೆನ್ನುವುದು ಅವರ ನಿರುದ್ಯೋಗವನ್ನು ಉಂಟು ಮಾಡಿರುವ ವ್ಯವಸ್ಥೆ ಮಾಡಬೇಕಾಗಿರುವ ಮೊದಲ ಕರ್ತವ್ಯವೆಂದು ಇವರಿಗೆ ಅನ್ನಿಸಲಿಲ್ಲ. ಆದುದರಿಂದ ಏಕ್ ದಂ ಕಡಿತ. ಬಡವರಿಗೆ ಸೀರೆ ಪಂಚೆಯ ಕಾರ್ಯಕ್ರಮವನ್ನು ಕೈ ಬಿಡಲಾಗಿದೆ. ಒಂದೇ ಬಾರಿಗೆ ಕೈ ಬಿಡುವುದಕ್ಕೆ ಬದಲಾಗಿ ಹಂತ ಹಂತವಾಗಿ ಕೈ ಬಿಡುವುದೆಷ್ಟೇ! ಅಂದರೆ ಅವುಗಳನ್ನು ನೇಯುತ್ತಿದ್ದ ನೇಕಾರರು ಹಂತ ಹಂತವಾಗಿ ಸಾಯಬಹುದಷ್ಟೇ.

ಇನ್ನು ತೆರಿಗೆ ಏರಿಕೆಯ ವಿವರಗಳನ್ನು ಹೇಳಲೇ ಬೇಕಾಗಿಲ್ಲ. ಸರ್ಕಾರಿ, ಖಾಸಗಿ ಕಂಪನಿಗಳ ಉದ್ಯೋಗಿಗಳು, ಸ್ವ ಉದ್ಯೋಗ ಗಳೆಲ್ಲರ ಮೇಲೆ ತೆರಿಗೆ ಹೇರಿಕೆ. ಮೋಟಾರ್ ವಾಹನಗಳ ಮೇಲೆ ತೆರಿಗೆ ಹೇರಿಕೆ ಇವು ಈಗಾಗಲೇ ಏರಿದ ಬೆಲೆ ಯಿಂದ ನರಳುತ್ತಿರುವವರ ಮೇಲೆ ಬರೆ ಎಳೆದಂತೆ. ಸ್ಟಾಂಪ್‌ಗಳ ವೆಚ್ಚವನ್ನು ಏರಿಸಿರುವುದಂತೂ ಎಲ್ಲರ ಮೇಲೆ ಮುಖ್ಯವಾಗಿ ರೈತರ ಮೇಲೆ ದೊಡ್ಡ ಹೊಡೆತ. ಜಮೀನು ಅಡವಿಟ್ಟು ಬ್ಯಾಂಕ್ ಸಹಕಾರಿ ಸಂಘಗಳಿಂದ ಸಾಲ ಪಡೆಯುವುದಕ್ಕೂ ಹೆಚ್ಚಿನ ಸ್ಟಾಂಪ್ ಹೊರೆ ಹೊರಬೇಕು.

ಒಟ್ಟಾರೆಯಾಗಿ ಕರ್ನಾಟಕದ ಕಾಂಗ್ರೆಸ್ ಬಜೆಟ್ ಸ್ವಸ್ವರೂಪವನ್ನು ಹೇಳುವುದಾದರೆ, ರಾಜ್ಯ ಸಂಪನ್ಮೂಲಗಳು ಹಾಗು ರಾಜ್ಯ ಜನರ ಶ್ರಮವನ್ನು ಹೆಚ್ಚು, ಹೆಚ್ಚು ಪ್ರಮಾಣದಲ್ಲಿ ದೇಶದ ಹೊರಗಿರುವ ಜನರಿಗೆ ರಫ್ತು ಎಂಬ ಹೆಸರಿನಲ್ಲಿ ಅಗ್ಗವಾಗಿ ಮಾರಬೇಕು. ಈ ಕೆಲಸಕ್ಕೆ ಬೇಕಾದ ಬಂಡವಾಳಕ್ಕೆ ದೇಶದ ಬಂಡವಾಳ ಶಾಹಿಗಳು, ಲಾಭ ಕೋರರಿಗೆ ಒಂದಿಷ್ಟು ಶ್ರಮವಾಗದಂತೆ ಹೊರದೇಶದಿಂದ ವಿಪುಲ ಸಾಲ ಪಡೆಯಬೇಕು. ಅದಕ್ಕೆ ಬಡ್ಡಿಯನ್ನು ಸಾಲದ ಕಂತುಗಳನ್ನು ಮುಂದಿನ ಹಲವು ತಲೆಮಾರುಗಳು ನಿರಂತರವಾಗಿ ತೆರುತ್ತಲೇ ಇರಬೇಕು.

ಇಲ್ಲಿಯ ಜನತೆಯ ಜೀವನಕ್ಕಾಗಿ ಅವರಿಗೆ ಬೇಕಾದ ಬಟ್ಟೆ ಬರೆ, ಆರೋಗ್ಯ ಒದಗಿಸುವುದಕ್ಕಾಗಿ ಅಲ್ಲ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಿರುವುದು. ರಾಜ್ಯ ಶ್ರೀಮಂತರಿಗೆ ನೋವಾಗದಂತೆ ಅವರಿಗೆ ಲಾಭ ಮಾಡಿಕೊಡುವ ಉಪಾಯಗಳನ್ನು ಕಂಡು ಹಿಡಿಯಲು. ಅದಕ್ಕಾಗಿ ರಾಜ್ಯದ ಜನತೆಯನ್ನು ಬಡತನದ ಆಳವಾದ ಪ್ರಪಾತಕ್ಕೆ ನೂಕಲು ಎನ್ನುವುದನ್ನು ಈ ಬಜೆಟ್ ಸಾಬೀತು ಪಡಿಸಿದೆ.

ರಾಜ್ಯ ಬಜೆಟ್ ೧೯೯೦-೯೧

ರಾಜ್ಯ ಹಣಕಾಸು ಮಂತ್ರಿ ಎಂ. ರಾಜಶೇಖರ ಮೂರ್ತಿಯವರು ಮಾರ್ಚ್ ೧೬ ರಂದು ಮಂಡಿಸಿದ ೧೯೯೦-೯೧ರ ಬಜೆಟ್ ೫೬.೭೩ ಕೋಟಿ ರೂ. ಗಳ ಕೊರತೆತೋರಿಸಿದೆ.

೧೯೮೯-೯೦ ರಿಂದ ಬರುವ ಕೊರತೆ ೧೯.೭೩ ಕೋಟಿ ರೂ ಹಾಗೂ ಈ ವರ್ಷದ ಕೊರತೆ ೧೮೪.೫೦ ಕೋಟಿ ರೂ. ಹೀಗೆ ಒಟ್ಟು ೨೦೪.೨೩ ಕೋಟಿ ರೂ. ಗಳ ಕೊರತೆಯನ್ನು ತುಂಬಲು ೧೪೭.೫ ಕೋಟಿ ರೂ. ಗಳಷ್ಟು ಹೊಸ ತೆರಿಗೆಗಳನ್ನು ಈ ಬಜೆಟ್ ಹಾಕಿದೆ. ತೆರಿಗೆ ವಸೂಲಿಯಲ್ಲಿ ಹೆಚ್ಚಿನ ದಕ್ಷತೆಯಿಂದ ಈ ಉಳಿದ ೫೬.೭೩ ಕೋಟಿ ರೂ.ಗಳ ಕೊರತೆಯನ್ನು ತುಂಬಿಸುವ ನಿರೀಕ್ಷೆ ಹಣಕಾಸು ಮಂತ್ರಿಗಳದ್ದು.

೧೪೭.೫೦ ಕೋಟಿ ರೂ. ಹೆಚ್ಚಿನ ಸಂಪನ್ಮೂಲವನ್ನು ವೃತ್ತಿ ತೆರಿಗೆ, ಮಾರಾಟ ತೆರಿಗೆ, ಮೋಟಾರು ವಾಹನ ತೆರಿಗೆ, ಜೂಜು ತೆರಿಗೆ ಹಾಗೂ ಅಬಕಾರಿ ತೆರಿಗೆ ಹೆಚ್ಚಳದ ಮೂಲಕ ಎತ್ತುವ ಪ್ರಸ್ತಾಪವನ್ನು ಬಜೆಟ್ ಮಂಡಿಸಿದೆ.

ಮದ್ಯ, ಬಿಯರ್, ಪೆಟ್ರೋಲ್, ಅಲ್ಯುಮಿನಿಯಂ ಮತ್ತು ತಾಮ್ರ, ಚಿನ್ನ, ಬೆಳ್ಳಿ ಮೇಲೆ ತೆರಿಗೆ ಹೆಚ್ಚಿಸಿ ೩೦.೮೦ ಕೋಟಿ ರೂ. ಗಳನ್ನು, ೬೧.೧ ಕೋಟಿ ರೂ. ಗಳನ್ನು ಮದ್ಯ ತಯಾರಿಕಾ ಘಟಕಗಳಿಗೆ ಲೈಸನ್ಸ್ ಫೀ, ಬಿಯರ್, ವೈನ್ ಮಾರಾಟದ ಮೇಲೆ ಲೈಸನ್ಸ್ ಫೀ ಹೆಚ್ಚಿಸಿ, ದಸ್ತಾವೇಜುಗಳ ಮೇಲೆ ಸ್ಟಾಂಪ್ ಹಾಗೂ ರಿಜಿಸ್ಟ್ರೇಶನ್ ದರ ಏರಿಸಿ ೨೦ ಕೋಟಿ ರೂ. ಗಳನ್ನು, ಮೋಟಾರು ವಾಹನಗಳ ಮೇಲೆ ಜೀವಾವಧಿ ತೆರಿಗೆಗಳನ್ನು ಏರಿಸಿ ೧೨.೩೫ ಕೋಟಿ ರೂ. ಗಳನ್ನು, ಹಾಗೂ ಕುದುರೆ ಜೂಜಿನಿಂದ ೪ ಕೋಟಿ ರೂ. ಗಳನ್ನು ಸಂಗ್ರಹಿಸುವುದಾಗಿ ಬಜೆಟ್ ಹೇಳುತ್ತದೆ.

ವೃತ್ತಿ ತೆರಿಗೆಯ ಜಾಲವನ್ನು ವಿಸ್ತರಿಸಿ ಇದುವರೆಗೆ ಇದರಿಂದ ರಿಯಾಯ್ತಿ ಪಡೆದಿದ್ದ ವಿಭಾಗಕ್ಕೆ ಪ್ರತಿ ತಿಂಗಳು ೧೦ ರೂ ತೆರಿಗೆ ಹಾಕಲಾಗಿದೆ. ಉಳಿದ ವಿಭಾಗಗಳಿಗೆ ಹೆಚ್ಚಿಸಲಾಗಿದೆ. ದಸ್ತಾವೇಜು ಶುಲ್ಕಗಳನ್ನು ೧೯೭೯ ರಿಂದ ಏರಿಸಿರಲಿಲ್ಲ.

ಕೆಲವು ವ್ಯಾಪಾರಿ ವಿಭಾಗಗಳಿಗೆ ಹಣಕಾಸು ಮಂತ್ರಿಗಳು ರಿಯಾಯ್ತಿ ಪ್ರಕಟಿಸಿದ್ದಾರೆ.

ಹಿಂದಿನ ಜನತಾ ದಳ ಸರ್ಕಾರ ಎರಡು ಬಡತನ ಪರಿಹಾರ ಯೋಜನೆಗಳನ್ನು ಪುಕ್ಕಟೆ ಪಠ್ಯ ಪುಸ್ತಕಗಳು ಹಾಗೂ ಸಮ ವಸ್ತ್ರಗಳ ಯೋಜನೆ ಮತ್ತು ಸೀರೆ- ಪಂಚೆ ಯೋಜನೆ ರದ್ದು ಮಾಡಲಾಗುತ್ತದೆ.

ಹಂಪೆಯ ಕನ್ನಡ ವಿಶ್ವವಿದ್ಯಾಲಯಕ್ಕೆ ೧ ಕೋಟಿ ರೂ., ಕೊಳೆಗೇರಿ ನಿವಾಸಿಗಳ ವಸತಿಗೆ ೩ ಕೋಟಿ ರೂ., ಬೆಂಗಳೂರು ನೀರು ಪೂರೈಕೆ, ಒಳಚರಂಡಿ ಮಂಡಳಿಗೆ ಕಾವೇರಿ ಮೂರನೇ ಹಂತಕ್ಕೆ ಮತ್ತು ವಸತಿ ಮಂಡಳಿಯಿಂದ ೧೨ ಸಾವಿರ, ಮನೋ ನಿರ್ಮಾಣಕ್ಕೆ ೮ ಕೋಟಿ ರೂ ಕೊಡುವುದಾಗಿ ಬಜೆಟ್ ಹೇಳಿದೆ.

ಹಣಕಾಸು ಮಂತ್ರಿಗಳ ಒಂದು ಗಂಟೆಯ ಬಜೆಟ್ ಭಾಷಣದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಿಂತ ಹೊಸ ತೆರಿಗೆ ಸಂಗ್ರಹಗಳ ಮೇಲೇನೇ ಹೆಚ್ಚು ಒತ್ತು ನೀಡಿದಂತೆ ಕಂಡು ಬರುತ್ತಿತ್ತು.

ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಸಲಹೆ ನೀಡಲು ಉನ್ನತಾಧಿಕಾರದ ಆಯೋಗವನ್ನು ನೇಮಕ ಮಾಡುವ ನಿರ್ಧಾರವನ್ನು ಹಣಕಾಸು ಮಂತ್ರಿಗಳು ಪ್ರಕಟಿಸಿದರು.

ಮಹಿಳೆಯರ ದುಡಿಯುವ ಹಕ್ಕು-ಬದುಕುವ ಹಕ್ಕು

ಮಹಿಳೆಯರ ಸಮಸ್ಯೆಗಳ ಬಗ್ಗೆ ಚರ್ಚಿಸುವಾಗ ಸಾಮಾನ್ಯವಾಗಿ ಕಣ್ಣೆದುರಿಗೆ ನಿಲ್ಲುವುದು ವರದಕ್ಷಿಣೆ ಅಪರಾಧಗಳು ಸತಿ, ಅತ್ಯಾಚಾರ ಇತ್ಯಾದಿ. (ಉದ್ಯೋಗಂ ಪುರುಷ ಲಕ್ಷಣಂ' ಎಂದು ಐದುಸಾವಿರ ವರ್ಷಗಳಿಂದ ಪುಂಗಿ ಊದುತ್ತಾ ಬಂದಿರುವ ಈ ದೇಶದಲ್ಲಿ ಮಹಿಳೆಯರಲ್ಲಿ ನಿರುದ್ಯೋಗ, ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳನ್ನು ಸಮಸ್ಯೆಯೆಂದು ಸಾಮಾನ್ಯವಾಗಿ ಪರಿಗಣಿಸಲಾಗುವುದಿಲ್ಲ.

ಉದ್ಯೋಗಗಳಲ್ಲಿ ಇಳಿಮುಖ

ದೇಶದ ಅರ್ಧಸಂಖ್ಯೆಯಲ್ಲಿರುವ ಮಹಿಳೆಯರಲ್ಲಿ ಯಾವುದೇ ರೀತಿಯ ಉದ್ಯೋಗದಲ್ಲಿರುವವರು ನೂರಕ್ಕೆ ೨೦. ಇದರಲ್ಲಿ ೬ ಮಹಿಳೆಯರ ಉದ್ಯೋಗ ತಾತ್ಕಾಲಿಕ. ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ನಗರ ಪ್ರದೇಶದಲ್ಲಿರುವವರಿಗೆ ಏರಿದಂತೆ ಕಂಡು ಬರಬಹುದು. ಆದರೆ ನಿಜವಾಗಿಯೂ ಕೈಗಾರಿಕೆಗಳ ಆಧುನಿಕೀಕರಣ, ಬಿಕ್ಕಟ್ಟು ಮತ್ತು ಕೃಷಿ ಬಿಕ್ಕಟ್ಟು ಸಮಸ್ಯೆಗಳು ಮೊದಲು ತಟ್ಟುವುದು ಮಹಿಳೆಯರಿಗೆ. ೧೯೧೧ರಲ್ಲಿ ನೂರು ಜನ ಉದ್ಯೋಗಸ್ಥರಲ್ಲಿ ೩೪ ಮಹಿಳೆಯರಿದ್ದರೆ, ೧೯೭೧ರಲ್ಲಿ ಇದು ೧೭ ಕ್ಕಿಳಿದಿತ್ತು. ೧೯೮೧ರಕ್ಕೆ ಇದು ನೂರಕ್ಕೆ ೧೪ಕ್ಕೆ ಇಳಿದಿದೆ. ಮಹಿಳೆಯರ ನಿರುದ್ಯೋಗ ಎಲ್ಲಾ ಕ್ಷೇತ್ರಗಳಲ್ಲಿಯೂಪುರುಷರಿಗಿಂತ ಹೆಚ್ಚು.

ಅಸಂಘಟಿತ ಕ್ಷೇತ್ರದಲ್ಲಿ

ಮಹಿಳೆಯರ ಉದ್ಯೋಗದ ಬಗೆಗಿನ ಈ ಅಂಕೆ ಸಂಖ್ಯೆಗಳೂ ದಾರಿತಪ್ಪಿಸುವಂಥವು. ಏಕೆಂದರೆ ನೂರು ಉದ್ಯೋಗಸ್ಥ ಮಹಿಳೆಯರಲ್ಲಿ ೯೦ಜನ ಕೆಲಸ ಮಾಡುವುದು ಅಸಂಘಟಿತ ಕ್ಷೇತ್ರಗಳಲ್ಲಿ. ಈ ಕ್ಷೇತ್ರಗಳಲ್ಲಿ ಉದ್ಯೋಗದ ಭರವಸೆ ಕಡಿಮೆ. ಕೂಲಿಯೂ ಕನಿಷ್ಠ ಕೂಲಿಗಿಂತ ಕಡಿಮೆ. ೧೯೧೧ರಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ನೂರರಲ್ಲಿ ೧೫ಜನ ಮಹಿಳೆಯರಿದ್ದರೆ, ೧೯೭೧ರಲ್ಲಿ ೧೦ಜನ ಮಾತ್ರ ಮಹಿಳೆಯರಿದ್ದಾರೆ. ಸೆಣಬು, ಗಿರಣಿಗಳು, ಗಣಿಗಳಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಕಳೆದು ಕೊಂಡಿದ್ದಾರೆ. ಯಾವುದೇ ಕ್ಷೇತ್ರದಲ್ಲಿ ಮಹಿಳೆಯರಿಗೆ ಉದ್ಯೋಗ ಸಿಗುವುದು ಕೊನೆಗೆ ಉದ್ಯೋಗ ಕಳೆದು ಕೊಳ್ಳುವವರಲ್ಲಿ ಮೊದಲಿಗರು. ಉದ್ಯೋಗವನ್ನು ಅರಸುತ್ತಾ ಹೋಗುವ ವಲಸೆ ನೌಕರರಲ್ಲಿ ನೂರರಲ್ಲಿ ೭೦ಮಹಿಳೆಯರು.

೧೯೮೦ರಿಂದ ಎಲೆಕ್ಟ್ರಾನಿಕ್ಸ್ ಮತ್ತು ಔಷಧಿ ರಸಾಯನಿಕ ಕೈಗಾರಿಕೆಗಳಲ್ಲಿ ಮಹಿಳೆಯರು ಅರ್ಧದಷ್ಟು ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ.

ಮಹಿಳೆಯ ದುಡಿಮೆ ಕುಟುಂಬಕ್ಕೆ ಬೇಡವೆ?

ಈಗಾಗಲೇ ಹೇಳಿದ ಹಾಗೆ, ಮಹಿಳೆಯರ ನಿರುದ್ಯೋಗವನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಸಾಮಾನ್ಯವಾಗಿ ಸರಕಾರಿ ಅಂದಾಜು ಏನೆಂದರೆ ಮಹಿಳೆಯರು ಉದ್ಯೋಗ ಮಾಡುವುದು ಕುಟುಂಬದ ಆದಾಯವನ್ನು ಹೆಚ್ಚಿಸಲು. ಅವರ ಉದ್ಯೋಗದ ಮೇಲೆ ಕುಟುಂಬದ ಜೀವನಾಧಾರ ನಿಂತಿಲ್ಲ ಎಂಬುದು. ಆದರೆ ಇದು ಶುದ್ಧಸುಳ್ಳು ಗ್ರಾಮೀಣ ಪ್ರದೇಶಗಳಲ್ಲಿ ನೂರಕ್ಕೆ ೩೦ ರಿಂದ ೩೫ ಮನೆಗಳಲ್ಲಿ ಮಹಿಳೆಯೇ ಕುಟುಂಬದ ಯಜಮಾನತಿ. ಏಕಮಾತ್ರ ದುಡಿಯುವ ವ್ಯಕ್ತಿ ಇಂತಹ ಕುಟುಂಬಗಳ ಪ್ರಮಾಣ ಹೆಚ್ಚುತ್ತಿದೆ. ಆದರೂ ಮಹಿಳೆ ಏಕಮಾತ್ರ ದುಡಿಯುವ ವ್ಯಕ್ತಿ ಅಲ್ಲ ಎಂಬ ತಪ್ಪು ಆಧಾರದ ಮೇಲೆ ಆಕೆಗೆ ಕಡಿಮೆ ಸಂಬಳ ಕೊಡಲಾಗುತ್ತಿದೆ. ಮಹಿಳೆಯರಿಗೆ ಸರ್ಕಾರ ವಿಧಿಸುವ ಕನಿಷ್ಠ ಕೂಲಿ ಸಹ ಕಡಿಮೆ. ಅಂಗನವಾಡಿ, ಬಾಲವಾಡಿ ಶಿಕ್ಷಕಿಯರು ಮತ್ತು ಪೋಸ್ಟಲ್ ಖಾತೆಯ ಇಲಾಖೇತರ ಉದ್ಯೋಗಗಳಲ್ಲಿ ಅತಿ ಕಡಿಮೆ ಸಂಬಳ ನಿಗದಿಮಾಡಲಾಗಿದೆ. ೧೦ ವರ್ಷಗಳ ಸೇವೆಯ ನಂತರ ಅಂಗನವಾಡಿ ಶಿಕ್ಷಕಿಯರಿಗೆ ದೊರೆಯುವುದು ತಿಂಗಳಿಗೆ ರೂ ೩.೨೦. ಅಂಗನವಾಡಿ ಸಹಾಯಕಿಯರಿಗೆ ಸಿಗುವುದು ೯೨-೧೧೦ ರೂ.

ಮಿಸಲಾತಿ ಪರಿಹಾರವೇ?

ಮಹಿಳೆಯರ ನಿರುದ್ಯೋಗದ ಸಮಸ್ಯೆಗೆ ಶೇಕಡಾ ೩೦ ಮಿಸಲಾತಿ ಮತ್ತು ಸ್ವ-ಉದ್ಯೋಗಗಳ ಸೃಷ್ಟಿ ಪರಿಹಾರ ಎಂದು ಹಿಂದಿನ ಸರ್ಕಾರ ಹೇಳುತ್ತಾ ಬಂದಿತ್ತು. ಚುನಾವಣೆಯ ಹೊತ್ತಿಗೆ ಅದೇ ಸರ್ಕಾರದ ಆರ್ಥಿಕ ನೀತಿಗಳಿಂದ ಮಹಿಳೆಯರು ಕಳೆದುಕೊಂಡ ಉದ್ಯೋಗಗಳನ್ನು ಮರಳಿಸಿ ದರೆ ಸಾಕು. ಈಗ ಹೊಸದಾಗಿ ಸೃಷ್ಟಿ ಯಾಗುತ್ತಿರುವ ಉದ್ಯೋಗಗಳಲ್ಲಿ ಮಿಸ ಲಾತಿಗಿಂತ ಹೆಚ್ಚು ಉದ್ಯೋಗಗಳು ಸೃಷ್ಟಿ ಯಾಗುತ್ತವೆ. ಆದ್ದರಿಂದ ಮಹಿಳೆಯರು ಉದ್ಯೋಗ ಕಳೆದು ಕೊಳ್ಳದಂತಹ, ಹೆಚ್ಚು ಉದ್ಯೋಗ ಸೃಷ್ಟಿ ಯಾಗುವ ಆರ್ಥಿಕ ನೀತಿಗಳು ಅಗತ್ಯ.

ಸ್ವ-ಉದ್ಯೋಗ ಪರಿಹಾರವೆ?

ಸಂಘಟಿತ ಕ್ಷೇತಗಳಲ್ಲಿ ಕೈಗಾರಿಕೆ, ಸರ್ಕಾರ-ಉದ್ಯೋಗ ಸೃಷ್ಟಿಸುವ ಸ್ವಂಉದ್ಯೋಗ ಕ್ಷೇತ್ರಗಳಲ್ಲಿ ಉದ್ಯೋಗ ಹೆಚ್ಚಬೇಕು ಎನ್ನುವ ಧೋರಣೆ ಅಸಂಘಟಿತ ಕ್ಷೇತಗಳಲ್ಲಿ ಅಭದ್ರ ಕಡಿಮೆ ಕೂಲಿಯ ಉದ್ಯೋಗಗಳನ್ನು ಮಹಿಳೆಯ ಪಾಲಿಗೆ ಮಿಸಲಿಟ್ಟಂತೆ ಇದು ಮಹಿಳೆಯರ ಸಮಸ್ಯೆಯನ್ನು ಯಾವುದೇ ರೀತಿಯಲ್ಲಿ ಪರಿಹರಿಸದು. ಈ ಅಸಂಘಟಿತ ಕ್ಷೇತ್ರಗಳಲ್ಲಿ ಕನಿಷ್ಠ ವೇತನದ ಜಾರಿ ಉದ್ಯೋಗದ ಗ್ಯಾರಂಟಿ ಬಗ್ಗೆ ಕಾನೂನು ಬದ್ಧತೆ ಇವು ಅಗತ್ಯ ಕ್ರಮಗಳು.

ಹೆಚ್ಚಾಗಿ ತಟ್ಟುತ್ತವೆ. ಭೂಮಿಯ ಒಡೆತನದಲ್ಲಿ ಅಸಮಾನತೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳ ಅಭಾವ ಸಮಸ್ಯೆಯ ಮೂಲ ಭೂಮಿಯ ಒಡೆತನದಲ್ಲಿ ಅಸಮಾನತೆ ಮಹಿಳೆಯರಿಗೆ ಹೇಗೆ ತಟ್ಟುತ್ತದೆ. ಎನ್ನುವುದು ಈ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಸರಾಸರಿ ನೂರು ಪುರುಷ ಉದ್ಯೋಗಸ್ಥರಲ್ಲಿ ೪೪ ರೈತರಾದರೆ, ೨೦ ಕೃಷಿ ಕೂಲಿಗಾರರು. ಸರಾಸರಿ ನೂರು ಮಹಿಳಾ ಉದ್ಯೋಗಸ್ಥರಲ್ಲಿ ೩೮ ರೈಸರಾದರೆ, ೪೫ ಕೃಷಿ ಕೂಲಿಗಳು. ಭೂಸುಧಾರಣೆ ಇದಕ್ಕೆ ಮುಖ್ಯ ಪರಿಹಾರ ಈಗ ಪ್ರಸಕ್ತ ಭೂಸುಧಾರಣಾ ನಿಯಮಗಳ ಪ್ರಕಾರ ಹೆಚ್ಚುವರಿ ಎಂದು ಘೋಷಿಸಲಾಗಿರುವ ೩.೨ ಲಕ್ಷ ಎಕ್ರೆಗಳನ್ನು ಹಂಚಿ, ಅದರಲ್ಲಿ ಶೇಕಡಾ ೪೦ ಮಹಿಳೆಯರಿಗೆ ವೈಯುಕ್ತಿಕ ಅಥವಾ ಜಂಟಿ "ಪಟ್ಟಾ" (ಎರಡೂ ಅಸಂಭವನೀಯ) ಗಳಲ್ಲಿ ಕೊಟ್ಟರೂ ಸಮಸ್ಯೆ ಪರಿಹಾರದ ಹತ್ತಿರವೂ ಬರುವುದಿಲ್ಲ. ಏಕೆಂದರೆ ಸರ್ಕಾರಿ ಅಂಕೆ ಸಂಖ್ಯೆಗಳ ಪ್ರಕಾರವೇ ೧೫ ಕೋಟಿ ಮಹಿಳೆಯರು ಬಡತನ ಮತ್ತು ಹಸಿವಿನ ಅಂಚಿನಲ್ಲಿದ್ದಾರೆ. ಅರ್ಧ ಎಕರೆ ಹೆಚ್ಚುವರಿ ಜಮಿನನ್ನು ಪ್ರತಿ ಕುಟುಂಬಕ್ಕೆ ಹಂಚಿದರೂ, (೬೪ ಲಕ್ಷ ಕುಟುಂಬಗಳಿಗೆ) ಪ್ರತಿ ಕುಟುಂಬಗಳಲ್ಲಿ ಮಹಿಳೆಯರಿದ್ದಾರೆ ಎಂದಿಟ್ಟುಕೊಂಡರೆ ಸುಮಾರು ೧೩೦ ಲಕ್ಷ (ಅಥವಾ ೧.೩ ಕೋಟಿ) ಮಹಿಳಾವಾದಿಗಷ್ಟೇ ಪರಿಹಾರ ದೊರಕಬಹುದು.

ತೀವ್ರ ಭೂಸುಧಾರಣೆ ಅಗತ್ಯ

ದೊಡ್ಡ ಪ್ರಮಾಣದಲ್ಲಿ ರೈತರನ್ನು ಸಂಕಷ್ಟಕ್ಕೀಡು ಮಾಡಿರುವ ಸರ್ಕಾರಿ ನೀತಿಗಳು ಗ್ರಾಮೀಣ ಮಹಿಳೆಯರಿಗೆ ಉಳಿದ ಹೆಚ್ಚು ಕಡಿಮೆ ೧೩ವರೆ ಕೋಟಿ ಮಹಿಳೆಯರಿಗೆ ಏನು ಪರಿಹಾರ? ಇದಕ್ಕೆ ತೀವ್ರ ಪರಿಣಾಮಕಾರಿ ಭೂಸುಧಾರಣೆಯ ಅಗತ್ಯವಿದೆ.

ಮಹಿಳಾ ಅನಕ್ಷರತೆ

ಮಹಿಳಾ ನಿರುದ್ಯೋಗಕ್ಕೆ ಸಂಬಂಧಪಟ್ಟ ಇನ್ನೊಂದು ವಿಷಯ ಮಹಿಳೆಯರಲ್ಲಿ ಅನಕ್ಷರತೆ. ಯಾವುದೇ ರಾಜ್ಯ ತೆಗೆದುಕೊಂಡರೂ ಪುರುಷ ಅನಕ್ಷರಸ್ತರ ಒಂದೂವರೆಯಿಂದ ಎರಡು ಪಟ್ಟು ಮಹಿಳಾ ಅನಕ್ಷರಸ್ತರಿರುತ್ತಾರೆ. ಸರಾಸರಿ ದೇಶದ ೪ ಮಹಿಳೆಯರಲ್ಲಿ ಮೂವರು ಮಹಿಳೆಯರು ಅನಕ್ಷರಸ್ತರು. ಇದು ಸರಾಸರಿ ಚಿತ್ರವಾದರೆ, ಅರ್ಧಕ್ಕಿಂತಲೂ ಹೆಚ್ಚಿನ ಜಿಲ್ಲೆಗಳಲ್ಲಿ ೧೦ ಮಹಿಳೆಯರಲ್ಲಿ ೯ ಮಹಿಳೆಯರು ಅನಕ್ಷರಸ್ತರು. ಅಕ್ಷರಸ್ತ ಮಹಿಳೆಯರಲ್ಲೂ ಉಚ್ಚ ವಿದ್ಯಾಭ್ಯಾಸ, ಹೆಚ್ಚಿನ ಕುಶಲ ಕೆಲಸಗಳನ್ನು ಕಲಿಯಲು ಅವಕಾಶ ದೊರಕುವುದು ಇನ್ನೂ ಕಡಿಮೆ. ಇದು ಮಹಿಳೆಯರನ್ನು ಅಸಂಘಟಿತ ಕ್ಷೇತ್ರಗಳಲ್ಲಿ (ಕಡಿಮೆ ಜಾಣ್ಮೆ ಮತ್ತು ಸಂಬಳದ) ಮಾತ್ರ ಉದ್ಯೋಗಕ್ಕೆ ಅರ್ಹವಾಗಿಸುತ್ತದೆ. ಹಲವು ಅಧ್ಯಯನಗಳಿಂದ ಮಹಿಳೆಯರ ಶಿಕ್ಷಣ ಉದ್ಯೋಗದ ಪ್ರಮಾಣ ಹೆಚ್ಚಿದ್ದಲ್ಲಿ ಜನನದರ ಕಡಿಮೆಯಾದದ್ದು, ಕುಟುಂಬ ಯೋಜನೆ ಹೆಚ್ಚು ಸಫಲವಾದದ್ದು ಕಂಡು ಬಂದಿದೆ.

ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು.

ಉದ್ಯೋಗಸ್ಥ ಮಹಿಳೆಯರಿಗೆ ಬೇರೆ ಬೇರೆ ಕುತಂತ್ರಗಳನ್ನನುಸರಿಸಿ ಸಮಾನ ಉದ್ಯೋಗಕ್ಕೆ ಸಮಾನ ವೇತನ ಕೊಡಲಾಗುವುದಿಲ್ಲ. ಉದಾಹರಣೆಗೆ ವಿಮಾನ ಪರಿಚಾರಿಕೆಯರಿಗೆ, ಪರಿಚಾರಕರಿಗಿಂತ ಕಡಿಮೆ ವೇತನ. ಮದುವೆ, ತಾಯಿಯಾಗುವುದರ ಮೇಲೆ ನಿಷೇಧ ನಿರ್ಬಂಧ, ಬೇಗನೆ ನಿವೃತ್ತಿ ಇತ್ಯಾ ಹೆಚ್ಚುವರಿ ಅಸಮಾನತೆಗಳು. ಹೆರಿಗೆ ರಜೆ ಕೆಲವು ಸರಕಾರಿ ಸಂಸ್ಥೆಗಳಲ್ಲಿ ಬಿಟ್ಟರೆ, ಇಲ್ಲವೇ ಇಲ್ಲ. ಹೆಚ್ಚಿನ ಸರಕಾರಿ ಸಂಸ್ಥೆಗಳಲ್ಲಿರುವ ೩ ತಿಂಗಳ ಹೆರಿಗೆ ರಜೆ ತೀರಾ ಕಡಿಮೆ. ಇದರಿಂದ ಉದ್ಯೋಗಸ್ಥ ಮಹಿಳೆಗೆ ಬಹಳಷ್ಟು ಸಂಬಳರಹಿತ ರಜೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಮತ್ತಿತರ ಹಲವು ಕಾರಣಗಳಿಂದ ಬಡ್ತಿಯಲ್ಲೂ ಆಕೆಗೆ ಎರಡನೇ ಸ್ಥಾನ ದೊರೆಯುತ್ತದೆ. ಹೆಚ್ಚಿನ ಪುರುಷ ಉದ್ಯೋಗಿಗಳು ಮಹಿಳಾ ಮೇಲ್ವಿಚಾರಕಿಗೆ ಪ್ರತಿರೋಧ ತೋರಿಸುತ್ತಾರೆ. ಉದ್ಯೋಗಸ್ಥ, ವಿವಾಹಿತ ಮಹಿಳೆಗೆ ಉದ್ಯೋಗ ಮಾಡುವ ಸಂಸ್ಥೆಯ ಬಳಿ 'ಕ್ರೀಚ್' (ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ)ಯ ಅಭಾವ ಅತಿ ದೊಡ್ಡ ಸಮಸ್ಯೆ. ಸುಮಾರು ೩.೬೦ ಲಕ್ಷ ಮಕ್ಕಳಿಗೆ 'ಕ್ರೀಚ್' ನ ಅಗತ್ಯವಿದ್ದರೆ ಕೇವಲ ೨ ಲಕ್ಷ ಮಕ್ಕಳಿಗೆ ಈ ವ್ಯವಸ್ಥೆ ದೊರಕಿದೆ. ಇದಲ್ಲದೆ ಮೇಲಾಧಿಕಾರಿಗಳಿಂದ ಲೈಂಗಿಕ ಶೋಷಣೆ ಇತ್ಯಾದಿ ಸಮಸ್ಯೆಗಳು ಅವರನ್ನು ಕಾಡುತ್ತವೆ.

ಮಹಿಳೆಯರಿಗೆ ಶಿಕ್ಷಣ ಉದ್ಯೋಗ ಮತ್ತು ಕನಿಷ್ಠ ವೇತನ ಒದಗಿಸದೆ, ಅವರ ಕಲ್ಯಾಣದ ಬಗ್ಗೆ ಮಾತಾನಾಡುವುದು, ಕಾನೂನುಗಳನ್ನು ಮಾಡುವುದು ಶುದ್ಧ ಅಪಹಾಸ್ಯ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಯಾಗದೆ ತಮ್ಮ ಜೀವನದ ಬಗ್ಗೆ ಸ್ವತಂತ್ರ ನಿರ್ಧಾರ ಮಾಡಲಾರರು. ಆರೋಗ್ಯ, ಮದುವೆ, ವಿಚ್ಛೇದ, ಆಸ್ತಿ ಇವ್ಯಾವುದರ ಬಗೆಗೂ ಇಂತಹ ಸ್ವತಂತ್ರ ನಿರ್ಧಾರ ಮಾಡುವ ಆತ್ಮವಿಶ್ವಾಸ ಮೂಡದೆ ಅತ್ಯಾಚಾರ ವರದಕ್ಷಿಣೆ, ಸತಿ, ಮಂತಾದ ಅನ್ಯಾಯಗಳ ವಿರುದ್ಧ ಹೋರಾಡಲಾರಳು. ಆದ್ದರಿಂದ ಇಂದಿನ ದುರ್ಭರ ಪರಿಸ್ಥಿತಿಯಲ್ಲಿ ಮಹಿಳೆಯ ದುಡಿಯುವ ಹಕ್ಕು, ಆಕೆಯ ಬದುಕುವ ಹಕ್ಕಿನ ಇನ್ನೊಂದು ಮುಖವಷ್ಟೆ.

ಕೇರಳದಲ್ಲಿ

ಮಾರ್ಕ್ಸ್‌ವಾದಿ ಸಿದ್ಧಾಂತ ಪ್ರಚಾರ ಮಾಸಾಚರಣೆ

ಜಗತ್ತಿನಲ್ಲಿ ಸಮಾಜವಾದದ ಮೇಲೆ ಸತತವಾಗಿ ಧಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಇಡಿ ಜಗತ್ತಿನ ಸಾಮ್ರಾಜ್ಯಶಾಹಿ ಮಾಧ್ಯಮಗಳು ನಡೆಸುತ್ತಿರುವ ಅಪಪ್ರಚಾರದ ಮಹಾ ಪ್ರವಾಹದ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ಲೆನಿನ್‌ವಾದಿ ತತ್ವಗಳನ್ನು ಪ್ರಸಾರ ಮಾಡುವುದು ಅದಕ್ಕಾಗಿ ಪಕ್ಷದ ಪತ್ರಿಕೆ ಹಾಗೂ ಸಾಹಿತ್ಯಗಳ ವಿಪುಲವಾದ ಮಾರಾಟ ಮಾಡುವುದು ಇಂದು ಪಕ್ಷ ಕೈಗೊಳ್ಳ ಬೇಕಾದ ತುರ್ತಿನ ಕರ್ತವ್ಯವೆಂದು ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರೂ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿಯೂ ಆದ ಕಾ॥ ವಿ.ಎಸ್. ಅಚ್ಯುತನಂದನ್ ಕರೆ ನೀಡಿದ್ದಾರೆ. ಇವರು ಎರ್ನಾಕುಳಂಜಿಲ್ಲೆಯ ಐದು ಪ್ರಾದೇಶಿಕ ಸಮಿತಿಗಳು ಸಾಹಿತ್ಯ ಮಾರಾಟ ಮಾಡಿಬಂದ ಸುಮಾರು ೭೫ಸಾವಿರ ರೂಗಳನ್ನು ಸ್ವೀಕರಿಸುತ್ತಾ ಹೀಗೆ ಘೋಷಿಸಿದರು. ಇದೇ ಸಮಯದಲ್ಲಿ ದೇಶಾಭಿಮಾನಿ ದಿನ ಪತ್ರಿಕೆಯ ೫೦೦ ಚಂದಾಗಳನ್ನು ಅವರು ಸ್ವೀಕರಿಸಿದರು.

ಇಡೀ ಮಾರ್ಚ್ ತಿಂಗಳನ್ನು ಮಾರ್ಕ್ಸ್‌ವಾದಿ-ಲೆನಿನ್ ವಾದಿ ಸಿದ್ಧಾಂತದ ಪ್ರಚಾರ ಮಾಸವನ್ನಾಗಿ ಆಚರಿಸಬೇಕೆಂದು ಕೇರಳ ರಾಜ್ಯ ಸಮಿತಿ ನೀಡಿದ ಕರೆಯ ಮೇರೆಗೆ ಕೇರಳ ರಾಜ್ಯದ ಎಲ್ಲಾ ಜಿಲ್ಲಾ, ಪ್ರದೇಶ ಮತ್ತು ಮೂಲ ಘಟಕಗಳನ್ನು ದೊಡ್ಡ ಪ್ರಮಾಣದ ಪ್ರಚಾರವನ್ನು ಸಂಘಟಿಸಿದೆ. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಅಳಿವಿಲ್ಲ ಎಂದು ಹಾಡುತ್ತಾ ದೊಡ್ಡ ಮೆರವಣಿಗೆಗಳು ರಸ್ತೆಯ ಇಕ್ಕೆಲಗಳಲ್ಲಿ ನಿಂತ ಜನರಿಗೆ ಪೂರ್ವ ಯುರೋಪ್‌ಗಳ ಬೆಳವಣಿಗೆಯ ಬಗ್ಗೆ ಪೊಲಿಟ್ ಬ್ಯೂರೊ ಅಂಗೀಕರಿಸಿದ ನಿರ್ಣಯಗಳ ಪ್ರತಿಗಳನ್ನು ಮಾರುತ್ತಾ, ಅವುಗಳನ್ನು ವಿವರಿಸುತ್ತಾ ಸಾಗಿದೆ. ಈ ಜಾಥಾಗಳ ಸಮಯದಲ್ಲಿ ವಿಶ್ವ ಕಮ್ಯುನಿಸ್ಟ್ ಚಳುವಳಿ ಭಿನ್ನಾಭಿಪ್ರಾಯಗಳಿಂದ ಇಬ್ಭಾಗವಾದ ಸಂಕಷ್ಟದ ಸಮಯದಲ್ಲಿಯೂ ಭಾರತದ ಮಣ್ಣಿನಲ್ಲಿ ದೃಢವಾಗಿ ಬೇರೂರಿ ವಿಶಾಲವಾಗಿ ಬೆಳೆದ ಸಿ.ಪಿ.ಐ.(ಎಂ): ರಷ್ಯಾ ಹಾಗೂ ಚೀನಾದ ಕಮ್ಯುನಿಸ್ಟ್ ಪಕ್ಷಗಳೆರಡರ ಜೊತೆಗೂ ತನ್ನ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲು ಹಿಂಜರಿಯದ, ಅನೇಕ ಪ್ರಶ್ನೆಗಳ ಬಗೆಗೆ ತನ್ನ ಸ್ವಂತ ನಿಲುವನ್ನು ತಾಳಿದ ಸಿಪಿಐ (ಎಂ) ಸಮಾಜವಾದದ ಮೇಲಿನ ಈ ಧಾಳಿಗಳಿಗೆ ಹಾಗೂ ಅಬ್ಬರದ ಅಪಪ್ರಚಾರಗಳಿಗೆ ಅಂಜುವುದಿಲ್ಲ ಎಂದು ಸಾರುತ್ತಿವೆ. ಈ ಪ್ರಚಾರ ಕಾಲದಲ್ಲಿ ವಿವಿಧ ಜಿಲ್ಲೆಗಳು ಸ್ವಯಂ ಸ್ಫೂರ್ತಿಯಿಂದ ಸದಸ್ಯರು ಹಾಗೂ ಅಭಿಮಾನಿಗಳಲ್ಲಿ ಉತ್ಸಾಹವನ್ನು ಹೊರ ಹೊಮ್ಮಿಸುವ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದೆ. ಎರ್ನಾಕುಳಂ ೮೦ ಜಿಲ್ಲೆಯಲ್ಲಂತೂ ಈ ಪ್ರಚಾರಗಳು ನಡೆದ ಬಗ್ಗೆ ಅನೇಕ ವರದಿಗಳು ಬಂದಿವೆ. ಎರ್ನಾಕುಳಂ ಜಿಲ್ಲೆಯ ಜಿಲ್ಲಾಕೇಂದ್ರದಿಂದ ಆರಂಭವಾದ ಬೃಹತ್ ಜಾಥಾ ವೊಂದು ಜಿಲ್ಲೆಯ ಹಳ್ಳಿಹಳ್ಳಿಗಳನ್ನು ನಗರ ಪಟ್ಟಣಗಳನ್ನು ಹಾದು ಮತ್ತೆ ಮಾರ್ಚ್೨ರಂದು ಎರ್ನಾಕುಳಂ ಅನ್ನು ತಲುಪಿತು .ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳು ವಳಿಯ ಪ್ರಮುಖ ಘಟ್ಟವಾದ ಲೆನಿನರ ನೇತೃತ್ವದ ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಪ್ರಥಮ ಅಧಿವೇಶನ ಆರಂಭವಾದ ದಿನ ಅದು.ಇಡೀ ವಿಶ್ವದಲ್ಲಿ ಕಮ್ಯುನಿಸ್ಟ್‌ಚಳುವಳಿಯನ್ನು ಹಬ್ಬಿಸಲು ಮಹಾನ್ ಕಾಣಿಕೆ ನೀಡಿದ ಈ ದಿನವನ್ನು ಅಂತರರಾಷ್ಟ್ರೀಯ ಗೀತೆಯನ್ನು ಹಾಡುವುದರೊಂದಿಗೆ ಆರಂಭಿಸಲಾಯ್ತು. ಇಂತಹ ಅನೇಕ ಸಭೆಗಳು ಕೇರಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಒಳಿದ ೪೦ಲಕ್ಷ ಜನರಲ್ಲಿ ಸಮಾಜವಾದದ ಹಿನ್ನಡೆ ಹುಟ್ಟಿಸಿರುವ ಆತಂಕವನ್ನು ಸಾಮ್ರಾಜ್ಯಶಾಹಿಗಳ ಹಗರಿ ರುಳೂ ಎಡೆಬಿಡದೆ ಅಪಪ್ರಚಾರವನ್ನು ಎದುರಿಸಿ ಮಾರ್ಕ್ಸ್‌ವಾದ ಅಜೇಯ ಎಂದು ಸಾರುತ್ತದೆ.

ಪಕ್ಕದ ಬಾಕ್ಸ್ ನೋಡಿ

ಅತುಲ್ಯ ಮಾಣ್ ಮಾರ್ಕ್ಸಿಸಂ ಅಜೇಯ ಮಾಣ್ ಮಾರ್ಕ್ಸಿಸಂ

ಚಲನ ಶೀಲ ಪ್ರಪಂಚದ
ವಿಜ್ಞಾನ ನಮ್ಮ ಮಾರ್ಕ್ಸ್‌ವಾದ
ಚಲನೆಯಿಲ್ಲದ್ದೇನು ಇಲ್ಲ
ಎನ್ನುವುದೇ ಮಾರ್ಕ್ಸ್‌ವಾದ

ಮಾನವ ಸಮುದಾಯದ ವಿಮೋಚನೆಗಾಗಿ ಜನ್ಮ ತಳೆದಿರುವ ಸಿದ್ಧಾಂತದ ಸತ್ಯವನ್ನು ಮೇಲಿನಂತೆ ಹಾಡಿ ಹರಡುತ್ತ ಹೋಗುವ ಪಕ್ಷದ ರಾಜಕೀಯ ಪ್ರಚಾರ ಜಾಥಾ ಕೇರಳದ ಜನರಿಗೆ ಹೊಸ ಅನುಭವವನ್ನು ನೀಡಿದೆ. ಇತ್ತೀಚೆಗೆ ಪಾಲ್‌ಘಾಟ್ ಜಿಲ್ಲೆಯ ಒಟ್ಟಪಾಲಂ, ಚೆರುಪ್ಪುಳಸೇರಿ ಪ್ರದೇಶ ಸಮಿತಿಗಳು ಸಂಘಟಿಸಿದ ಈ ಜಾಥಾ ರಸ್ತೆಯ ಇಕ್ಕೆಲಗಳಲ್ಲಿ ಈ ಜಾಥಾವನ್ನು ಸ್ವಾಗತಿಸಲು ಹೊಸ ವಿಷಯಗಳನ್ನು ತಿಳಿಯಲು ಕುತೂಹಲದಿಂದ ಕಾದು ನಿಂತಿದ್ದ ಕಾರ್ಮಿಕರಿಗೆ ಸಾರಿ ಹೇಳಿತು: "ಅತುಲ್ ಯಾಮಾಣೋ ಮಾರ್ಕ್ಸಿಸಂ ಅಜೇಯ ಮಾಣೋ ಮಾರ್ಕ್ಸಿಸಂ" (ವಿಪುಲವಾಗಿ ಬೆಳೆದಿದೆ ನಮ್ಮ ಮಾರ್ಕ್ಸ್‌ವಾದ, ಅಜೇಯವಾಗಿ ನಿಂತಿದೆ ನಮ್ಮ ಮಾರ್ಕ್ಸ್‌ವಾದ)

ನಮಗೆ ಕಾಣುವ ಅನೇಕ ಸಂಗತಿಗಳು ಅರ್ಧ ಸತ್ಯ ಮಾತ್ರ. ಟಿವಿಯ ಕ್ಯಾಮರಾ ಕಣ್ಣುಗಳ ಎಲ್ಲ ಸತ್ಯವನ್ನು ಕಾಣುತ್ತಿಲ್ಲ, ಕಾಣಲು ಬಯಸುತ್ತಿಲ್ಲ. ಅವು ಪಕ್ಷಪಾತ ಪೂರಿತ, ಸಾಮ್ರಾಜ್ಯಶಾಹಿ ಜರ್ಮನಿಯ ಕಡೆಗೆ ಗೋಡೆ ಹಾರಿ ದುಮುಕುವ ಪೂರ್ವ ಜರ್ಮನಿಯ ಜನರ ಕಡೆಗೆ ಮಾತ್ರ ನೋಡಿದವು. ಆದರೆ ಆ ಕಡೆಗೆ ಹೋದ ಜನ ಸಂಕಷ್ಟಗಳನ್ನು ಅನುಭವಿಸಿ ಮರಳಿ ಬರ್ಲಿನ್ ಸೇರಿದ್ದನ್ನು ಕ್ಯಾಮೆರಾ ಕಣ್ಣುಗಳು ನೋಡಲಿಲ್ಲ. ಹೀಗೆ ಕಮ್ಯುನಿಸಂ ನಶಿಸುತ್ತಿದೆ. ಸಮಾಜವಾದಿ ಬಣ ಒಡೆದ ಹೋಗುತ್ತಿದೆ ಎಂದು ಡಂಗುರ ಸಾರಲು ಶ್ರಮಿಸುತ್ತಿವೆ ಈ ಮಾಧ್ಯಮಗಳು ಎಂದು ಈ ಜಾಥಾ ಜನರಿಗೆ ಹೇಳಿತು.

ಬದಲಾವಣೆಗಳನ್ನು ಎದುರಿಸಲಾರದೇ ಭಯ ಪಡುವವರಲ್ಲ ಕಮ್ಯುನಿಸ್ಟರು. ಅದನ್ನು ಅರ್ಥೈಸಿ ಕೊಳ್ಳುವವರು ಕಮ್ಯುನಿಸ್ಟರು. ಎಂದು ಸಿಪಿಐ(ಎಂ)ನ ಸ್ಥೈರ್ಯವನ್ನು ಪ್ರದರ್ಶಿಸಿದವು ಈ ಜಾಥಾಗಳು.

ವಿಶ್ವ ಸಮಾಜವಾದಿ ಬಣದ ಬದಲಾವಣೆಗಳು ಮಾತ್ರವಲ್ಲ, ಕೇಂದ್ರದ ರಾಷ್ಟ್ರೀಯರಂಗದ ಸರ್ಕಾರದ ಬಗ್ಗೆ ಸಿಪಿಐ(ಎಂ) ನಿಲುವು ಕೇರಳದ ಸಮಾಜವನ್ನು ಮುನ್ನಡೆಸುವುದರಲ್ಲಿ ಸಿಪಿಐ(ಎಂ)ನ ದುಡಿಮೆ ಇವೆಲ್ಲವುಗಳನ್ನು ಜನ ಮನದ ಮೇಲೆ ಬಿಂಬಿಸುತ್ತಾ ಮಾರ್ಕ್ಸ್‌ವಾದದ ಜೀವಂತಿಕೆಯಲ್ಲಿ [illegible] ಮೂಡಿಸುತ್ತಾ ಸಾಗಿದೆ ಈ ಜಾಥಾಗಳು.

ಗೂಂಡಾದಾಳಿ: ಡಿವೈಎಫ್ಐ ಜಿಲ್ಲಾ ಸಮಿತಿ ಉಗ್ರ ಖಂಡನೆ

ಭಾರತ ಪ್ರಜಾಸ್ವಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ) ದ.ಕ. ಜಿಲ್ಲಾ ಸಮಿತಿಯು ೧೨-೩-೯೦ರಂದು ಸೇರಿದ್ದ ಸಭೆಯಲ್ಲಿ ವಿಶೇಷ ನಿರ್ಣಯ ಒಂದನ್ನು ಅಂಗೀಕರಿಸಿ ಇತ್ತೀಚಿನ ದಿನಗಳಲ್ಲಿ ಸಂಘ ಟನೆಯ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಸಮಾಜ ವಿರೋಧಿ ಗೂಂಡ ಶಕ್ತಿಗಳ ಮಾರಕ ದಾಳಿ ನಡೆಸು ತ್ತಿರುವುದನ್ನು ಉಗ್ರವಾಗಿ ಖಂಡಿಸಿತು.

ಮಂಗಳೂರು ತಾಲ್ಲೂಕಿನ ಜಪ್ಪಿನ ಮೊಗರು ಘಟಕದ ಕಾರ್ಯದರ್ಶಿ ಸೀತರಾಮ ಶೆಟ್ಟಿಯವರ ಮೇಲೆ ಮಾರಕಾ ಯುಧಗಳಿಂದ ದಾಳಿ ಮಾಡಿ ತೀವ್ರವಾಗಿ ಗಾಯಗೊಳಿಸಲಾಗಿದೆ. ಪಕ್ಕಲಡ್ಕ ಘಟಕದ ಕಾರ್ಯದರ್ಶಿ ಸತೀಶ್ ಅಂಜನ್‌ರವರ ಮೇಲೆ ಚೂರಿಯಿಂದ ಇರಿದು ಗಂಭೀರ ವಾಗಿ ಗಾಯ ಗೊಳಿಸಲಾಗಿದೆ. ಈ ಪ್ರದೇಶದಲ್ಲಿ ಸಮಾಜ ವಿರೋಧಿ ಗೂಂಡ ಶಕ್ತಿಗಳು ಸಕ್ರೀಯವಾಗಿದ್ದರೂ ಪೋಲೀಸ್ ಪಡೆ ನಿಷ್ಕ್ರೀಯವಾಗಿದ್ದು ಡಿ.ವೈ.ಎಫ್.ಐ. ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾಗಿದೆ. ಇತ್ತೀಚೆಗೆ ಕುಂದಾಪುರದ ಕಾವ್ರಾಡಿ ಡಿ.ವೈ. ಎಫ್.ಐ. ಕಾರ್ಯದರ್ಶಿ ಪ್ರಕಾಶ್ ರವರ ಮೇಲೆ, ಬಸ್ರೂರಿನ ಶಾರದಾ ಕಾಲೇಜಿನ ಆವರಣದಲ್ಲೇ ಗೂಂಡ ಶಕ್ತಿಗಳು ಧಾಳಿ ನಡೆಸಿರುವುದನ್ನು ಇಲ್ಲಿ ನೆನಪಿಸಬಹುದು.

ಪರಿಸ್ಥಿತಿ ಸುಧಾರಿಸದಿದ್ದಲ್ಲಿ ಪೋಲೀಸ್ ಇಲಾಖೆ ನಿಷ್ಕ್ರೀಯತೆಯನ್ನು ತೊಡೆಯ ದಿದ್ದಲ್ಲಿ ತೀವ್ರ ತೆರನಾದ ಕಾರ್ಯಕ್ರಮ ಗಳಿಗೆ ಯೋಜನೆ ರೂಪಿಸಬೇಕಾದೀತೆಂದೂ ಜಿಲ್ಲಾ ಸಮಿತಿ ಎಚ್ಚರಿಸಿದೆ.

ಭೂ ಹೋರಾಟ ದತ್ತ

ಶಿರುಗುಪ್ಪ ತಾಲೂಕಿನಾದ್ಯಂತ ಅಪಾರ ವಾದ ಬಂಜರು, ಇನಾಂ ಮತ್ತು ಪರಂಪೋತು ಭೂಮಿ ಇದ್ದು, ಇನ್ನೊಂದೆಡೆ ಮುಕ್ಕಾಲು ಪಾಲು ಸಂಖ್ಯೆ ಯಲ್ಲಿರುವ ಕೃಷಿ ಕೂಲಿಕಾರರು ಮತ್ತು ಭೂಹೀನರು. ಈ ಸಮಸ್ಯೆಗೆ ಪರಿಹಾರ ವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ಸಂಘಟಿತರಾದ ಇವರು ಹೋರಾಟದಲ್ಲಿ ಕಂಡು ಕೊಂಡಿದ್ದು ಭೂಮಿ ಹಿಡಿಯಲು ಅಪಾರ ಸಂಖ್ಯೆ ಯಲ್ಲಿ ಮುನ್ನಗ್ಗಿ ಬರುತ್ತಿದ್ದಾರೆ.

ಈಗಾಗಲೇ ಕಾ॥ ಇ.ಆರ್. ಯಲ್ಲಪ್ಪನವರ ಮುಖಂಡತ್ವದಲ್ಲಿ ೨೪ ಎಕರೆ ಭೂಮಿಯನ್ನು ರಾರಾವಿಯಲ್ಲಿ ಮತ್ತು ಕಾ॥ ಮಾರಪ್ಪ, ಕಾ॥ ಕೆ. ಬಸವಗೌಡ ಕಾ॥ ಬಿ. ಈರಣ್ಣ, ಕಾ॥ ಶಿವಲಿಂಗಪ್ಪನವರ ಮುಖಂಡತ್ವದಲ್ಲಿ ಕೆ. ಸೂಗೂರಿನಲ್ಲಿ ೧೩ ಎಕರೆ ಭೂಮಿ ಹಿಡಿಯಲಾಗಿದೆ. ಶಾನವಾಸಪುರದಲ್ಲಿ ಚಳುವಳಿ ಪ್ರಾರಂಭವಾಗಿದ್ದು, ಕೆ.ಸೂಗೂರು ಮತ್ತು ಹಿರೇಹಾಳ್‌ಗಳಲ್ಲಿ ಹೋರಾಟದ ಸಿದ್ಧತೆ ನಡೆಯುತ್ತಿದೆ. ಹದಿನೈದು ದಿನದ ಹಿಂದೆ ಪ್ರಾರಂಭವಾದ ಈ ಚಳುವಳಿ ತಿಂಗಳುಗಟ್ಟಲೆ ನಡೆಯುವ ಸಾಧ್ಯತೆ ಇದೆ. ತಾಲ್ಲೂಕಿನ ರೈತರಲ್ಲಿ ಹೊಸ ಸ್ಫೂರ್ತಿ, ಹುಮ್ಮಸ್ಸು ಮೂಡಿ ಬಂದಿದ್ದು, ಹೊಸ ಹೊಸ ಹಳ್ಳಿಗಳಿಗೆ ಸಂಘಟನೆ ತೀವ್ರವಾಗಿ ವಿಸ್ತರಿಸಲಾಗಿದೆ.

– ವರದಿ: ಪುಲಿಕಟ್ಟೆ ಚನ್ನಬಸಪ್ಪ

ವೈಜ್ಞಾನಿಕ, ಪ್ರಗತಿಪರ, ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಲು ಯುವಕರಿಗೆ ಕರೆ

ಮಾರ್ಚ್ ೪ರಂದು ಕುಪ್ಪೆಪದವಿನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನ ಗುರುಪುರ ವಲಯ ಸಮ್ಮೇಳನ ನಡೆಯಿತು. ಉದ್ಘಾಟನೆ ನಡೆಸಿದ ಮಂಗಳೂರು 'ಸಮುದಾಯ'ದ ವಾಸುದೇವ ಉಚ್ಚಿ ಲರು ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿದಿರುವ ಭಾರತದಲ್ಲಿ ಜಾತಿ ಧರ್ಮ ಆಧಾರದಲ್ಲಿ ಗಲಭೆಗಳು, ಹೋರಾಟಗಳು ನಡೆಯುತ್ತವೆಯೇ ವಿನಹ: ಬಡತನ, ನಿರುದ್ಯೋಗ, ಅನಕ್ಷರತೆಯ ವಿರುದ್ಧವಾಗಿ ಹೋರಾಟನಡೆಸಲು ತಯಾರಿಲ್ಲದ ಸಂಘ, ಸಂಸ್ಥೆಗಳು ಮೂಡಿ ಬರುತ್ತಿರುವುದು ವಿಷಾದನೀಯವೆಂದ ಅವರು ಈ ಆಧಾರ ದಲ್ಲಿ ಡಿ.ವೈ.ಎಫ್.ಐ. ಒಂದೇ ಒಂದು ಯುವಜನ ಸಂಘಟನೆ ಅಖಿಲ ಭಾರತ ಮಟ್ಟದಲ್ಲಿ ಹೋರಾಡುತ್ತಿದೆ ಎಂದರು.

ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ದ.ಕ. ಜಿಲ್ಲಾ ಸಮಿತಿ ಡಿ.ವೈ.ಎಫ್.ಐ. ಕಾರ್ಯದರ್ಶಿ ಆರ್.ಜಯಕುಮಾರ್ ಮತ್ತು ಅಧ್ಯಕ್ಷ ಜೆ.ಸದಾಶಿವ ಶೆಟ್ಟಿ ಆಗಮಿಸಿದ್ದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಪದ್ಮನಾಭ ನೆಲ್ಲಿತೀರ್ಥರವರು ವಹಿಸಿದ್ದರು.

ಸಮ್ಮೇಳನದಲ್ಲಿ ಡಿ.ವೈ.ಎಫ್.ಐ. ಚಟುವಟಿಕೆಯ ಬಗ್ಗೆ ಭಾಸ್ಕರ ಆಚಾರಿಯವರು ವರದಿ ಮಂಡಿಸಿ ಅದರ ಮೇಲೆ ಚರ್ಚೆ ನಡೆದ ನಂತರ ಅಂಗೀಕರಿಸಲಾಯಿತು.

ಸಮ್ಮೇಳನ ಜಪ್ಪಿನ ಮೊಗರು ಡಿ.ವೈ.ಎಫ್.ಐ. ಘಟಕದ ಕಾರ್ಯದರ್ಶಿ ಜೆ.ಸೀತಾರಾಮ ಶೆಟ್ಟಿಯವರ ಮೇಲೆ ಕಾಂಗ್ರೆಸ್ ಗೂಂಡಾಗಳು ನಡೆಸಿರುವ ಹಲ್ಲೆಗೆ ತೀವ್ರ ಖಂಡನೆ ಮತ್ತು ತನಿಖೆ ನೆನೆಗುದಿಗೆ ಬಿದ್ದಿರುವ ಇರುವೈಲು ಸೇತುವೆ ರಚನೆಗೆ, ಮುಚ್ಚೂರು ನಿಡ್ಡೋಡಿ ರಸ್ತೆಗೆ ಡಾಂಬರು ಹಾಕಬೇಕೆಂದು ಒತ್ತಾಯಿಸಿ ನಿರ್ಣಯ ಕೈಗೊಂಡಿತು. ರಾಷ್ಟ್ರೀಯ ರಂಗದ ಕೇಂದ್ರ ಸರ್ಕಾರಕ್ಕೆ, ನೆಲ್ಸನ್‌ಮಂಡೇಲಾರಿಗೆ ಕ್ರಾಂತಿಕಾರಕ ಸ್ವಾಗತ ನೀಡುತ್ತಾ ಅವರ ಹೋರಾಟಗಳಿಗೆ ಹಾಗೂ ಭಾರತ ಜ್ಞಾನ ವಿಜ್ಞಾನ ಜಾಥಾಕ್ಕೆ ಸಮ್ಮೇಳನ ಬೆಂಬಲ ವ್ಯಕ್ತಪಡಿಸಿತು. ಜಮ್ಮು ಕಾಶ್ಮೀರದಲ್ಲಿ ಭಿದ್ರಕಾರಿ ಮತ್ತು ಸಾಮ್ರಾಜ್ಯಶಾಹಿಗಳು ಗಲಭೆ ಎಬ್ಬಿಸುತ್ತಿರುವುದಕ್ಕೆಖಂಡಿಸಿದ ಸಮ್ಮೇಳನ ೬ ದಿನದ ಕೆಲಸ ಇಲ್ಲದಿದ್ದರೆ ಪರಿಹಾರಕ್ಕಾಗಿ ಹೋರಾಟ ಮಾಡುತ್ತಿರುವ ಬೀಡಿ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿತು. ಕೊಂಕಣ ರೈಲ್ವೆ ಪ್ರಾರಂಭವಾಗುತ್ತಿರುವುದನ್ನು ಸಮ್ಮೇಳನ ಸ್ವಾಗತಿಸಿತು.

ಭಾರತ ಜ್ಞಾನ ವಿಜ್ಞಾನ

ಸಮ್ಮೇಳನವು ಮುಂದಿನ ವರುಷದ ಚಟುವಟಿಕೆಗಾಗಿ ಹೊಸ ಸಮಿತಿಯನ್ನು ಚುನಾಯಿಸಿತು. ಅಧ್ಯಕ್ಷರಾಗಿ ಕೃಷ್ಣಪ್ಪ ವಾಮಂಜೂರು, ಉಪಾಧ್ಯಕ್ಷರಾಗಿ ಪದ್ಮನಾಭ ನೆಲ್ಲಿತೀರ್ಥ ಹಾಗೂ ಸದಾಶಿವ ದಾಸ್ ಕುಪ್ಪೆಪದವು, ಕಾರ್ಯದರ್ಶಿಯಾಗಿ ಭಾಸ್ಕರ ಆಚಾರಿ, ಸಹಕಾರ್ಯದರ್ಶಿಗಳಾಗಿ ಎನ್.ಎ. ಹಸನಬ್ಬ, ಶೇಖರ್ ವಾಮಂಜೂರು, ಕು.ಬೇ.ಬಿ. ಮಳಲಿ, ಕೋಶಾಧಿಕಾರಿಯಾಗಿ ಹರಿಶ್ಚಂದ್ರ ಮಳಲಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಹಾಮದ್ ಕುಪ್ಪೆಪದವು, ಸುಧಾಕರ ಕುಪ್ಪೆಪದವು, ಅಬ್ದುಲ್ ರಹಿಮಾನ್ ಕುಪ್ಪೆಪದವು, ಜನಾರ್ಧನ ಇರುವೈಲು, ನೋಣಯ ಬಡಗ ಎಡಪದವು, ಲೋಕಯ ಬಂಗೇರ ಮಳಲಿ, ಸತೀಶ, ಮತ್ತು ಶೇಖರ್ ವಾಮಂಜೂರಿನಿಂದ ಚುನಾಯಿಸಲಾಯಿತು.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಬಿ.ಮಾಧವ, ಅಧ್ಯಕ್ಷರು, ಸಮಾಜ ವಿಜ್ಞಾನ ವೇದಿಕೆ ಮಂಗಳೂರು ಇವರು ಮಾತನಾಡುತ್ತಾ ಉದ್ಯೋಗದ ಹಕ್ಕಿಗಾಗಿ, ಬಡತನ ನಿವಾರಣೆಗಾಗಿ, ಶಿಕ್ಷಣದ ಸಾರ್ವತ್ರಿಕರಣಕ್ಕಾಗಿ ದೇಶ ಬೆಳವಣಿಗೆಗಾಗಿ ಯುವಜನರ, ಜನತೆಯ ಐಕ್ಯತೆಯನ್ನು ಕಟ್ಟಿ ಬೆಳೆಸಬೇಕು ಎಂದರು.

ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ಆರ್. ಜಯಕುಮಾರ್‌ರವರು ಮಾತನಾಡುತ್ತಾ ಮುಂಬರುವ ದಿನಗಳಲ್ಲಿ ಉದ್ಯೋಗದ ಹಕ್ಕಿಗಾಗಿ ಮತ್ತು ನಿರುದ್ಯೋಗ ಭತ್ತೆಗಾಗಿ ರಾಜ್ಯ ಮತ್ತು ಕೇಂದ್ರ ಸರಕಾರದ ವಿರುದ್ಧ ಡಿ.ವೈ.ಎಫ್.ಐ. ನೇತೃತ್ವದಲ್ಲಿ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಬಹಿರಂಗಸಭೆಯ ಅಧ್ಯಕ್ಷತೆಯನ್ನು ಗುರುಪುರ ವಲಯ ಸಮಿತಿ ಅಧ್ಯಕ್ಷರಾದ ಕೃಷ್ಣಪ್ಪ ವಾಮಂಜೂರು ವಹಿಸಿದರು. ಮನರಂಜನಾ ಕಾರ್ಯಕ್ರಮದ ಅಂಗವಾಗಿ ಬೃಹತ್ ಮೆರವಣಿಗೆಯಲ್ಲಿ ಡಿ.ವೈ.ಎಫ್.ಐ. ವಾಮಂಜೂರು ಘಟಕದಿಂದ ತಾಲೀಮ್ ಪ್ರದರ್ಶನ ಹಾಗೂ ಡಿ.ವೈ.ಎಫ್.ಐ. ಮಿಜಾರು ಘಟಕದಿಂದ ಕುಡುಬಿ ಜನಾಂಗದ ಕೋಲಾಟ ನೃತ್ಯ ಕಾರ್ಯಕ್ರಮದ ಪ್ರದರ್ಶನವಿತ್ತು.

ಪ್ರಾರಂಭದಲ್ಲಿ ವಂಸತ ಆಚಾರಿಯವರು ಸ್ವಾಗತಿಸಿ ಕೊನೆಯಲ್ಲಿ ಸದಾಶಿವ ದಾಸ್‌ರವರು ವಂದಿಸಿದರು.

ತಾಲ್ಲೂಕು ರೈತಸಂಘದ ಪದಾಧಿಕಾರಿಗಳು

ಕರ್ನಾಟಕ ಪ್ರಾಂತ ಸಂಘವು ದಿನಾಂಕ ೧೭-೨-೯೦ ರಂದು ಸಿದ್ಧಾಪುರ ಬಿ. ಗ್ರಾಮದಲ್ಲೇ ಸಭೆ ಸೇರಿ ರೈತ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಈ ಸಭೆಯ ಅಧ್ಯಕ್ಷತೆಯನ್ನು ಮಂಡಲ ಪಂಚಾಯತ್ ಸದಸ್ಯರಾದ ಹಣಮಂತ್ರಾಯ ಬಿರಾದರ ವಹಿಸಿದ್ದರು. ಜಿಲ್ಲಾ ಜಂಟಿ ಕಾರ್ಯದರ್ಶಿಯಾದ ಚನ್ನಪ್ಪ ಆನೆಗುಂದಿ ಇವರ ಕರ್ನಾಟಕ ಪ್ರಾಂತ ರೈತ ಸಂಘ ಬೆಳೆದು ಬಂದ ದಾರಿ ಮತ್ತು ಅದು ಮಾಡಿದ ಹೋರಾಟದ ಇತಿಹಾಸವನ್ನು ರೈತರಿಗೆ ಹೇಳಿ ಹೋರಾಟಕ್ಕೆ ಮುಂದಾಗಲು ಮನವಿ ಮಾಡಿದರು. ಈ ಕೆಳಗಿನಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ

ಪದಾಧಿಕಾರಿಗಳು:- ಅಧ್ಯಕ್ಷರು:
ಶರಣಗೌಡ ಬಿರಾದರ

ಉಪಾಧ್ಯಕ್ಷರು:	ಸಹಕಾರ್ಯದರ್ಶಿ:
ಹಣಮಂತ್ರಾಯ ಬಿರಾದರ	ಹೈಯಾಳಪ್ಪ ಸುರಪುರ
ಪರಮಣ್ಣ ಪೂಜಾರಿ	ಯಂಕಪ್ಪ ಗಂಟಿ.
ಕಾರ್ಯದರ್ಶಿ:	ಖಜಾಂಚಿ:
ನಂದಣ್ಣ ಪೂಜಾರಿ	ಭೀಮಣ್ಣ ಪಂಚಮ

ಕರ್ನಾಟಕ ಪ್ರಾಂತ ರೈತ ಸಂಘವು ದಿನಾಂಕ ೧೭-೨-೯೦ ರಂದು ಶ್ರೀಮಾನ್ ಹಣಮಂತ್ರಾಯಗೌಡ ರಾಗೇರ ಇವರ ಅಧ್ಯಕ್ಷತೆಯಲ್ಲ ರಾಗೇರಿಯಲ್ಲಿ ರೈತರು ಸಭೆ ಸೇರಿ ರೈತ ಸಂಘದ ಪಧಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಸಭೆಯಲ್ಲಿ ತಾಲೂಕು ಕಾರ್ಯದರ್ಶಿ ಹಳ್ಳೆಪ್ಪ ಹಾವಾಲ್ದಾರ್ ಮತ್ತು ಜಿಲ್ಲಾ ಜಂಟಿ ಕಾರ್ಯದರ್ಶಿ ಚನ್ನಪ್ಪ ಆನೆಗುಂದಿ ಭಾಗವಹಿಸಿದ್ದರು.

ಅಧ್ಯಕ್ಷರು:
ತಿಮ್ಮಯ್ಯ ಹಳ್ಳಳ್ಳಿ
ಉಪಾಧ್ಯಕ್ಷರು:
ಭೀಮಣ್ಣ ಬಡಿಗೇರ
ಹಣಮಂತ ಹರಿಜನ
ಕಾರ್ಯದರ್ಶಿ:
ಹಣಮಂತ್ರಾಯ ಭೀಮರಾಯ ಬಿರಾದರ
ಸಹಕಾರ್ಯದರ್ಶಿ:
ದೇವಿಂದ್ರಪ್ಪ ಬಿರಾದರ
ಹಣಮಂತ್ರಾಯ ಹಳ್ಳಳ್ಳಿ
ಖಜಾಂಚಿ:
ಹಣಮಂತ್ರಾಯಗೌಡ ಪೋ.ಪಾ.

ವಾರ್ಷಿಕ ರೂ.	75.00
ಅರ್ಧವಾರ್ಷಿಕ ರೂ.	38.00
ಮೂರು ತಿಂಗಳಿಗೆ ರೂ.	19.00

ಸಂಕ್ಷಿಪ್ತ ಸುದ್ದಿಗಳು

ಮಹಿಳಾ ಸಂಘಟನೆ: ಪಡುಕೋಣೆ ಘಟಕ ರಚನೆ

ಕುಂದಾಪುರ ತಾಲೂಕಿನ ಪಡುಕೋಣೆಯಲ್ಲಿ ಮಾರ್ಚ್ ೧೮ ರಂದು ಎ.ಐ.ಡಿ.ಡಬ್ಲ್ಯು.ಎ. ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಗಿರಿಜಾ ಭಂಡಾರಿ ಸಂಚಾಲಕಿಯಾಗಿ, ಪೂರ್ಣಿಮಾ ಮತ್ತು ಸಕು ಸಹ ಸಂಚಾಲಕಿಯರಾಗಿರುವ ೧೧ ಜನರ ಸಮಿತಿಯನ್ನು ರಚಿಸಲಾಯಿತು. ಕುಂದಾಪುರ ತಾಲ್ಲೂಕು ಸಂಚಾಲಕಿ ಎಸ್.ಆರ್. ಲೀಲಾವತಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಶ್ರದ್ಧಾಂಜಲಿ ಅರ್ಪಣೆ

ಮಾರ್ಚ್ ೬ ರಂದು ನಿಧನರಾದ ಪಕ್ಷದ ಅಳವೆ ಶಾಖೆಯ ಸದಸ್ಯ ಕಾಂ. ಎಂ. ಹರಿಕೃಷ್ಣರವರ ಪತ್ನಿ ಸುಲೋಚನ ಅವರಿಗೆ ಶಾಖೆ ಮಾರ್ಚ್ ೧೧ ರಂದು ನಡೆದ ಸಭೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಿತು. ಮೃತರು ಪಕ್ಷದ ಹಿತೈಷಿಯಾಗಿದ್ದು ಸಹಕಾರ ನೀಡುತ್ತಿದ್ದರು ಎಂದು ನಿರ್ಣಯ ಹೇಳಿದೆ.

ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಕುಂದಾಪುರ ತಾಲ್ಲೂಕಿನ ಗ್ರಗೊರಿ ಹೈಸ್ಕೂಲಿನ ಎಸ್.ಎಫ್.ಐ. ಘಟಕ ಶಾಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವೊಂದನ್ನು ಮಾರ್ಚ್ ೯ ರಂದು ಏರ್ಪಡಿಸಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಚಂದ್ರಶೇಖರ್ ವಿ. ಪ್ರಜಾಸತ್ತಾತ್ಮಕ ಚಳುವಳಿ ಕಟ್ಟಿ ಬೆಳೆಸುವ ಅನಿವಾರ್ಯತೆ ಯನ್ನು ವಿವರಿಸಿದರು.

ಡಿ.ವೈ.ಎಫ್.ಐ. ಉಳ್ಳಾಲ ವಲಯ ಸಮ್ಮೇಳನ

ಡಿ.ವೈ.ಎಫ್.ಐ. ನ ಉಳ್ಳಾಲ ವಲಯ ಸಮ್ಮೇಳನವನ್ನು ತೊಕ್ಕೊಟ್ಟುನಲ್ಲಿ ಮಾರ್ಚ್ ೨೫ ರಂದು ನಡೆಸಲಾಗುವುದು. ಮಾರ್ಚ್ ೫ ರಂದು ಇದನ್ನು ಯಶಸ್ವಿ ಯಾಗಿ ನಡೆಸಲು ೭೧ ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಮಂಡಲ ಸದಸ್ಯ ರಾಜೀವ್ ಮೆಂಡನ್ ಇದರ ಅಧ್ಯಕ್ಷರು. ಕೆ. ಯಾದವ ಶೆಟ್ಟಿ, ಕಾರ್ಯದರ್ಶಿ ಬಾಬು ಪಿಲಾರ್ ಜೊತೆ ಕಾರ್ಯದರ್ಶಿ ಜನಾರ್ಧನ್ ನಾಯಕ್ ಖಜಾಂಚಿ.



ಪಂಜಾಬ್: ಬಲಿಯಾಗುವ ಮುಗ್ಧರ ಸಂಖ್ಯೆ ಏರುತ್ತಿದೆ

ಮಾರ್ಚ್ ೭ ರಂದು ಅಬೋಹರ್‌ನಲ್ಲಿ ೩೨ ಮಂದಿಯ ಸಾಮೂಹಿಕ ಹತ್ಯಾಕಾಂಡ ನಡೆಸಿದ ನಂತರ ಖಾಲಿಸ್ತಾನೀ ಭಯೋತ್ಪಾದಕರು ಫಿರೋಜ್‌ಪುರ್‌ನಲ್ಲಿ ಮಾರ್ಚ್ ೧೯ ರಂದು ಮತ್ತೊಮ್ಮೆ ೧೦ ಜನರ ಕೊಲೆ ನಡೆಸಿರುವುದರ ಬಗ್ಗೆ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆಘಾತ ಹಾಗೂ ದುಃಖ ವ್ಯಕ್ತಪಡಿಸಿದೆ.

ಇತ್ತೀಚಿನ ದಿನಗಳಲ್ಲಿ ಉಗ್ರಗ್ರಾಮಿಗಳ ಚಟುವಟಿಕೆಗಳು ತೀವ್ರ ಗೊಳ್ಳುತ್ತಿದೆ. ಅವಕ್ಕೆ ಬಲಿಯಾಗುತ್ತಿರುವ ಮುಗ್ಧರ ಸಂಖ್ಯೆ ಏರುತ್ತಲೇ ಇದೆ. ಬಲವಂತದಿಂದ ಹಣ ಕಸಿದುಕೊಳ್ಳುವುದು, ಅಪಹರಣ ಎಗ್ಗಿಲ್ಲದೆ ಸಾಗಿದೆ. ಇವೆಲ್ಲದರ ವಿರುದ್ಧ ದೃಢ ಕ್ರಮಗಳನ್ನು ಕೈಗೊಂಡು ಜನಗಳ ಪ್ರಾಣ ಆಸ್ತಿಗಳ ರಕ್ಷಣೆ ಮಾಡಬೇಕೆಂದು ಸಿ.ಪಿ.ಐ.(ಎಂ) ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದೆ.

ಭಯೋತ್ಪಾದಕತೆ ಮತ್ತು ಪ್ರತ್ಯೇಕತಾವಾದವನ್ನು ಖಂಡಿಸದ ಯಾವುದೇ ಅಕಾಲಿ ಗುಂಪಿನೊಂದಿಗೆ ಮಾತುಕತೆ ನಡೆಸಬಾರದೆಂದೂ ಪಿ.ಬಿ. ಸರಕಾರವನ್ನು ಒತ್ತಾಯಿಸಿದೆ. ಹದಗೆಡುತ್ತಿರುವ ಪರಿಸ್ಥಿತಿಯಿಂದ ಪಾಠ ಕಲಿತು ಅವರು ಈ ದೇಶ-ವಿರೋಧಿ ಚಟುವಟಿಕೆಗಳಿಂದ ತಮ್ಮನ್ನು ದೃಢವಾಗಿ ಪ್ರತ್ಯೇಕಿಸಿಕೊಳ್ಳಬೇಕು. ಶಾಂತಿ, ಸಾಮಾನ್ಯ ಸ್ಥಿತಿ ಸ್ಥಾಪಿಸಿದೆ ರಾಜ್ಯದಲ್ಲಿ ಚುನಾವಣೆ ಸಾಧ್ಯವಿಲ್ಲವೆಂದು ಅವರಿಗೆ ಹೇಳಬೇಕೆಂದೂ

ಜನತೆಯೊಡನೆ ನಿಕಟ ಸಂಪರ್ಕ: ಚೀಣೀ ಪಕ್ಷದ ಕರೆ

೧೯೯೦ರ ದಶಕ ಬದಲಾಗಬಹುದಾದ ದೃಷ್ಟಿಯಿಂದ ನಿರ್ಣಾಯಕವಾದ ದಶಕ. ಬದಲಾಗಬಹುದಾದ ವಿಶ್ವ ಸನ್ನಿವೇಶ, ದೇಶದೊಳಗೆ ತಾತ್ಕಾಲಿಕವಾಗಿ ಕಠಿಣ ಪರಿಸ್ಥಿತಿ ಇದ್ದರೂ ಚೀಣಾ ಖಂಡಿತಾ ಯಾರೂ ಬುಡಮೇಲು ಮಾಡಲಾಗದ ಘಟ್ಟ ತಲುಪುತ್ತದೆ. ಆದರೆ ಇದಕ್ಕೆ ಸ್ವಲ್ಪವೂ ವಿಳಂಬ ಮಾಡದೆ ರಾಷ್ಟ್ರೀಯ ಆರ್ಥಿಕ ಮತ್ತಿತ್ತರ ಆಂತರಿಕ ವಿಷಯಗಳ ಬಗ್ಗೆ ಸೂಕ್ಷ್ಮ ಗಮನ ಕೊಡಬೇಕು ಎಂದು ಚೀಣಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಆರನೇ ಪ್ಲಿನರಿ ಅಧಿವೇಶನ ಕರೆ ನೀಡಿದೆ.

ಪಕ್ಷ ಮತ್ತು ಜನಸಮೂಹಗಳ ನಡುವೆ, ಪಕ್ಷದ ಕಾರ್ಯಕರ್ತರು ಮತ್ತು ಜನಸಮೂಹಗಳ ನಡುವೆ ಸುಮಾರಾಗಿ ಒಳ್ಳೆಯ ಸಂಬಂಧಗಳಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಧಿಕಾರಶಾಹಿ, ವೈಯುಕ್ತಿಕತೆ, ನಿಷ್ಕ್ರಿಯತೆ, ಭ್ರಷ್ಟಾಚಾರದ ಪ್ರವೃತ್ತಿಗಳು ಕಂದರ ಸೃಷ್ಟಿಸುತ್ತಿವೆ. ಇವುಗಳ ವಿರುದ್ಧ ಅತ್ಯಂತ ಜಾಗರೂಕರಾಗಿರಬೇಕು. ಜನಸಮೂಹಗಳೊಂದಿಗೆ ನಿಕಟ ಸಂಪರ್ಕ ಇಟ್ಟುಕೊಳ್ಳುವ ಪಕ್ಷದ ಉತ್ತಮ ಪರಂಪರೆಯನ್ನು ಕಾದುಕೊಂಡು ಅಭಿವೃದ್ಧಿ ಪಡಿಸಬೇಕೆಂದು ಮಾರ್ಚ್ ೯ ರಿಂದ ೧೨ರವರೆಗೆ ನಡೆದ ಪ್ಲಿನರಿ ಅಧಿವೇಶನ ಕರೆ ನೀಡುತ್ತಾ ಇದರತ್ತ ವಿಶೇಷ ಗಮನ ನೀಡಲು ಅಗತ್ಯವಾದ ಏಳು ಅಂಶಗಳತ್ತ ಪಕ್ಷ ಗಮನ ಕೇಂದ್ರಿಕರಿಸಬೇಕೆಂದು ಹೇಳಿದೆ.

ಈ ಏಳು ಅಂಶಗಳೆಂದರೆ ೧. "ಜನಸಮೂಹಗಳಿಂದ ಬಂದು ಜನಸಮೂಹಗಳತ್ತ" ಎಂಬ ಆಚರಣೆಗೆ ಬದ್ಧರಾಗಿ ಯೋಜನೆ ರೂಪಿಸುವ ಹಾಗೂ ಜ್ಯಾರಿಗೊಳಿಸುವ ಪ್ರಜಾಸತ್ತಾತ್ಮಕ, ವೈಜ್ಞಾನಿಕ ಪ್ರಕ್ರಿಯೆಯನ್ನು ಇನ್ನಷ್ಟು ದಕ್ಷಗೊಳಿಸಬೇಕು.

೨. ಎಲ್ಲಾ ಹಂತಗಳಲ್ಲಿ ಎಲ್ಲಾ ಪ್ರಮುಖ ಕಾರ್ಯಕರ್ತರು ಬುಡಮಟ್ಟದ ಕಾರ್ಯಕರ್ತರ, ಜನಸಮೂಹಗಳ ಜೊತೆಗೆ ಕೆಲಸಮಾಡುವ ವ್ಯವಸ್ಥೆಯನ್ನು ತಪ್ಪದೆ ಮುಂದುವರೆಸಬೇಕು.

೩. ರಾಜಕೀಯ ಪುನರ್ರಚನೆಯಲ್ಲಿ ಸಮಾಜವಾದೀ ಪ್ರಜಾಪ್ರಭುತ್ವ ಮತ್ತು ಕಾನೂನು ವ್ಯವಸ್ಥೆಯನ್ನು ಬಲಗೊಳಿಸುವುದು.

೪. ಒಂದು ಪ್ರಾಮಾಣಿಕ, ಸ್ವಚ್ಛ ಸರಕಾರ ರಚಿಸುವ ಕೆಲಸವನ್ನು ಪಟ್ಟು ಹಿಡಿದು ಬಲಗೊಳಿಸುವುದು

೫. ವಿವಿದ ಹಂತಗಳಲ್ಲಿ ಪಕ್ಷದ ಪ್ರಮುಖ ಸಂಘಟನೆಗಳ ಮೇಲೆ, ಪ್ರಮುಖ ಅಧಿಕಾರಿಗಳ ಮೇಲೆ ಉಸ್ತುವಾರಿಯ ದಕ್ಷ ವ್ಯವಸ್ಥೆ.

೬. ಬುಡಮಟ್ಟದ ಪಾರ್ಟಿ ಘಟಕಗಳು, ಸದಸ್ಯರು ಮೇಲ್ಪಂಕ್ತಿ ಹಾಕಿ ಜನರನ್ನು ಅಣಿನೆರೆಸುವ ಪಾತ್ರ ವಹಿಸುವಂತೆ ನೋಡಿಕೊಳ್ಳುವುದು ಹಾಗೂ.

೭. ಜನಸಮೂಹಗಳಿಗೆ ಸಂಬಂಧ ಪಟ್ಟಂತೆ ಮಾರ್ಕ್ಸ್‌ವಾದೀ ದೃಷ್ಟಿಕೋನದ ಬಗ್ಗೆ ಪಕ್ಷದೊಳಗೆ ವ್ಯಾಪಕ ಹಾಗೂ ಆಳವಾದ ಶಿಕ್ಷಣ.



ಮಾರ್ಚ್ ೨೦ ಕೊನೆಗೊಳ್ಳುತ್ತಿದ್ದಂತೆ ನಮೀಬಿಯಾ ರಾಜಧಾನಿಯಲ್ಲಿ ೭೫ ವರ್ಷಗಳಿಂದ ಹಾರಾಡುತ್ತಿದ್ದ ದಕ್ಷಿಣ ಆಫ್ರಿಕಾದ ಬಾವುಟವನ್ನು ಕೆಳಗಿಳಿಸಲಾಯಿತು. ಮಾರ್ಚ್೨೧ ಆರಂಭಗೊಳ್ಳುತ್ತಿದ್ದಂತೆ ಸ್ವಂತತ್ರ ನಮೀಬಿಯಾದ ಬಾವುಟ ಹಾರಲಾರಂಭಿಸಿತು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪೆರೆಸ್ ಡಿ ಕ್ಯೂಲರ್ ಸಾಮ್‌ನುಜೊಮಾರವರಿಗೆ ನಮೀಬಿಯಾದ ಅಧ್ಯಕ್ಷ ಪದವಿಯ ಪ್ರತಿಜ್ಞಾವಿಧಿ ಬೋಧಿಸಿದರು. ನುಜೊಮಾ ಅಂತರಾಷ್ಟ್ರೀಯ ಸಮುದಾಯಕ್ಕೆ ಕೃತಜ್ಞತೆ ಸಲ್ಲಿಸುತ್ತಾ 'ಐಕ್ಯತೆ ಹೊಂದಾಣಿಕೆಯ ಚೈತನ್ಯದೊಂದಿಗೆ ದೇಶ ಸರ್ವತೋಮುಖ ಬೆಳವಣಿಗೆ ಸಾಧಿಸುತ್ತದೆ' ಎಂದು ನಮೀಬಿಯಾದ ಜನತೆಯ ದೀರ್ಘಕಾಲದ ಕನಸು ಸಾಕಾರಗೊಳ್ಳುವತ್ತ ಸಾಗಿರುವುದನ್ನು ಬಿಂಬಿಸಿದರು.

"ನಾವು ಪಡೆದಿರುವುದು ಸಮತೋಲವಿಲ್ಲದ ಅಭಿವೃದ್ಧಿ ಹೊಂದದ ಒಂದು ಆರ್ಥಿಕವನ್ನು ದೊಡ್ಡ ಆರ್ಥಿಕ ತೊಂದರೆಗಳು ನಮ್ಮೆದುರುಗಿವೆ. ೨೦ ಶತಕೋಟಿ ಡಾಲರುಗಳ ಬಜೆಟ್ ಕೊರತೆಯಿದೆ. ಸ್ವಾಪೋ ವಿರುದ್ಧ ಸಮರ ಸಾದಿಸಲು, ದೇಶದಲ್ಲಿರುವ ವಿದೇಶೀ ಕಂಪೆನಿಗಳಿಗೆ ವಿಪರೀತ ತೆರಿಗೆ ರಿಯಾಯ್ತಿ ನೀಡಲು ವಿದೇಶಗಳಿಂದ ದಕ್ಷಿಣ ಆಫ್ರಿಕಾ ಸರ್ಕಾರ ಎತ್ತಿರುವ ಸಾಲದ ಹೊರೆಯಿದು. ೩೦ ಶೇಕಡಾ ನಿರುದ್ಯೋಗವಿದೆ. ದೇಶದ ಮೂರರಲ್ಲಿ ಎರಡಷ್ಟು ಜನ ಬಡವರು" ಎಂದು ಸ್ವತಂತ್ರ ನಮೀಬಿಯಾ ಮೊದಲನೇ ದಿನ ರಾಜಧಾನಿಯ ಸ್ಟೇಡಿಯಂನಲ್ಲಿ ಸ್ವತಂತ್ರ್ಯೋತ್ಸವ ಆಚರಿಸಲು ನೆರೆದ ಮುವತ್ತು ಸಾವಿರ ಜನರನ್ನುದ್ದೇಶಿಸಿ ಮಾತನಾಡುತ್ತ ಸಾಮ್‌ನುಜೋಮ ನೆನಪಿಸಿದರು.

ಹೊಂಡುರಾಸ್‌ನಲ್ಲಿ ಅಮೆರಿಕನ್ ಯುದ್ಧಾಭ್ಯಾಸಕ್ಕೆ ಸಿದ್ಧತೆ

ಹೊಂಡುರಾಸ್‌ನ ಪುಟ್ಟ ದೇಶದಲ್ಲಿ ಈ ವರ್ಷದ ಜೂನ್ ತಿಂಗಳೊಳಗೆ ೨೫ಸಾವಿರ ಅಮೆರಿಕನ್ ಸೈನಿಕರು ಬರಲಿದ್ದಾರೆ. ನಿಕರಾಗುವಾದ ದೇಶವಾದ ಇಲ್ಲಿ ಈಗಾಗಲೇ ೫೦೦೦ ಸೈನಿಕರು ಬಂದಿಳಿದಿದ್ದಾರೆ. ೧೯೮೩ರಲ್ಲಿ ನಿಕರಾಗುವಾದ ಮೇಲೆ ದಾಳಿ ಮಾಡಿದ ಕಳೆದ ವರ್ಷ ಪನಾಮಾ ನುಗ್ಗಿದ ಕುಖ್ಯಾತ ದಳದ ಒಂದು ಸಾವಿರ ಪ್ಯಾರಾಟ್ರೂಪರ್‌ಗಳು, ಸಿ-೧೩೦ ವಿಮಾನಗಳು ಹಾಗೂ ಇತರ ಸಾಧನಗಳೂ ಬಂದಿಳಿದಿವೆ. ಅಮೆರಿಕನ್ ಸೈನಿಕರು ಈ ವರ್ಷ ಒಟ್ಟು ಐದು ಸಮರಾಭ್ಯಾಸಗಳಲ್ಲಿ ಭಾಗವಹಿಸಲಿದ್ದಾರೆ. ಇಂತಹ ಸಮರಾಭ್ಯಾಸಗಳ ಮುಖ್ಯ ಉದ್ದೇಶಗಳು ಎರಡು ಅಮೆರಿಕನ್ ಸೈನಿಕರಿಗೆ ಈ ಪ್ರದೇಶದ ಪರಿಚಯ ನೀಡುವುದು. ಮುಂದೆ ಸೈನಿಕ ಮಧ್ಯ ಪ್ರವೇಶ ನಡೆಸಲು ಸುಗಮವಾಗಲು ಹಾಗೂ ಸ್ಥಳೀಯ ಸೈನಿಕರಿಗೆ ಬಂಡಾಯ ಅಡಗಿಸುವ ತರಬೇತಿ ನೀಡುವುದು. ೧೯೫೪ರಿಂದ ಇಂತಹ ನೂರು ಸಮರಾಭ್ಯಾಸಗಳು ನಡೆದಿವೆ. ಕಳೆದ ಮೂವತ್ತು ವರ್ಷಗಳಲ್ಲೇ ೩೬ ಸಮರಾಭ್ಯಾಸಗಳಲ್ಲಿ ೩.೨ ಸಾವಿರ ಸೈನಿಕರು ಇಂತಹ ತರಬೇತಿ ಪಡೆದರು.

ಉದ್ಯೋಗಿ ಮಹಿಳೆಯರು: ಚೀಣಾಕ್ಕೆ ಅಗ್ರಸ್ಥಾನ

ಚೀನೀ ಮಹಿಳೆಯರ ಉದ್ಯೋಗಿಗಳ ವಿಶ್ವದಲ್ಲೇ ಅತಿ ಹೆಚ್ಚು. ದುಡಿಯುವ ಜನಗಳಲ್ಲಿ ೩೧% ಮಹಿಳೆಯರು ದೇಶದ ವಿಜ್ಞಾನಿಗಳು, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರಲ್ಲಿ ಮೂರನೆ ಒಂದು ಭಾಗ ಮಹಿಳೆಯರು ಮದುವೆ ಹಾಗೂ ಕುಟುಂಬ ಜೀವನದಲ್ಲಿ ಸಮಾನತೆ ಈಗ ಚೀಣಾದಲ್ಲಿ ಒಂದು ಸಾಮಾನ್ಯ ಅಂಶ.

ಅಂತರಾಷ್ಟ್ರೀಯ ಮಹಿಳಾ ದಿನದ ಎಂಭತ್ತನೇ ವಾರ್ಷಿಕೋತ್ಸವವನ್ನು ಈ ಬಾರಿ ಇಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ನಿರಕ್ಷರತೆ ನಿವಾರಣೆ ಮತ್ತು ಕೃಷಿಯಲ್ಲಿ ವೈಜ್ಞಾನಿಕ ವಿಧಾನಗಳ ಬಳಕೆ ಕುರಿತಂತೆ ಒಂದು ವರ್ಷ ದೇಶವ್ಯಾಪಿ ಸ್ಪರ್ಧೆ ನಡೆಸಿ ಅದರಲ್ಲಿ ಗೆದ್ದ ೧೦೦೦ ಗ್ರಾಮೀಣ ಮಹಿಳೆಯರನ್ನು ಮಾರ್ಚ್ ೭ ರಂದು ಮಹಾ ಜನತಾ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ದೇಶ-ವಿದೇಶ

ಕಾಂ. ಡಿ.ಪಿ. ಮುತ್ತುಸಾಮಿ

ಸಿ.ಪಿ.ಐ.(ಎಂ) ತಮಿಳು ನಾಡು ರಾಜ್ಯಸಮಿತಿ ಸದಸ್ಯ, ಪೆರಿಯಾರ್ ಜಿಲ್ಲಾ ಸಮಿತಿಯ ಸದಸ್ಯರೂ ಆಗಿದ್ದ ಕಾಂ. ಡಿ.ಪಿ. ಮುತ್ತುಸಾಮಿ ಮಾರ್ಚ್ ೧೦ರಂದು ಒಂದು ಬಸ್ ಹರಿದು ನಿಧನರಾಗಿದ್ದಾರೆ. ಗಿರಣಿ ಕಾರ್ಮಿಕರಾಗಿದ್ದ ಇವರು ೫೦ರ ದಶಕದಲ್ಲಿ ಪಕ್ಷವನ್ನು ಸೇರಿ ಈ ನಾಲ್ಕು ದಶಕಗಳ ಕಾಲ ಟ್ರೇಡ್‌ಯೂನಿಯನ್ ಹಾಗೂ ಕಿಸಾನ್ ರಂಗದಲ್ಲಿ ದುಡಿದು ಪಕ್ಷ ಕಟ್ಟಿದ ಮುಖಂಡರಲ್ಲಿ ಒಬ್ಬರು. ಪರಿಷ್ಕರಣವಾದದ ವಿರುದ್ಧ ಹೋರಾಟದಲ್ಲೂ ಇವರದ್ದು ಸಕ್ರಿಯ ಪಾತ್ರವಿತ್ತು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೊ ಇವರಿಗೆ ತನ್ನ ಹಾರ್ದಿಕ ಶ್ರದ್ಧಾಂಜಲಿ ಅರ್ಪಿಸಿದೆ.

ಕಾಂ. ಸಮರೇಂದ್ರ ಸಾನ್ಯಾಲ್

ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಸದಸ್ಯ, ನಡಿಯಾ ಜಿಲ್ಲೆಯ ಎಡರಂಗ ಸಂಯೋಜಕರಾಗಿದ್ದ ಕಾಂ. ಸಮರೇಂದ್ರ ಸಾನ್ಯಾಲ್ ಮಾರ್ಚ್ ೩ರಂದು ನಿಧನರಾದರು. ಅವರಿಗೆ ೭೫ ವರ್ಷ ವಯಸ್ಸಾಗಿತ್ತು. ವಿಧ್ಯಾರ್ಥಿ ದೆಸೆಯಲ್ಲಿಯೇ ಸ್ವತಂತ್ರ ಸಂಗ್ರಾಮಕ್ಕೆ ಧುಮುಕಿದ ಕಾಂ. ಸಾನ್ಯಾಲ್ ೧೯೩೪ರಲ್ಲಿ ಪಕ್ಷ ಸೇರಿದರು. ತೆಭಾಗ್ ಹಾಗೂ ಇತರ ಚಳುವಳಿಗಳ, ೧೯೪೮ ಹಾಗೂ ೧೯೫೯ರ ಆಹಾರಧಾನ್ಯ ಆಂದೋಲನಗಳಲ್ಲಿ ಇವರದ್ದು ಒಂದು ಪ್ರಮುಖ ಪಾತ್ರ. ೧೯೭೧ ಹಾಗೂ ೧೯೭೭ರಲ್ಲಿ ಇವರು ಎಂ.ಎಲ್.ಎ. ಆಗಿದ್ದರು. ಎಡರಂಗದ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ, ಇತರ ಪ್ರಮುಖ ಸಿ.ಪಿ.ಐ.(ಎಂ) ಮುಖಂಡರು ಕಾಂ. ಸಾನ್ಯಾಲ್‌ರಿಗೆ ಹಾರ್ದಿಕ ಶ್ರದ್ಧಾಂಜಲಿ ಅರ್ಪಿಸಿದರು.


ಚೌಟಾಲ ಸರ್ಕಾರದ ರಾಜಿನಾಮೆ

ಹರಿಯಾಣಾ ಸಿ.ಪಿ.ಐ.(ಎಂ) ಒತ್ತಾಯ

ಮೇಹಾಂನಲ್ಲಿ ಚುನಾವಣೆಯ ಸಮಯದಲ್ಲಿ ನಡೆದ ಹಿಂಸಾಚಾರ ಭಜನ್‌ಲಾಲ್, ದೇವಿಲಾಲ್ ಇಬ್ಬರೂ ಪೋಷಿಸಿಕೊಂಡು ಬಂದ ರಾಜಕೀಯ ಸಂಸ್ಕೃತಿಯ ಪರಿಣಾಮ ಕಾಂಗ್ರೆಸ್(ಐ) ಚುನಾವಣೆಗಳಲ್ಲಿ ಧಾಂಧಲೆ ಎಬ್ಬಿಸಲು ಬಹಿರಂಗವಾಗಿಯೇ ಕುಖ್ಯಾತ ಸಮಾಜ ವಿರೋಧಿ ವ್ಯಕ್ತಿಗಳನ್ನು, ರಾಜ್ಯ ಅಧಿಕಾರ ಶಾಹಿಯನ್ನು ಬಳಸಿದರೆ, ದೇವಿಲಾಲ್‌ರ ಪಕ್ಷ (ಹಿಂದೆ ಲೋಕದಳ, ಈಗ ಜನತಾ ದಳ) ಕುಖ್ಯಾತರಿಗೇ ಟಿಕೆಟ್ ಕೊಟ್ಟು ರಾಜಕೀಯ ಗೌರವ ನೀಡಲಾರಂಭಿಸಿತು ಎಂದು ಸಿ.ಪಿ.ಐ.(ಎಂ) ಹರ್ಯಾಣಾ ರಾಜ್ಯ ಸೆಕ್ರೆಟರಿಯೆಟ್ ವಿಶ್ಲೇಷಿಸಿದೆ.

೧೯೮೭ರ ಫತೇಹಾಬಾದ್ ಉಪ 'ಚುನಾವಣೆಯಲ್ಲಿ ದೇವಿಲಾಲ್‌ರ ಪಕ್ಷ ಆರಂಭಿಸಿದ ಚುನಾವಣಾ ಧಾಂಧಲೆ ಮೆಹಾಂನಲ್ಲಿ ತಾರಕಕ್ಕೆ ಮುಟ್ಟಿದೆ. ಫತೇಹಾಬಾದ್ ಚುನಾವಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿ ಬಲಬೀರ್ ಚೌಧುರಿಯನ್ನು ಗೆಲ್ಲಿಸಲು ದೇವಿಲಾಲರ ಪಕ್ಷ ಸಿ.ಪಿ.ಐ.(ಎಂ) ಅಭ್ಯರ್ಥಿ ಪೃಥ್ವೀಸಿಂಹ ಗೋರಖ್‌ಪುರಿಯಾ ಅವರ ಹಲವಾರು ಕಾರ್ಯಕರ್ತರ ಮೇಲೆ ಗೂಂಡಾ ಹಲ್ಲೆ ನಡೆಸಿತು. ಸಿ.ಪಿ.ಐ.(ಎಂ) ಅಭ್ಯರ್ಥಿಗಳನ್ನು ಬೆಂಬಲಿಸುತ್ತಿದ್ದ ಧೈರ್ಯಮಾಡಿದ ಸಿಖ್ ಅಲ್ಪಸಂಖ್ಯಾತ ಸಮುದಾಯದ ಪ್ರಮುಖ ವ್ಯಕ್ತಿಗಳನ್ನು ಪೋಲೀಸ್ ಠಾಣೆಗೆ ಕರೆದು ಉಗ್ರವಾದಿಗಳೆಂದು ಹೇಳಿ ಸಿಲುಕಿಸುವ ಬೆದರಿಕೆ ಹಾಕಲಾಯಿತು.

ಇವನ್ನೆಲ್ಲಾ ವಿಶ್ಲೇಷಿಸಿದ ಸಿ.ಪಿ.ಐ.(ಎಂ)ನ ರಾಜ್ಯ ಸೆಕ್ರೆಟರಿಯೆಟ್ ಮೆಹಾಂ ನಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಜಾಸತ್ತೆಯ ಕೊಲೆಗೆ ಮುಖ್ಯಮಂತ್ರಿ ಓಂ ಪ್ರಕಾಶ್ ಚೌಟಾಲಾ ಪ್ರಮುಖ ಹೊಣೆಯೆಂದು ಹೇಳಿ ಚೌಟಾಲಾ ಸರ್ಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದೆ. ವಿಧಾನಸಭೆ ಯಲ್ಲಿ ಈ ಸರ್ಕಾರಕ್ಕೆ ತಮ್ಮ ಬೆಂಬಲ ಹಿಂತೆಗೆದುಕೊಳ್ಳಬೇಕೆಂದು ಪಕ್ಷದ ಎಂ.ಎಲ್.ಎ. ಗಳಿಗೆ ಅದು ಹೇಳಿದೆ. ಮಾರ್ಚ್ ೨೮ ರಂದು ರಾಜ್ಯಾದ್ಯಂತ 'ಪ್ರಜಾಸತ್ತೆ ಉಳಿಸಿ ದಿನಾಚರಣೆ' ನಡೆಸಲು ಕರೆ ನೀಡಿದೆ.



ಡಿ.ಡಿ.ಎ. ಭೂಮಿ ಹಗರಣ ಬಯಲಿಗೆ

ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿ ದಿಲ್ಲಿ ಅಭಿವೃದ್ಧಿ ಪ್ರಾಧಿಕರಣ ಡಿ.ಡಿ.ಎ.ದ ಅಧಿಕಾರಿಗಳು ಮತ್ತು ಕಾಂಗ್ರೆಸ್(ಐ) ಮುಖಂಡರು ಶಾಮೀಲಾದ ಒಂದು ದೊಡ್ಡ ಭೂಮಿ ಹಗರಣವನ್ನು ಬಯಲಿಗೆಳೆದಿದೆ.

ಸಾವನ್ ಪಾರ್ಕ್ ಬಡ ಕೈಮಗ್ಗ ನೇಕಾರರ ಗುಡಿಸಲುಗಳಿರುವ ಜಾಗ ಇಲ್ಲಿಯ ನಿವಾಸಿಗಳಿಗೆ ಅಶೋಕ ವಿಹಾರ ೪ನೇ ಘಟ್ಟ ಎಂಬಲ್ಲಿ ಪರ್ಯಾಯ ಫ್ಲಾಟ್ ನೀಡುವುದಾಗಿ ಅಲ್ಲಿ ಕೈಮಗ್ಗ ಹಾಕಿಕೊಳ್ಳಲೂ ಸೌಲಭ್ಯ ನೀಡುವುದಾಗಿ ಈ ಪ್ರದೇಶದ ಎಂ.ಪಿ. ಹಾಗೂ ಮಾಜಿ ಕೇಂದ್ರ ಕಾಂಗ್ರೆ ಮಂತ್ರಿ ಹೆಚ್.ಕೆ.ಎಲ್. ಭಗತ್ ಆಶ್ವಾಸನೆ ನೀಡಿದ್ದಾರೆ. ಈ ಬಗ್ಗೆ ಡಿ.ಡಿ.ಎ. ಎರಡು ವರ್ಷಗಳ ಹಿಂದೆ ಒಂದು ಸರ್ವೆ ನಡೆಸಿ ಇದರ ಆಧಾರದ ಮೇಲೆ ಈ ಬಗ್ಗೆ ಈ ಗುಡಿಸಲು ನಿವಾಸಿಗಳು ಹಲವು ಬಾರಿ ಧರಣಿ, ಭಗತ್ ನಿವಾಸದೆದುರೇ ಧರಣಿ ಇತ್ಯಾದಿ ನಡೆಸಿದರೂ, ಭಗತ್ ಹಲವು ಬಾರಿ ಆಶ್ವಾಸನೆ ನೀಡಿದರೂ ಪಟ್ಟಿ ಹೊರಬರಲಿಲ್ಲ.

ಕೊನೆಗೆ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟರಿಯೆಟ್‌ನ ಒಂದು ಪ್ರತಿನಿಧಿ ಮಂಡಲಿ ಉಪರಾಜ್ಯಪಾಲರನ್ನು ಭೇಟಿ ಮಾಡಿ ವಿಷಯದ ವಿವರಣೆ ನೀಡಿದ ಮೇಲೆಯೇ ಪಟ್ಟಿ ಹೊರಬಂತು. ಈ ಪಟ್ಟಿಯಲ್ಲಿದ್ದ ೧೮೫ ಜನರಲ್ಲಿ ಕನಿಷ್ಟ ೧೬೩ ಮಂದಿ ಸಾವನ ಪಾರ್ಕ್‌ನ ನಿವಾಸಿಗಳೇ ಅಲ್ಲ ಎಂದು ಈ ಪಟ್ಟಿಯ ಶೋಧನೆ ನಡೆಸಿದಾಗ ತಿಳಿದು ಬಂತು. ತ್ರಿನಗರದ ಸರ್ಕಲ್ ೧೩ರರೇಶನ್ ಅಧಿಕಾರಿ ಸುಳ್ಳು ರೇಶನ್ ಕಾರ್ಡ್ ನೀಡಿ ಇವರು ಈ ಪ್ರದೇಶದ ನಿವಾಸಿಗಳೆಂದು ಸಾಬೀತು ಮಾಡಲಾಗಿತ್ತು. ಇವರೆಲ್ಲರೂ ಕಾಂಗ್ರೆಸ್ (ಎಂ) ಮುಖಂಡರ ಸಂಬಂಧಿಗಳು ಅಥವಾ ಡಿ.ಡಿ.ಎ.ಅಧಿಕಾರಿಗಳು ಸಂಬಂಧಿಗಳು. ಅತ್ತ ಈ ಪ್ರದೇಶದಲ್ಲಿದ್ದ ೧೫೦ ಮಂದಿಯ ಹೆಸರುಈ ಪಟ್ಟಿಯಲ್ಲಿಲ್ಲ.

ಈ ಭೂಮಿಹಗರಣದ ಭಯಂಕರತೆಯನ್ನು ಕಂಡ ಸಿ.ಪಿ.ಐ.(ಎಂ) ಭೂಮಿ ಕಮಿಶನರ್ ತ್ರಿಪಾಠಿ, ಉಪನಿರ್ದೇಶಕ (ಶೃಂಗಾರಿಕಾ) ಅಲೋಕ್ ಸ್ವರೂಪ್ ಹಾಗೂ ಸಂಬಂಧಪಟ್ಟ ಇತರ ಡಿ.ಡಿ.ಎ. ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಹಗರಣದ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ. ಸಾವನ್ ಪಾರ್ಕ್‌ನ ಗುಡಿಸಲು ನಿವಾಸಿಗಳಿಗೆ ಈ ಫ್ಲಾಟುಗಳನ್ನು ನೀಡಬೇಕು. ಅದರ ಬೆಲೆಯನ್ನು ಸುಲಭ ಕಂತುಗಳಲ್ಲಿ ವಸೂಲು ಮಾಡಬೇಕು. ಏಕೆಂದರೆ ಕೈಮಗ್ಗ ನೇಕಾರರಾದ ಈ ಬಡವರು, ಕೈಮಗ್ಗ ಉದ್ದಿಮೆಯೇ ಬಿಕ್ಕಟ್ಟಿನಲ್ಲಿರುವಾಗ ೧೫ ತಿಂಗಳು ಸತತ ೧೦೦೦ ರೂ. ತಿಂಗಳೂ ತೆರಲು ಸಾಧ್ಯವಿಲ್ಲ ಎಂದು ಸಿ.ಪಿ.ಐ.(ಎಂ) ಉಪರಾಜ್ಯಪಾಲರಿಗೆ ಮನವಿ ಅರ್ಪಿಸಿದೆ ಹಗರಣಕ್ಕೆ ಸಂಬಂಧಿಸಿದ ಕಾಂಗ್ರೆ ಮುಖಂಡರು ಹಾಗೂ ಡಿ.ಡಿ.ಎ. ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ನಡೆಸಬೇಕೆಂದೂ ರಾಜ್ಯಸಮಿತಿ ಒತ್ತಾಯಿಸಿದೆ.

ಹೆಂಡ ರದ್ದಿನಿಂದ ಹತ್ತಾರು ಸಾವಿರ ಸಂಸಾರಗಳ ಜೀವನಕ್ಕೆ ಕುತ್ತು

ಹೆಂಡದ ಅಥವಾ ಕಳ್ಳಿನ ಮಾರಾಟವನ್ನು ವೀರೇಂದ್ರ ಪಾಟೀಲರ ಸರ್ಕಾರ ಪ್ರತಿಬಂಧಿಸಿ ಅದನ್ನು ಜನವಿರೋಧಿ ಕ್ರಮವೆಂದು ಬಣ್ಣಿಸುವ ಯತ್ನ ಮಾಡಿದೆ. ಆದರೆ ಇದರಿಂದ ಸಣ್ಣಪುಟ್ಟ ಕಂಟ್ರಾಕ್ಟರು ಗಳ ಮೇಲೆ ಧಾಳಿ ಮಾಡಿ ಅವರ ಮತ್ತು ಹೆಂಡತಯಾರಿಕೆಯಲ್ಲಿ ಜೀವನ ನಿರ್ವಹಿಸುತ್ತಿರುವ ರಾಜ್ಯಾದ್ಯಾಂತ ಹತ್ತಾರು ಸಾವಿರ ಕುಟುಂಬಗಳ ಮೇಲೆ ಧಾಳಿ ಮಾಡ ದಂತಾಗಿದೆ. ಮತ್ತು ದೊಡ್ಡ ಸರಾಯಿ ಗುತ್ತೇದಾರರ ಲಾಭಕ್ಕೆ ಅವರ ಜೀವನವನ್ನು ಬಲಿ ಕೊಟ್ಟಂತಾಗಿದೆ. ಎಂದು ಅಭಿಪ್ರಾಯ ಪಟ್ಟಿದೆ. ಆದುದರಿಂದ ಈ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ರಾಜ್ಯ ಸಮಿತಿ ಒತ್ತಾಯಿಸಿದೆ. ಆದರೆ ಮರಗಳೇ ಬಗದಿರುವ ಕೆಲವು ಜಿಲ್ಲೆಗಳಲ್ಲಿ ವ್ಯಾಪಕ ಕಲಬೆರಕೆ ಮತ್ತದರಿಂದ ಉಂಟಾಗುವ ಆರೋಗ್ಯ ಹಾನಿಯ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

"ಟಿಪ್ಪು ಸುಲ್ತಾನ್" ಧಾರಾವಾಹಿಯ ಪ್ರಸಾರ

ಟಿಪ್ಪು ಸುಲ್ತಾನ್ ಬಗ್ಗೆ ಟಿ.ವಿ. ಧಾರಾವಾಹಿಯ ಪ್ರಸಾರವನ್ನು ತಡೆಯುವ ಪ್ರಯತ್ನ ಕೋಮು ಭಾವೋದ್ರೇಕವನ್ನು ಎಬ್ಬಿಸಲು ಇತಿಹಾಸದ ಮೊರೆ ಹೋಗುವ ಇನ್ನೊಂದು ಪ್ರಯತ್ನ ಎಂದು ಇತಿಹಾಸ ಕಾರರು ಅಭಿಪ್ರಾಯ ಪಟ್ಟಿದ್ದಾರೆ.

ಟಿಪ್ಪು ಬ್ರಿಟಿಷರ ಸಾಮ್ರಾಜ್ಯ ಶಾಹೀ ತಂತ್ರಗಳನ್ನು ಅರ್ಥ ಮಾಡಿಕೊಂಡು ಈಸ್ಟ್ ಇಂಡಿಯಾ ಕಂಪೆನಿಯ ರಾಜಕೀಯ ಆಕಾಂಕ್ಷೆಗಳನ್ನು ವಿಫಲಗೊಳಿಸಲು ಇತರ ಭಾರತೀಯ ಆಳರಸರನ್ನು ಒಟ್ಟುಗೂಡಿಸಲು ಯತ್ನಿಸಿದ ಹದಿನೆಂಟನೇ ಶತಮಾನದ ಕೆಲವೇ ಭಾರತೀಯ ರಾಜರುಗಳಲ್ಲಿ ಒಬ್ಬಾತ. ತನ್ನ ಬಹುಪಾಲು ಸಮಕಾಲೀನರಿಗೆ ಇಲ್ಲದ ಒಂದು ಅರಿವು, ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಅರಿವು ಆತನಿಗಿತ್ತು. ತನ್ನ ಅಧಿಕಾರವನ್ನು ಕ್ರೋಡೀಕರಿಸಲು, ತನ್ನ ರಾಜ್ಯದ ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಫ್ರಾನ್ಸ್‌ಗೆ ಆತ ಕಳುಹಿಸಿದ ನಿಯೋಗದ ಸ್ವರೂಪದಿಂದ ಇದು ವೇದ್ಯವಾಗುತ್ತದೆ ಎಂದು ಈ ಇತಿಹಾಸಕಾರರು ಹೇಳಿದ್ದಾರೆ.

ಈ ಆಯಾಮಗಳನ್ನು ನಿರ್ಲಕ್ಷಿಸಿ, ಆತ ಹಲವಾರು ಹಿಂದೂ ದೇವಸ್ಥಾನಗಳಿಗೆ ಉಂಬಳಿ ನೀಡಿದ್ದಾನೆಂಬುದನ್ನೂ ನಿರ್ಲಕ್ಷಿಸಿ ಆತನೊಬ್ಬ ಧಾರ್ಮಿಕ ಅಂಧಾಭಿಮಾನಿ ಎಂದು ಚಿತ್ರಿಸುವುದೆಂದರೆ ಆ ಸಮಯದ ರಾಜಕೀಯ, ಸಾಮಾಜಿಕ ಸಂದರ್ಭದಲ್ಲಿ ಆತನ ಮಹತ್ವವನ್ನೂ ಅಲ್ಲಗಳೆದಂತೆಯೇ ಎಂದು ಅವರು ಹೇಳಿದ್ದಾರೆ. ಈ ಧಾರಾವಾಹಿಯ ಪ್ರಸಾರವನ್ನು ವಿರೋಧಿಸುವವರು ಆತನ ಮಲಬಾರ್ ಅತಿಕ್ರಮಣವನ್ನು ಉದಾಹರಿಸುತ್ತಾರೆ. ಈ ಬಗ್ಗೆ ಇತಿಹಾಸಕಾರರ ಅಭಿಪ್ರಾಯವೇನು? ಅವರ ಪ್ರಕಾರ ಇದೊಂದು ಧಾರ್ಮಿಕ ಕಾರ್ಯಾಚರಣೆಯಲ್ಲ, ರಾಜಕೀಯ ಕಾರ್ಯಾಚರಣೆ ಇದು ತಟ್ಟಿದ್ದು ಕೇವಲ ಹಿಂದೂಗಳನ್ನಲ್ಲ, ಮುಸ್ಲಿಮರನ್ನು ತಟ್ಟಿತ್ತು. ಮಲಬಾರಿನಲ್ಲಿ ಟಿಪ್ಪುವಿನ ರಾಜಕೀಯ ಅಧಿಕಾರಕ್ಕೆ ಮತ್ತು ಆಡಳಿತ ಕ್ರಮಗಳಿಗೆ ಪ್ರತಿರೋಧ ಮುಸ್ಲಿಮರಿಂದಲೂ ಬಂದಿತ್ತು. ಅಥಾನ್ ಗುರುಕ್ಕಳ್ ಎಂಬ ಮುಸ್ಲಿಂ ಪಾಳೇಗಾರ ಟಿಪ್ಪುವಿನ ವಿರುದ್ಧ ಬಂಡಾಯವೊಂದರ ನೇತೃತ್ವ ವಹಿಸಿದ್ದ ಕೂಡಾ. ಅದೇನೇ ಇರಲಿ, ಮಲಬಾರಿನಲ್ಲಿ ಟಿಪ್ಪು ಮಾಡಿದ ಕೆಲಸ ಮರಾಠರು ರಾಜಪುತಾನಾದಲ್ಲಿ ಮಾಡಿದುದಕ್ಕಿಂತ ಕಠೋರವಾದದ್ದೇನೂ ಅಲ್ಲ ಎಂಬುದರತ್ತ ಈ ಇತಿಹಾಸಕಾರರು ಜನರ ಗಮನ ಸೆಳೆದಿದ್ದಾರೆ.

ಈ ಧಾರಾವಾಹಿಯನ್ನು ಪ್ರಸಾರ ಮಾಡಬೇಕೇ ಬೇಡವೇ ಎಂಬುದನ್ನು ಅದರ ಗುಣಮಟ್ಟ ಮೇಲಿಂದಷ್ಟೇ ನಿರ್ಧರಿಸಬೇಕು. ನಮ್ಮ ಇತಿಹಾಸದ ಬಗ್ಗೆ ಒಂದು ಕೋಮು ದೃಷ್ಟಿಯಿಂದ ಈ ನಿರ್ಣಯ ಪ್ರಭಾವಿತಗೊಳ್ಳಬಾರದು ಎಂದು ಹೇಳಿರುವ ಇತಿಹಾಸಕಾರರ ಈ ಹೇಳಿಕೆಗೆ ಸಹಿ ಹಾಕಿದವರೆಂದರೆ ಕೆ.ಎನ್. ಪಣಿಕ್ಕರ್ ಸುಮಿತ್ ಸರ್ಕಾರ್, ಮುಶಿರುಲ್ ಹಸನ್, ಎಸ್. ಭಟ್ಟಾಚಾರ್ಯ ಮತ್ತು ಶ್ರೀಮತಿ ಎ.ಜಿ. ಸೈಯದ್.

ಈ ಧಾರಾವಾಹಿಯ ತಯಾರಿಕೆಯ ಹಂತದಲ್ಲಿ ಮೈಸೂರಿನಲ್ಲಿ ಉಂಟಾದ ಭೀಕರ ಅಗ್ನಿ ದುರಂತದಲ್ಲಿ ಅಪಾರ ಸಾವು ನೋವುಗಳಿಗೆ ಹಲವು ತಿಂಗಳು ಕಳೆದರೂ ಧಾರಾವಾಹಿ ತಯಾರಕರು ಇನ್ನೂ ಪರಿಹಾರ ನೀಡಿಲ್ಲ. ಆದರೆ ಈ ಕಾರಣಕ್ಕಾಗಿ ಧಾರಾವಾಹಿಯನ್ನು ಪ್ರಸಾರ ನಡೆಸಬಾರದೆಂದು ಒತ್ತಾಯಿಸುವುದು ಕೋಮುವಾದಿಗಳಿಗೆ ಪರೋಕ್ಷ ಬೆಂಬಲ ನೀಡಿದಂತಾಗುತ್ತದೆ. ಈ ಅಗ್ನಿ ದುರಂತದಲ್ಲಿ ತೀವ್ರವಾಗಿ ನೊಂದವರಿಗೆ ಸರಿಯಾದ ಪರಿಹಾರ ವಿಳಂಬವಿಲ್ಲದೆ ಸಿಗುವಂತೆ ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು.

ರಾಜ್ಯ ಸಮಿತಿ ಕರೆ

ಪುಟ ೧ ರಿಂದ

ಪ್ರಯತ್ನ ನಂತರ ಅವರ ವಯೋಮಿತಿಯನ್ನು ೫೮ ರಿಂದ ೫೫ ಕ್ಕೆ ಇಳಿಸುವ ಪ್ರಯತ್ನ, ತುರ್ತು ಪರಿಸ್ಥಿತಿಯಲ್ಲಿ ಕುಪ್ರಸಿದ್ಧವಾಗಿದ್ದ ಕೆ.ಪಿ.ಎಸ್.ಆರ್. ೨೮ರ ಕಲಂ ಉಪಯೋಗದ ಘೋಷಣೆ ಇತ್ತೀಚೆಗೆ ಕೆ.ಪಿ.ಸಿ. ಇಂಜನಿಯರ್‌ಗಳ ಮುಷ್ಕರದ ಬ್ಯಾನ್ ಪ್ರಯತ್ನ ಇತ್ಯಾದಿಗಳಲ್ಲಿ ವ್ಯಕ್ತವಾಗಿರುವ ಪಾಟೀಲ್ ಸರ್ಕಾರ ಕಟ್ಟಾ ನೌಕರ ವಿರೋಧಿತನವನ್ನು ನೀಡಿದೆ.

ವಿದ್ಯುತ್ ಕ್ಷಾಮ ಹಾಗೂ ಕುಡಿಯುವ ನೀರಿನ ಅಭಾವ:

ಕರ್ನಾಟಕದ ಜನತೆಯನ್ನು ಅತೀವ ವಿದ್ಯುತ್ ಕ್ಷಾಮ, ಕುಡಿಯುವ ನೀರಿನ ಅಭಾವ ತೀವ್ರವಾಗಿ ಕಾಡಲಾರಂಬಿಸಿವೆ. ರಾಜ್ಯ ಸರ್ಕಾರ ಜನರ ಅತೀವ ಸಂಕಷ್ಟವನ್ನು ನಿವಾರಿಸಲು ತುರ್ತು ಪರಿಹಾರ ಒದಗಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸಮಿತಿ ಒತ್ತಾಯಿಸಿದೆ. ಈ ಬಗ್ಗೆ ಬಜೆಟ್‌ನಲ್ಲಾಗಲೀ ಇತರ ಸಂದರ್ಭಗಳಲ್ಲಾಗಲೀ ಸರ್ಕಾರ ಗಮನ ಹರಿಸದಿರುವುದನ್ನು ಖಂಡಿಸುತ್ತದೆ. ದೀರ್ಘಕಾಲೀನ ಯೋಜನೆಗಳ ಬಗ್ಗೆ ಅದ್ಯ ಗಮನ ನೀಡಬೇಕೆಂದು ಒತ್ತಾಯಿಸಿದೆ.

ವಿಕೇಂದ್ರಿಕರಣ ವಿರೋಧಿ ಅಧಿಕಾರ ಶಾಹಿ ಮನೋಭಾವ:

ರಾಜ್ಯ ಸರ್ಕಾರ ಅದರಲ್ಲಿಯೂ ಗ್ರಾಮಾಭಿವೃದ್ಧಿ ಮಂತ್ರಿಗಳಾದ ಬಸವಲಿಂಗಪ್ಪನವರು ಪ್ರಜಾಸತ್ತೆಯ ಪ್ರಾಥಮಿಕ ಪರಿಕಲ್ಪನೆಗಳನ್ನೂ ಮೀರಿ ಅಧಿಕಾರಿ ವಿಕೇಂದ್ರಿಕರಣದಿಂದಾಗಿ ತನ್ನ ಮಂತ್ರಿ ಶಾಖೆಗೆ ಜನ ಎಡತಾಕದಿರುವುದನ್ನು ಕಂಡು ಹಳಹಳಿಸುತ್ತಾ ದಿನಕ್ಕೊಂದು ದರ್ಪದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸುತ್ತೋಲೆಗಳನ್ನು ಹೊರಡಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಕಾಂಗ್ರೆ ಪಕ್ಷದ ಹಾಗೂ ಸರ್ಕಾರದ ಮೌನ ಹಾಗೂ ಅದೇ ಧೋರಣೆಯ ಹೇಳಿಕೆಗಳು ಜಿಲ್ಲಾ ಪರಿಷತ್ ವ್ಯವಸ್ಥೆಯ ವಿರುದ್ಧ ಎಸಗುತ್ತಿರುವ ಧಾಳಿಗಳಿಗೆ ಪುಷ್ಟಿ ನೀಡಿದಂತಾಗಿದೆ. ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದ ಬಗ್ಗೆ ಅತಿ ದೊಡ್ಡ ನಾಟಕವಾಡಿದ ಈ ಪಕ್ಷದ ಅಪ್ಪಟ ಸರ್ವಾಧಿಕಾರಿ ಧೋರಣೆಯನ್ನು ರಾಜ್ಯ ಸಮಿತಿ ಖಂಡಿಸಿದೆ. ಇಂತಹ ಧೋರಣೆಯ ಬಗ್ಗೆ ಗ್ರಾಮಾಂತರ ಜನತೆ ಎಚ್ಚರಗೊಳ್ಳಬೇಕೆಂದು ಕರೆ ನೀಡಿದೆ.



ಏಪ್ರಿಲ್ ೫ರಂದು

ಪುಟ ೧ ರಿಂದ

ದುಡಿಯುವ ಮಹಿಳೆಯರ ಸಮಾವೇಶ.

ಕಾರ್ಖಾನೆಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಹಾಗೂ ಬೀಡಿ, ನೇಯ್ಗೆ, ತೋಟ, ಅಂಗನವಾಡಿ ಮೊದಲಾದ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲು ೯.೪.೯೦ರಂದು ರಾಜ್ಯ ಮಟ್ಟದ ಒಂದು ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಗಿದೆ. ದುಡಿಯುವ ಮಹಿಳೆಯರು ಕೆಲಸ ಕಳೆದುಕೊಂಡು ಅಸಂಘಟಿತ ಕ್ಷೇತ್ರಕ್ಕೆ ತಳ್ಳಲ್ಪಡುತ್ತಿರುವುದು, ಅವರಿಗೆ ಕಾರ್ಮಿಕ ಕಾನೂನುಗಳು ಜಾರಿ ಆಗದಿರುವ ಬಗ್ಗೆ ಈ ಸಮಾವೇಶದಲ್ಲಿ ಚರ್ಚಿಸಿ ರಾಜ್ಯ ಸರ್ಕಾರಕ್ಕೆ, ಮನವಿ ಸಲ್ಲಿಸುವ ಉದ್ದೇಶ ಇಟ್ಟುಕೊಂಡಿರುವ ಈ ಸಮಾವೇಶದಲ್ಲಿ ರಾಜ್ಯದ ಸುಮಾರು ೨,೦೦೦ ದುಡಿಯುವ ಮಹಿಳೆಯರು ಭಾಗವಹಿಸುವ ನಿರೀಕ್ಷೆಯಿದೆ.

ಬೀಡಿ ಕಾರ್ಮಿಕರಿಗೆ "ಗ್ಯಾರಂಟೀಡ್ ವೇಜಸ್"

ರಾಜ್ಯದ ಲಕ್ಷಾಂತರ ಬೀಡಿ ಕಾರ್ಮಿಕರು ಕಳೆದ ಕೆಲವು ತಿಂಗಳುಗಳಿಂದ ವಾರಕ್ಕೆ ೬ ದಿನಗಳ ಕೆಲಸ ಸಿಗದಂತಾಗಿ ಉಪವಾಸ ಬೀಳುವ ಪರಿಸ್ಥಿತಿ ಬಂದಿದೆ. ಕಟ್ಟಿದ್ದ ಬೀಡಿ ಸ್ಟಾಕು ಬಹಳ ಇದೆ, ಮಾರುಕಟ್ಟೆಯಲ್ಲಿ ಬೀಡಿ ಮಾರಾಟ ಮೊದಲಿನಷ್ಟು ಆಗುತ್ತಿಲ್ಲ ಎಂಬ ಕಾರಣ ಕೊಟ್ಟು ಬೀಡಿ ಮಾಲೀಕರು ಕಾರ್ಮಿಕರಿಗೆ ಕೆಲಸ ಕಡಿಮೆ ಮಾಡಿದ್ದಾರೆ. ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಪ್ರಕಟಣೆಯ ಪ್ರಕಾರ ಕೆಲಸ ಒದಗಿಸಲಾರದ ಪ್ರತಿದಿನಕ್ಕೆ ರೂ ೬.೫೦ ಮತ್ತು ತುಟ್ಟಿಭತ್ಯೆಯನ್ನು "ಗ್ಯಾರಂಟೀಡ್ ವೇಜಸ್" ರೂಪದಲ್ಲಿ ಕೊಡಬೇಕೆಂದು ಕಾನೂನು ಇದ್ದರೂ ಬೀಡಿ ಮಾಲೀಕರು ಇದನ್ನು ಜಾರಿಗೊಳಿಸುತ್ತಿಲ್ಲ. ಕಾರ್ಮಿಕ ಇಲಾಖೆ ಈ ಬಗ್ಗೆ ಯಾವುದೇ ಕ್ರಮ ವಹಿಸುತ್ತಿಲ್ಲ. ಬೀಡಿ ಕಾರ್ಮಿಕರಿಗೆ ಕೆಲಸ ಕೊಡಲಾಗದ ದಿನಗಳಿಗೆ "ಗ್ಯಾರಂಟೀಡ್ ವೇಜಸ್" ಕೊಡಬೇಕೆಂದು ಒತ್ತಾಯಿಸಲು ರಾಜಾದ್ಯಂತ ೧೬.೪.೧೯೯೦ ಗ್ಯಾರಂಟೀಡ್ ವೇಜಸ್ ದಿನ ಆಚರಿಸಲು ಕರೆ ನೀಡಲಾಗಿದೆ. ಅಂದು ಬೀಡಿ ಕಾರ್ಮಿಕ ಕೇಂದ್ರಗಳಲ್ಲಿ ತೀವ್ರ ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸ ಲಾಗುವುದು.

ಹಾಸನದಲ್ಲಿ ಕಾಫಿ ಕ್ಯೂರಿಂಗ್ ಕಾರ್ಮಿಕರ ಸಮಾವೇಶ.

ಮಳೆ ಅಭಾವದಿಂದ ಕಾಫಿ ಬೆಳೆ ಈ ಸಲ ತೀವ್ರ ಕುಸಿದಿದ್ದು ಅದರ ಪರಿಣಾಮ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೂ ಕಾಫಿ ಕ್ಯೂರಿಂಗ್ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೂ ಆಗಿದೆ. ಕಾಫಿ ಕ್ಯೂರಿಂಗ್ ಕಾರ್ಖಾನೆಗಳಲ್ಲಿ ಹೊಸ ಹೊಸ ಯಂತ್ರಗಳನ್ನು ಅಳವಡಿಸಲು ಪ್ರಯತ್ನ ನಡೆದಿದ್ದು ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಅಪಾಯ ಬಂದಿದೆ. ಏಪ್ರಿಲ್ ತಿಂಗಳಲ್ಲಿ ಹಾಸನದಲ್ಲಿ ಕಾಫಿ ಕ್ಯೂರಿಂಗ್ ಕಾರ್ಮಿಕರ ಒಂದು ರಾಜ್ಯ ಮಟ್ಟದ ಸಮಾವೇಶ ನಡೆಸಿ ಸಮಸ್ಯೆಯ ಪರಿಹಾರಕ್ಕೆ ಹೋರಾಟದ ಕಾರ್ಯಕ್ರಮ ರೂಪಿಸಲು ಸಿ.ಐ.ಟಿ.ಯು. ರಾಜ್ಯ ಸಮಿತಿ ತೀರ್ಮಾನಿಸಿದೆ.

ಕನಿಷ್ಟ ಕೂಲಿ ಕಾಯ್ದೆಗೆ ಕಾರ್ಮಿಕರ ಹೋರಾಟ

ಕಳೆದ ಆಗಸ್ಟ್ ತಿಂಗಳಲ್ಲಿ ಆರಂಭಿಸಲಾದ ಕನಿಷ್ಠ ಕೂಲಿ ಕಾಯ್ದೆಗೆ ಒಳಪಡುವ ಕಾರ್ಮಿಕರ ಚಳವಳಿಯನ್ನು ತೀವ್ರವಾಗಿ ಮುಂದುವರಿಸಲು ತೀರ್ಮಾನಿಸಲಾಗಿದ್ದು ಮೇ ತಿಂಗಳಲ್ಲಿ ಎರಡನೇ ಹಂತದ ಸಮಾವೇಶಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಮಾವೇಶಗಳಲ್ಲಿ ಬೀಡಿ, ನೇಯ್ಗೆ, ತೋಟ ಅಲ್ಲದೆ ಅಂಗನವಾಡಿ ಕಾರ್ಯಕರ್ತೆಯರು ಮಂಡಲ ಪಂಚಾಯಿತಿ ನೌಕರರು, ಆರೋಗ್ಯ ಸಮುದಾಯ ಮಾರ್ಗದರ್ಶಿಗಳು ಮೊದಲಾದ ಗ್ರಾಮೀಣ ಕಾರ್ಮಿಕರನ್ನು ಸಂಘಟಿಸಲು ವಿಶೇಷ ಗಮನ ನೀಡಲಾಗುವುದು. ಸಮಾವೇಶಗಳ ನಂತರ ಕನಿಷ್ಟ ಕೂಲಿ ಪರಿಷ್ಕರಿಸಿ ಪ್ರಕಟಿಸುವಂತೆ ಒತ್ತಾಯಿಸಿ ತೀವ್ರ ಹೋರಾಟಕ್ಕೆ ಕರೆ ನೀಡಲಾಗುವುದು.

ಮೇ ದಿನಾಚರಣೆಯ ಶತಮಾನೋತ್ಸವ.

೧೮೯೦ರಿಂದ ಆಚರಿಸಲಾಗುತ್ತಿರುವ ಮೇ ದಿನದ ಆಚರಣೆಗೆ ಒಂದು ನೂರು ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ರಾಜ್ಯಾದ್ಯಂತ ಮೇ ದಿನದ ನಿಮಿತ್ತ ಇಡೀ ತಿಂಗಳು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಏರ್ಪಡಿಸಲು ಎಲ್ಲಾ ಕಾರ್ಮಿಕ ಸಂಘಗಳಿಗೆ ಕರೆ ನೀಡಲಾಗಿದೆ.

ಪ್ಲಾಯ್‌ವುಡ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ವೇತನದ ಪರಿಷ್ಕರಣದ ಬೇಡಿಕೆಗಾಗಿ ಮುಷ್ಕರ ನಡೆಸುತ್ತಿರುವ ಧಾರವಾಡ, ದಾಂಡೇಲಿ, ಹಂಗರಕಟ್ಟೆ ಮತ್ತು ನಟ್ಟಾಣದ ಇಂಡಿಯನ್ ಪ್ಲಾಯ್‌ವುಡ್ ಕಾರ್ಮಿಕರ ಹೋರಾಟಕ್ಕೆ ಸಿ.ಐ.ಟಿ.ಯು. ರಾಜ್ಯ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ದಾಂಡೇಲಿ ನಗರದಲ್ಲಿ, ಪೋಲೀಸರ ನೆರವು ಪಡೆದು ಮುಷ್ಕರ ಮುರಿಯಲು ಆಡಳಿತ ವರ್ಗ ನಡೆಸಿರುವ ಪ್ರಯತ್ನವನ್ನು ಖಂಡಿಸಿರುವ ಸಮಿತಿಯು ರಾಜ್ಯದ ಎಲ್ಲಾ ಸಿ.ಐ.ಟಿ.ಯು. ಕಾರ್ಮಿಕರ ಸಂಘಗಳು ಈ ಹೋರಾಟವನ್ನು ಬೆಂಬಲಿಸಬೇಕೆಂದು. ಕರೆ ನೀಡಿದೆ.

ಮೈಸೂರಿನ ಶಿವಮೊಗ್ಗ ಸ್ಟೀಲ್ಸ್ ಕಾರ್ಮಿಕರ ಹೋರಾಟಕ್ಕೆ ಸಿ.ಐ.ಟಿ.ಯು. ರಾಜ್ಯ ಸಮಿತಿ ಬೆಂಬಲ ವ್ಯಕ್ತಪಡಿಸುತ್ತಾ ಅಲ್ಲಿ ಕಾರ್ಮಿಕರ ಮೇಲೆ ನಡೆಸಲಾಗುತ್ತಿರುವ ಗೂಂಡಾಗಿರಿಯನ್ನು ಖಂಡಿಸಿದೆ.

ದಿನಾಂಕ ೩೦.೦೩.೯೦ ರಂದು "ವಿಧಾನಸೌಧಾ ಚಲೋ" ಹೋರಾಟವನ್ನು ರೂಪಿಸಿರುವ ರಾಜ್ಯ ಮಂಡಲ ಪಂಚಾಯಿತಿ ನೌಕರರ ಹೋರಾಟಕ್ಕೆ ಸಿ.ಐ.ಟಿ.ಯು. ರಾಜ್ಯ ಸಮಿತಿ ಬೆಂಬಲ ವ್ಯಕ್ತ ಪಡಿಸಿದೆ.

ಇ.ಎಸ್.ಐ. ಅಡಿಯಲ್ಲಿ ಯೋಗ್ಯ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಆ ಇಲಾಖೆಯಲ್ಲಿ ನಡೆಸುತ್ತಿರುವ ಭ್ರಷ್ಟಾಚಾರವನ್ನು ವಿರೋಧಿಸಿ ರಾಜ್ಯದ ಕಾರ್ಮಿಕರು ಸ್ಥಳೀಯ ಮಟ್ಟದಲ್ಲಿ ಹೋರಾಟಗಳನ್ನು ರೂಪಿಸಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಕರೆ ನೀಡಿದೆ.

ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಈ ವಾರ

★ ಪ್ರಸ್ತಾವಿತ ಬಜೆಟ್‌ನಲ್ಲಿ ಬೆಲೆಯನ್ನು ಲೀಟರ್ ಒಂದಕ್ಕೆ ೧.೨೫ ರೂಗಳಷ್ಟು ಏರಿಸಿರುವ ಹಿನ್ನೆಲೆಯಲ್ಲಿ ಮಹಾನಗರಗಳಲ್ಲಿ ಪೆಟ್ರೋಲ್ ಚಿಲ್ಲರೆ ಬೆಲೆಯನ್ನು ದಿಢೀರನೆ ಇಂದೇ ಏರಿಸಲಾಗಿದೆ ಕಲ್ಕತ್ತೆಯಲ್ಲಿ ಈ ಏರಿಕೆ ಕನಿಷ್ಠ (ರೂ.೧.೬೮), ಬೆಂಗಳೂರಿನಲ್ಲಿ ಇದು ಗರಿಷ್ಠ (ರೂ ೧.೫೦ ರಷ್ಟು)

-ಪಿ.ಟಿ.ಐ. ಸುದ್ದಿ, ಮಾರ್ಚ್ ೧೯

★ ೩೭೦ ನೇ ಕಲಮು ಕಾಶ್ಮೀರಕ್ಕೆ ವಿಶೇಷ ದರ್ಜೆ ನೀಡಿದೆ ಎಂಬುದಕ್ಕಿಂತ ಸತ್ಯದೂರವಾದ ಮಾತು ಬೇರೊಂದಿರಲಾರದು. ಇದನ್ನು ರದ್ದು ಮಾಡುವುದು ಕಾರ್ಯಸಾಧ್ಯವಾದದ್ದಲ್ಲ. ಕಾರ್ಯಸಾಧ್ಯವಾದರೂ ಕೂಡ ಅದು ಭಾರತಕ್ಕೆ ಗಂಭೀರ ಕಾನೂನಿನ ಅಪಾಯ ತಂದು ನಾವೇ ಕಾಶ್ಮೀರ ಸಮಸ್ಯೆಯನ್ನು ಅಂತರಾಷ್ಟ್ರೀಯ ಸಮಸ್ಯೆಯನ್ನಾಗಿ ಮಾಡಿದಂತಾಗುತ್ತದೆ.

-ಇಂಡಿಯಾ ಟುಡೇ"ಯಲ್ಲಿ ಸಂಪಾದಕೀಯ

★ ತನ್ನ ಆಳ್ವಿಕೆಯಲ್ಲಿ ಕಾಶ್ಮೀರದ ಸ್ಥಿತಿ ಇಷ್ಟೊಂದು ತೀವ್ರ ಮಟ್ಟದಲ್ಲಿರಲಿಲ್ಲ ಎಂದು ರಾಜೀವಗಾಂಧಿ ಸಂಸತ್ತಿನಲ್ಲಿ ಹೇಳಿಕೊಳ್ಳುತ್ತಿದ್ದಾಗ ಕಳೆದ ಆಗಸ್ಟ್ ೧೫ರಂದು ಏನುನಡೆಯಿತು ಎಂಬುದನ್ನು ಸುಲಭವಾಗಿ ಮರೆತುಬಿಟ್ಟಿದ್ದಾರೆ.....ದೇಶದ ಸಮಗ್ರತೆಗೆ ಬೆದರಿಕೆ ಬಂದಿರುವಾಗ ಈ ರೀತಿಯ ಅಪ್ರಾಮಾಣಿಕತೆ ರಾಜಕೀಯ ನೀಚತನದ ಆಳವನ್ನು ತೋರಿಸುತ್ತದೆ.

-ನಿಖಿಲ್ ಚಕ್ರವರ್ತಿ, 'ಟೈಸ್ ಆಫ್ ಇಂಡಿಯಾ' ಲೇಖನವೊಂದರಲ್ಲಿ, ಮಾರ್ಚ್ ೨೫.

★ ಚೀನಾ ಭಾರತ ಸಂಬಂಧಗಳಲ್ಲಿ ಡಿಸೆಂಬರ್ ೧೯೮೮ ರಲ್ಲಿ ಆರಂಭಗೊಂಡ ಸುಧಾರಣೆ ಕ್ವಿಯಾನ್ ಕ್ವಿಚೆನ್‌ರವರ ಭೇಟಿಯೊಂದಿಗೆ ಇನ್ನೂ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ. ಚರಿತ್ರೆಯಲ್ಲಿ ಉಳಿದುಹೋದ ವಿಷಯಗಳನ್ನು ಶಾಂತಿಯುವಾಗಿ ಪರಸ್ಪರ ಮಾತುಕತೆಗಳಿಂದ ಪರಿಹರಿಸಿಕೊಳ್ಳಬೇಕೆಂದು ೫೦ ರ ದಶಕದ ಆರಂಭದಿಂದ ಹೇಳಿಕೊಂಡು ಬಂದ ನಿಲುವನ್ನು ಬೈಜಿಂಗ್ ಪುನರುಚ್ಚರಿಸಿರುವುದು ನವದೆಹಲಿಗೆ ಭರವಸೆ ನೀಡಿರುವ ಸಂಗತಿ.

ಟೈಂಸ್ ಆಫ್ ಇಂಡಿಯಾ ಮಾರ್ಚ್ ೨೬

★ ಗೋವೆ ಮತ್ತು ಮೇಘಾಲಯಗಳಲ್ಲಿ, ಈಚೆಗೆ ನಡೆದ ಸನ್ನಾಹಗಳು, ವಿದ್ಯಮಾನಗಳು ಈ ಎರಡು ಕಡೆ ಕಾಂಗ್ರೆ ಸರಕಾರಗಳನ್ನು ಕೆಳಗಿಳಿಸಿವೆ....ಕಾಂಗ್ರೆ ಪಕ್ಷ ರಾಷ್ಟ್ರೀಯ ಪಕ್ಷವಾಗಿ ತನ್ನ ನೆಲೆಯನ್ನು ಉದಾಸೀನದಿಂದಲೋ, ಉದ್ಧಟತನದಿಂದಲೋ ಕಳಕೊಳ್ಳುತ್ತಿದೆ ಎಂಬುದಕ್ಕೆ ಈ ಎರಡು ಪ್ರಕರಣಗಳು ಸಾಕ್ಷಿ.

-ಪ್ರಜಾವಾಣಿ, ಮಾರ್ಚ್ ೨೬

ಜಾತ್ಯಾತೀತತೆಯ ಮಾತನಾಡುವ ಪ್ರಧಾನಿಗಳ ನಿವಾಸದ ಎರಡೇ ಕಿಲೋಮೀಟರ್ ಅಂತರದಲ್ಲಿ ವಿಶ್ವ ಹಿಂದೂ ಪರಿಷತ್ತು ಒಂದು ಭೂಮಿ ವಿವಾದದಲ್ಲಿ ಆಕ್ರಮಣಕಾರಿ ರೀತಿಯಲ್ಲಿ ಮಧ್ಯಪ್ರವೇಶಿಸಿ ೭೦೦ ವರ್ಷಗಳಿಂದ ಹಜರತ್ ನಿಜಾಮುದ್ದೀನ್‌ರ ಸೂಫಿ ಪರಂಪರೆ ಪ್ರಭಾವದಿಂದ ನೆಲೆಸಿದ್ದ ಕೋಮು ಸೌಹಾರ್ದವನ್ನು ಧ್ವಂಸ ಮಾಡುತ್ತದೆ ಸ್ವಲ್ಪ ದೂರದ ಗುಜರಾತಿನಲ್ಲಿ ಜನತಾ ದಳ- ಬಿ.ಜೆ.ಪಿ. ಕೂಟದಲ್ಲಿ ಒಬ್ಬನಾದರೂ ಮುಸ್ಲಿಂ ಎಂ.ಎಲ್.ಎ. ಇಲ್ಲ.....

- ಅರವಿಂದ ಎನ್.ದಾಸ್. ಟೈಂಸ್ ಆಫ್ ಇಂಡಿಯಾ'ದ ಅಗ್ರಲೇಖನವೊಂದರಲ್ಲಿ

★ ವಿಶ್ವ ಹಿಂದೂ ಪರಿಷತ್ತು ಜಮಶೇದ್‌ಪುರದ ಘಟನೆಗಳಲ್ಲಿ, ಬಹಿರಂಗವಾಗಿಯೇ ತೊಡಗಿರುವುದು ಕಂಡು ಬಂದಿದೆ. ದಕ್ಷಿಣ ಬಿಹಾರಿನಲ್ಲಿ ಬಿ.ಜೆ.ಪಿ. ಗಮನಾರ್ಹ ಚುನಾವಣಾ ಬೆಂಬಲಗಳಿಸಿದ ಹಿನ್ನೆಲೆಯಲ್ಲಿ, ಇದನ್ನು ನೋಡಬೇಕು. ರಾಮನವಮಿ ಸಮೀಪಿಸುತ್ತಿದೆ....ಹಿಂದೂ ಭಾವನೆಗಳನ್ನು ಎಬ್ಬಿಸುತ್ತಿರುವುದು ಬಿ.ಜೆ.ಪಿ. ಯಲ್ಲ, ವಿಶ್ವಹಿಂದೂ ಪರಿಷತ್ತು ಎಂಬ ವಾದ ಯಾರನ್ನು ತೃಪ್ತಿಪಡಿಸದು.

-'ಟೈಸ್ ಆಫ್ ಇಂಡಿಯಾ' ಮಾರ್ಚ್ ೨೬

Printed and published by P.Ramachandra Rao on behalf of Communist party of India (Marxist), Karnataka State Committee L-56,